ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 5 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 198 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಪಾರಂಪರಿಕ ಕಟ್ಟಡಗಳ ದತ್ತು ಯೋಜನೆ: ಜಿಲ್ಲಾಧಿಕಾರಿಗಳಿಗೆ ಪಾರಂಪರಿಕ ತಜ್ಞರ ಸಲಹೆ



ಪ್ರೊ. ರಂಗರಾಜು ನೇತೃತ್ವದ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರನ್ನು ಗುರುವಾರ ಅಧಿಕೃತ ನಿವಾಸದಲ್ಲಿ ಭೇಟಿ ಮಾಡಿ, ಚರ್ಚಿಸಿದರು.

ಮೈಸೂರು, ನ. 4 (ಆರ್‌ಕೆ)– ಮೈಸೂರಿನ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಲು ದತ್ತು ಯೋಜನೆಯನ್ನು ಅನುಷ್ಠಾನಗೊಳಿಸಿ ಎಂದು ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದಲ್ಲಿ ಪ್ರೊ. ರಂಗರಾಜು ನೇತೃತ್ವದ ತಜ್ಞರ ಸಮಿತಿ ಸದಸ್ಯರೊಂದಿಗೆ ಗುರುವಾರ ಸಭೆ ನಡೆಸಿದ ಡಾ. ಕೆ.ವಿ. ರಾಜೇಂದ್ರ ಅವರಿಗೆ ಪಾರಂಪರಿಕ ನಗರಿ ಮೈಸೂರಿನಲ್ಲಿರುವ ಬಹುತೇಕ ಪಾರಂಪರಿಕ ಕಟ್ಟಡಗಳು ಸರಿಯಾಗಿ ನಿರ್ವಹಣೆಯಾಗದ ಕಾರಣ ಶಿಥಿಲಗೊಂಡು ಒಂದೊಂದಾಗಿ ಕುಸಿಯಲಾರಂಭಿಸಿವೆ ಎಂದು ತಿಳಿಸಿದರು.

ಈ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸಲು ದತ್ತು ನೀಡುವ ಯೋಜನೆ ಜಾರಿಗೊಳಿಸಿದರೆ ಇನ್ಫೋಸಿಸ್, ವಿಪ್ರೋ, ಟಿವಿಎಸ್, ಜೆಕೆ ಟೈರ್ಸ್‌ನಂತಹ ಬೃಹತ್ ಕಂಪನಿಗಳ ಉದ್ಯಮಿಗಳು ಸಿಎಸ್‌ಆರ್ ಅಡಿ ಹಣ ಖರ್ಚು ಮಾಡಿ ಪಾರಂಪರಿಕ ಕಟ್ಟಡಗಳನ್ನು ನಿರ್ವಹಿಸುವರು ಎಂದು ಪ್ರೊ. ರಂಗಸ್ವಾಮಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಪಾರಂಪರಿಕ ಕಟ್ಟಡಗಳ ನಿಯಮ 2020ರ ಪ್ರಕಾರ ಹೊರಗಿನ ಸ್ಟೇಕ್ ಹೋಲ್ಡರ್‌ಗಳು, ಎನ್‌ಆರ್‌ಐಗಳು, ಎನ್‌ಜಿಓಗಳಿಂದ ಹಣ ಕ್ರೋಢೀಕರಿಸಿ ಕಾರ್ಪಸ್ ಫಂಡ್ ಸೃಷ್ಟಿಸಿಕೊಂಡು ಪಾರಂಪರಿಕ ಕಟ್ಟಡಗಳ ದುರಸ್ತಿ, ಪುನರುಜ್ಜೀವನ ಮಾಡಿ ಸಂರಕ್ಷಿಸಲು ಅವಕಾಶವಿದೆ. ಹಾಗೆಯೇ ಅವುಗಳನ್ನು ದತ್ತು ನೀಡಬಹುದಾಗಿದೆ ಎಂಬುದನ್ನು ತಜ್ಞರು ಇದೇ ಸಂದರ್ಭ ನುಡಿದರು.

ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ 1961 ಮತ್ತು ವಲಯ ನಿಯಮಗಳು (ತಿದ್ದುಪಡಿ) 2020ರನ್ವಯ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಹೊರಗಿನವರಿಂದ ಪ್ರಾಯೋಜಕತ್ವ ಪಡೆಯಲು ಅವಕಾಶವಿದೆ. ನಮ್ಮ ಮೈಸೂರು ಫೌಂಡೇಷನ್ ಸಂಸ್ಥೆಯವರು ಕೆ.ಆರ್., ಚಾಮರಾಜೇಂದ್ರ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ಗಳನ್ನು ನಿರ್ವಹಣೆ ಮಾಡಲು ಬಯಸಿ ಕಳೆದ ಹಲವು ವರ್ಷಗಳಿಂದ ನಗರ ಪಾಲಿಕೆಗೆ ಮನವಿ ಮಾಡುತ್ತಿದ್ದರೂ ನೀಡಿಲ್ಲ ಎಂಬುದನ್ನೂ ಪ್ರೊ.ರಂಗರಾಜು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಹುಣಸೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸದ ಕಾಂಪೌಂಡ್ ಗೋಡೆ ಶಿಥಿಲಗೊಂಡಿದ್ದು, ಬೀಳುವ ಹಂತದಲ್ಲಿರುವುದರಿಂದ ಅದನ್ನು ತಳಮಟ್ಟದಿಂದ ತೆಗೆದು ಹಾಕಿ ಅದೇ ಪಾರಂಪರಿಕ ವಿನ್ಯಾಸದಲ್ಲಿ 3 ಅಡಿ ಎತ್ತರಕ್ಕೆ ಪುನರ್ ನಿರ್ಮಿಸಬೇಕೆಂದು ಸಲಹೆ ನೀಡಿದ ತಜ್ಞರ ಸಮಿತಿ ಸದಸ್ಯರು, ನಿವಾಸದ ಪಾರಂಪರಿಕ ಕಟ್ಟಡಕ್ಕೆ ಗೋಪಿ ಮತ್ತು ಬಿಳಿ ಬಣ್ಣ ಬಳಿಯಬೇಕೆಂದು ತಿಳಿಸಿದರು. ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ನಗರ ಯೋಜನಾ ಸಹಾಯಕ ನಿರ್ದೇಶಕ ಯಜ್ಞೇಂದ್ರ ಪುರಾತತ್ವ, ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ಉಪನಿರ್ದೇಶಕಿ ಮಂಜುಳಾ, ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರಾದ ರವಿ, ಗುಂಡೂರಾವ್, ಪ್ರೊ. ಶಕೀಬ್ ಉರ್ ರೆಹಮಾನ್, ಪ್ರೊ.ಲೋಕೇಶ್, ನರೇಂದ್ರ ಕುಮಾರ್, ಶರತ್ ಚಂದ್ರ, ನಮ್ಮ ಮೈಸೂರು ಫೌಂಡೇಷನ್ ಸಂಚಾಲಕ ದಶರಥ ಈ ಸಂದರ್ಭ ಉಪಸ್ಥಿತರಿದ್ದರು.

ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಬಜೆಟ್‌ನಲ್ಲಿ ಅನುದಾನ ಕೋರಿ ಸಿಎಂ ಬಳಿ ನಿಯೋಗ

ತಜ್ಞರ ಸಲಹಾ ಸಮಿತಿ ಸದಸ್ಯರ ಸಭೆಯಲ್ಲಿ ಮೇಯರ್ ಶಿವಕುಮಾರ್ ಪ್ರಕಟ



ಮೈಸೂರು, ನ. 4(ಆರ್‌ಕೆ)– ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳ ದುರಸ್ತಿ ಮತ್ತು ಸಂರಕ್ಷಣೆಗಾಗಿ ರಾಜ್ಯ ಬಜೆಟ್‌ನಲ್ಲಿ ಅನುದಾನ ಮೀಸಲಿಡುವಂತೆ ಕೋರಲು ಸದ್ಯದಲ್ಲೇ ಪಾಲಿಕೆ ಸದಸ್ಯರು, ತಜ್ಞರು ಹಾಗೂ ಅಧಿಕಾರಿಗಳ ನಿಯೋಗವನ್ನು ಮುಖ್ಯಮಂತ್ರಿ ಬಳಿ ಕರೆದೊಯ್ಯಲಾಗುವುದು ಎಂದು ಮೇಯರ್ ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರು ಮಹಾನಗರಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯರೊಂದಿಗೆ ಮೈಸೂರಿನ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳ ರಿಪೇರಿ ಮತ್ತು ಸಂರಕ್ಷಣೆ ಕುರಿತಂತೆ ಸಭೆ ನಡೆಸಿದ ಅವರು, ದೇವರಾಜ ಮಾರುಕಟ್ಟೆ ಲ್ಯಾನ್ಸ್‌ಡೌನ್ ಬಿಲ್ಡಿಂಗ್, ವಾಣಿವಿಲಾಸ ಮಾರುಕಟ್ಟೆ, ಅಗ್ನಿಶಾಮಕ ಠಾಣೆ, ಮಹಾರಾಣಿ ವಿಜ್ಞಾನ ಕಾಲೇಜು, ಪಾಲಿಕೆ ಪ್ರಧಾನ ಕಚೇರಿ, ವಿಶ್ವೇಶ್ವರಯ್ಯ ಬಿಲ್ಡಿಂಗ್, ದೊಡ್ಡ ಗಡಿಯಾರ, ಪುರಭವನ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡಿರುವುದರಿಂದ ಅವುಗಳ ದುರಸ್ತಿ ಮಾಡಿ ಸುಸ್ಥಿತಿಗೆ ತಂದು ಸಂರಕ್ಷಿಸಲು ತ್ವರಿತ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದರು.

ಪಾರಂಪರಿಕ ಕಟ್ಟಡಗಳ ನಿರ್ವಹಣೆ, ರಿಪೇರಿಗೆ ಹಣಕಾಸಿನ ಕೊರತೆ ಇರುವುದು ದೊಡ್ಡ ಸವಾಲಾಗಿರುವುದರಿಂದ ರಾಜ್ಯ ಬಜೆಟ್‌ನಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಅನುದಾನ ಮೀಸಲಿರಿಸುವಂತೆ ನಿಯೋಗ ಕರೆದೊಯ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸುತ್ತೇವೆ ಎಂದು ತಿಳಿಸಿದರು.

ಪಾಲಿಕೆ ಪ್ರಧಾನ ಕಚೇರಿ, ದೊಡ್ಡಗಡಿಯಾರ, ವಿವಿ ಮಾರ್ಕೆಟ್, ವಿಶ್ವೇಶ್ವರಯ್ಯ ಬಿಲ್ಡಿಂಗ್, ಟೌನ್‌ಹಾಲ್ ಅನ್ನು ಆದ್ಯತೆ ಮೇಲೆ ತುರ್ತಾಗಿ ರಿಪೇರಿ ಮಾಡಬೇಕಾಗಿರುವುದರಿಂದ ಸರ್ಕಾರದ ಅನುದಾನಕ್ಕೆ ಒತ್ತಾಯಿಸಲಾಗುವುದು. ಒಂದು ವೇಳೆ ತಡವಾದಲ್ಲಿ ಪಾಲಿಕೆ ಅನುದಾನದಲ್ಲೇ ಶೀಘ್ರ ಈ ಪಾರಂಪರಿಕ ಕಟ್ಟಡಗಳನ್ನು ದುರಸ್ತಿಗೊಳಿಸಿ ಸಂರಕ್ಷಿಸುತ್ತೇವೆ ಎಂದು ಮೇಯರ್ ಇದೇ ವೇಳೆ ನುಡಿದರು.

ಪಾರಂಪರಿಕ ತಜ್ಞ ಪ್ರೊ. ಎನ್.ಎಸ್. ರಂಗರಾಜು ನೀಡಿದ ಸಲಹೆ, ಮಾರ್ಗದರ್ಶನದಂತೆ ಪಾರಂಪರಿಕ ಕಟ್ಟಡಗಳ ದುರಸ್ತಿ ಮತ್ತು ಸಂರಕ್ಷಣಾ ವಿಧಾನದ ಬಗ್ಗೆ ಶೀಘ್ರ ಪಾಲಿಕೆ ಇಂಜಿನಿಯರ್‌ಗಳಿಗೆ ತರಬೇತಿ ಇಂಜಿನಿಯರ್‌ಗಳಿಗೆ ತರಬೇತಿ ಕಾರ್ಯಾಗಾರ ಏರ್ಪಡಿಸಲು ಶಿವಕುಮಾರ್ ಪಾಲಿಕೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಮಹೇಶ್ ಅವರಿಗೆ ಸೂಚಿಸಿದರು.

ಕೈಗಾರಿಕೋದ್ಯಮಿಗಳಿಂದ ಸಿಎಸ್‌ಆರ್ ಅಡಿ ಅನುದಾನ, ಪ್ರಾಯೋಜಕತ್ವ ಪಡೆಯುವುದು, ಸರ್ಕಾರೇತರ ಸಂಘ–ಸಂಸ್ಥೆಗಳ ನೆರವು ಪಡೆಯುವುದು, ನಮ್ಮ ಮೈಸೂರು ಫೌಂಡೇಷನ್ ಸಂಸ್ಥೆಗೆ ಪ್ರಮುಖ ರಸ್ತೆ ನಿರ್ವಹಣೆ ಜವಾಬ್ದಾರಿ, ಪಾರಂಪರಿಕ ಕಟ್ಟಡಗಳ ನಿರ್ವಹಣೆಗಾಗಿ ಪಾಲಿಕೆಯಲ್ಲಿ ಪ್ರತ್ಯೇಕ ಘಟಕ ಸ್ಥಾಪಿಸುವುದೂ ಸೇರಿದಂತೆ ಶೀಘ್ರ ಹಲವು ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಮೇಯರ್ ಇದೇ ವೇಳೆ ಭರವಸೆ ನೀಡಿದರು.

ಉಪಮೇಯರ್ ಡಾ. ರೂಪಾ, ಪಾಲಿಕೆ ಅಡಿಷನಲ್ ಡಿಸಿ ಎಂ.ಜಿ. ರೂಪಾ, ಸೂಪರಿಂಟೆಂಡೆಂಟ್ ಇಂಜಿನಿಯರ್ ಮಹೇಶ್, ನಗರ ಯೋಜನಾ ಜಂಟಿ ನಿರ್ದೇಶಕ ವೇಣುಗೋಪಾಲ್, ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯ ಪ್ರೊ. ಎನ್.ಎಸ್. ರಂಗರಾಜು, ನಮ್ಮ ಮೈಸೂರು ಫೌಂಡೇಷನ್ ಸಂಚಾಲಕ ದಶರಥ ಹಾಗೂ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂರಕ್ಷಣೆ ಎಂದರೆ ಕೆಡವಿ ಬರೀ ಪುನರ್ ನಿರ್ಮಿಸುವುದಲ್ಲ, ಪಾರಂಪರಿಕ ಕಟ್ಟಡ ದುರಸ್ತಿ ಜ್ಞಾನವಿರಬೇಕು

ಪಾಲಿಕೆ ಅಧಿಕಾರಿಗಳಿಗೆ ಪಾರಂಪರಿಕ ತಜ್ಞ ಪ್ರೊ. ಎನ್.ಎಸ್.ರಂಗರಾಜು ಕಿವಿಮಾತು

ಮೈಸೂರು, ನ.4(ಆರ್‌ಕೆ)– ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಎಂದರೆ ನೆಲಸಮಗೊಳಿಸಿ ಹೊಸದಾಗಿ ಕಟ್ಟುವುದಲ್ಲ, ರಿಪೇರಿ ಮಾಡಿ ಯಥಾಸ್ಥಿತಿಗೆ ತಂದು ನಿರ್ವಹಣೆ ಮಾಡುವುದಾಗಿದೆ ಎಂದು ಜಿಲ್ಲಾ ಪಾರಂಪರಿಕ ತಜ್ಞರ ಸಮಿತಿ ಸದಸ್ಯ ಪ್ರೊ. ಎನ್.ಎಸ್. ರಂಗರಾಜು, ಮೈಸೂರು ಪಾಲಿಕೆ ಇಂಜಿನಿಯರ್‌ಗಳಿಗೆ ಕಿವಿಮಾತು ಹೇಳಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಪಾರಂಪರಿಕ ಕಟ್ಟಡಗಳ ರಿಪೇರಿ, ನಿರ್ವಹಣೆ ಸಂರಕ್ಷಣೆ ಕುರಿತಂತೆ ಸಲಹೆ ನೀಡಿದ ಅವರು, ಮೈಸೂರಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ನಿರ್ದಿಷ್ಟ ಕಾರ್ಯಕ್ರಮವಾಗಬೇಕು. ಅದಕ್ಕೆ ಅಗತ್ಯ ಜ್ಞಾನದ ಅವಶ್ಯಕತೆ ಇದ್ದು, ಪಾಲಿಕೆ ಇಂಜಿನಿಯರ್‌ಗಳಿಗೆ ಸೂಕ್ತ ತಿಳುವಳಿಕೆ ನೀಡಬೇಕಾಗಿದೆ ಎಂದರು.

ಶಿಥಿಲಗೊಂಡ ಪಾರಂಪರಿಕ ಕಟ್ಟಡವನ್ನು ನೆಲಸಮಗೊಳಿಸಿ ಪುನರ್ ನಿರ್ಮಾಣ ಮಾಡುವುದೇ ಸಂರಕ್ಷಣೆಯಲ್ಲ. ಯಾವ ಸಲಕರಣೆ ಬಳಸಲಾಗಿದೆಯೋ ಅದನ್ನೇ ಬಳಸಿ ರಿಪೇರಿ ಮಾಡಿ ಪುನರುಜ್ಜೀವನಗೊಳಿಸಿ ಸರಿಯಾಗಿ ನಿರ್ವಹಣೆ ಮಾಡುವುದೇ ನಿಜವಾದ ಸಂರಕ್ಷಣೆ ಮಾರ್ಗ. ನಿಮಗೆ ಹಣ ಮತ್ತು ಸಂರಕ್ಷಿಸುವವರ ಕೊರತೆ ಇರಬಹುದು. ಪರಂಪರೆ ಬಗ್ಗೆ ತಿಳಿದಿರುವ ತಜ್ಞರು ನಮ್ಮಲ್ಲಿದ್ದಾರೆ. ಅವರ ಜ್ಞಾನ, ಸಲಹೆ ಪಡೆದುಕೊಂಡು ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕು ಎಂದು ಪ್ರೊ. ರಂಗರಾಜು ತಿಳಿಸಿದರು.

ಪ್ರತ್ಯೇಕ ಹೆರಿಟೇಜ್ ಸೆಲ್: ಪಾರಂಪರಿಕ ಕಟ್ಟಡಗಳನ್ನು ಸೂಕ್ತ ರೀತಿಯಲ್ಲಿ ಸಂರಕ್ಷಿಸಲು ಮೈಸೂರು ಮಹಾನಗರ ಪಾಲಿಕೆಯಲ್ಲಿ ಪ್ರತ್ಯೇಕ ಸೆಲ್ ಇರಬೇಕು. ಇಂಜಿನಿಯರ್‌ಗಳಿಗೆ ತರಬೇತಿ ನೀಡಿ ಸಜ್ಜುಗೊಳಿಸಬೇಕು. ಕಟ್ಟಡ ಶಿಥಿಲವಾಗದಂತೆ ನಿರ್ವಹಿಸಬೇಕು. ತಾರಸಿಯಲ್ಲಿ ಮಳೆ ನೀರು ನಿಲ್ಲದಂತೆ, ಅದು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಂಡರೆ ಪಾರಂಪರಿಕ ಕಟ್ಟಡ ಶಿಥಿಲವಾಗುವುದಿಲ್ಲ ಎಂದು ಅವರು ತಿಳಿಸಿದರು.

ಪಾಲಿಕೆಯಲ್ಲಿ ಚಿಪ್ಪುಗಾರೆ ಕಲ್ಲು ಅರೆಯುವ ಘಟಕ ಮಾಡಿ ಪಾರಂಪರಿಕ ಕಟ್ಟಡಗಳ ದುರಸ್ತಿಗೆ ಬಳಸುವಂತೆ ವ್ಯವಸ್ಥೆ ಮಾಡಿ ನಿರ್ವಹಣಾ ನಿಯಮವನ್ನು ಕಾಪಾಡಿದರೆ ಮಾತ್ರ ಸರಿಯಾಗಿ ದುರಸ್ತಿ ಮಾಡಬಹುದು. ಜಗನ್ಮೋಹನ ಅರಮನೆ, ಸರ್ಕಾರಿ ಆಯುರ್ವೇದ ಕಾಲೇಜು ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿರುವುದು ಉತ್ತಮ ನಿದರ್ಶನ ಎಂದು ಅವರು ನುಡಿದರು.

ಡಿಜಿಟಲ್ ಡಿಸ್ಪ್ಲೇ ಬೋರ್ಡ್ ತೆಗೆಸಿ: ನಿಯಮ ಪಾಲಿಸದೇ ಪಾಲಿಕೆ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಸೆಂಟ್ ಜೋಸೆಫ್ ಕಾಲೇಜಿನವರು ಅಳವಡಿಸಿರುವ ಡಿಜಿಟಲ್ ಡಿಸ್ಪ್ಲೇ ಬೋರ್ಡ್‌ಗಳನ್ನು ಮೊದಲು ತೆಗೆಸಿ, ಒಂದೇ ಬಗೆಯ ಜಾಹೀರಾತು ಫಲಕಗಳನ್ನು ಅಳವಡಿಸಿ ಎಂದು ಅವರು ತಿಳಿಸಿದರು.

ದೊಡ್ಡ ಗಡಿಯಾರ ರಿಪೇರಿ: ದೊಡ್ಡ ಗಡಿಯಾರ ಪಾರಂಪರಿಕ ನಿರ್ಮಾಣವನ್ನು ಅದೇ ಮಾದರಿಯಲ್ಲಿ ರಿಪೇರಿ ಮಾಡಬೇಕು. ಇಲಿ, ಹೆಗ್ಗಣ ಕೊರೆದು ಗೂಡು ಮಾಡಿರುವ ಜಾಗಕ್ಕೆ ರಸಾಯನಿಕ ಹಾಕಿ ಬಂದ್ ಮಾಡಿದರೆ ಗೆಜ್ಜಲು ಹಿಡಿಯುವುದಿಲ್ಲ. ರಿಪೇರಿ ಹೆಸರಲ್ಲಿ ಕಟ್ಟಡವನ್ನೇ ರಂಧ್ರ ಮಾಡುವುದರಿಂದ ಮಳೆ ನೀರು ಜಿನುಗಿ ಶಿಥಿಲಗೊಳ್ಳುತ್ತದೆ ಎಂದು ಪ್ರೊ. ರಂಗರಾಜು ಇದೇ ವೇಳೆ ಸಲಹೆ ನೀಡಿದರು.

ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಕನಕದಾಸ ಜಯಂತಿ ಆಚರಣೆ

ಪೂರ್ವಭಾವಿ ಸಭೆಯಲ್ಲಿ ಎಡಿಸಿ ಡಾ.ಬಿ.ಮಂಜುನಾಥ ಸ್ವಾಮಿ

ಮೈಸೂರು, ನ.4– ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಕನಕದಾಸ ಜಯಂತಿ ಹಾಗೂ ವೀರ ವನಿತೆ ಒನಕೆ ಓಬವ್ವ ಜಯಂತಿಯನ್ನು ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ.ಬಿ.ಮಂಜುನಾಥ ಸ್ವಾಮಿ ಅವರು ತಿಳಿಸಿದರು. ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಕನಕದಾಸ ಜಯಂತಿ ಹಾಗೂ ಒನಕೆ ಓಬವ್ವ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನವಂಬರ್ 11 ರಂದು ಕನಕದಾಸ ಜಯಂತಿ ಹಾಗೂ ಒನಕೆ ಓಬವ್ವ ಜಯಂತಿಯನ್ನು ಕಲಾಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಮೆರವಣಿಗೆಯನ್ನು ಅಂದು ಬೆಳಗ್ಗೆ 10 ಗಂಟೆಗೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಉದ್ಘಾಟಿಸಲಾಗುವುದು. ಮಧ್ಯಾಹ್ನ 12.30 ಗಂಟೆಗೆ ವೇದಿಕೆ ಕಾರ್ಯಕ್ರಮಗಳನ್ನು ಕಲಾಮಂದಿರದಲ್ಲಿ ಪ್ರಾರಂಭ ಮಾಡಲಾಗುವುದು. ಕಲಾತಂಡಗಳು ಹಾಗೂ ಗಾಯನ ತಂಡಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡಲಾಗುವುದು ಎಂದು ತಿಳಿಸಿದರು. ಜಯಂತೋತ್ಸವ ಸಮಿತಿಯ ಮುಖಂಡರು ಮಾತನಾಡಿ, ಕನಕದಾಸ ಜಯಂತಿಯ ಮೆರವಣಿಗೆಯು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಉದ್ಘಾಟನೆಗೊಂಡು ಕೆ.ಆರ್.ಸರ್ಕಲ್, ಮೈಸೂರು ಮಹಾನಗರ ಪಾಲಿಕೆ, 100 ಅಡಿ ರಸ್ತೆ, ಅರಸು ರಸ್ತೆಯ ಮೂಲಕ ಕಲಾಮಂದಿರವನ್ನು ತಲುಪಬೇಕು. ಕಾರ್ಯಕ್ರಮದಲ್ಲಿ ಉತ್ತಮ ಅಂಕಗಳನ್ನು ಪಡೆದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಬೇಕು ಮತ್ತು ಎಲ್ಲಾ ಸಮಾಜದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಸನ್ಮಾನ ಮಾಡಬೇಕು ಎಂದು ಬೇಡಿಕೆಯನಿಟ್ಟರು. ಜಯಂತೋತ್ಸವ ಸಮಿತಿಯ ಅಧ್ಯಕ್ಷರು ಮತ್ತು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉಪಸ್ಥಿತರಿದ್ದರು.

ಸಂಸ್ಕೃತಿ–22 ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಟ ಶಿವರಾಜ್‌ಕುಮಾರ್ ಚಾಲನೆ

ಮೈಸೂರು ನನಗೆ ಎರಡನೆ ಮನೆಯಿದ್ದಂತೆ



ಮೈಸೂರು, ನ.4(ಜಿಎ)– ಮೈಸೂರು ನನ್ನ ನೆಚ್ಚಿನ ಊರಾಗಿದ್ದು, ನಮ್ಮ ಕುಟುಂಬಕ್ಕೂ ಮೈಸೂರಿಗೂ ಅವಿನಾಭಾವ ಸಂಬಂಧವಿದೆ ಎಂದು ಚಲನಚಿತ್ರ ನಟ ಶಿವರಾಜ್‌ಕುಮಾರ್ ತಿಳಿಸಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವತಿಯಿಂದ ನಗರದ ಜೆ.ಕೆ. ಮೈದಾನದ ಆವರಣದಲ್ಲಿರುವ ಕಾಲೇಜಿನ ಅಲ್ಯುಮ್ನಿ ಅಸೋಸಿಯೇಷನ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಸಂಸ್ಕೃತಿ–22'ರ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮೊದಲು ನಮ್ಮ ತಂದೆ ಶೂಟಿಂಗ್‌ಗಾಗಿ ಮೈಸೂರಿಗೆ ಬರುತ್ತಿದ್ದರು. ನಂತರ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಶಕ್ತಿಧಾಮ ನಿರ್ಮಿಸಿದರು. ಈಗ ನನಗೂ ಮೈಸೂರು ಎರಡನೇ ಮನೆಯಾಗಿದ್ದು, ಇಲ್ಲಿನ ಕಾಫಿ, ಬಿರಿಯಾನಿ ಮತ್ತು ಮೈಸೂರಿನ ವಾತಾವರಣ ತುಂಬ ಇಷ್ಟ. ಎಲ್ಲರೂ ನೆಮ್ಮದಿ ಜೀವನ ನಡೆಸಲು ಸಾಧ್ಯವಿದೆ ಎಂದು ಮೈಸೂರನ್ನು ಕೊಂಡಾಡಿದರು. ನಮ್ಮ ಕುಟುಂಬಕ್ಕೂ ಡಾಕ್ಟರ್‌ಗೂ ಸಂಬಂಧವಿದ್ದು, ಕುಟುಂಬದಲ್ಲಿ ಅನೇಕರು ಡಾಕ್ಟರ್‌ಗಳಾಗಿದ್ದಾರೆ. ನನ್ನ ಮಗಳು ಸಹ ಇಲ್ಲಿಯೇ ಎಂಬಿಬಿಎಸ್ ಪದವಿ ಪಡೆದಿದ್ದಾಳೆ. ಮತ್ತೊಂದೆಡೆ ನಮ್ಮ ತಂದೆ, ತಾಯಿ, ನನಗೆ ಹಾಗೂ ನಮ್ಮೆಲ್ಲರ ಪ್ರೀತಿಯ ಅಪ್ಪುಗೂ ಗೌರವ ಡಾಕ್ಟರೇಟ್ ಇಲ್ಲಿಯೇ ನೀಡಲಾಗಿದೆ ಎಂದರು.

ತಂದೆಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿದ ನಂತರ 1994ರಲ್ಲಿ ಇದೇ ಮೈದಾನದಲ್ಲಿ ಅವರನ್ನು ಅಭಿನಂದಿಸಲಾಗಿತ್ತು. ಅಂದು 'ಜೇನಿನ ಹೊಳೆಯೊ ಹಾಲಿನ ಮಳೆಯೋ' ಗೀತೆ ಹಾಡಿದ್ದ ತಕ್ಷಣ ಮಳೆ ಸುರಿದಿತ್ತು. ಆ ದೃಶ್ಯ ಇಂದಿಗೂ ನನಗೆ ಕಣ್ಮುಂದೆ ಬರುತ್ತಿದೆ. 99 ವರ್ಷ ತುಂಬಿರುವ ಸಂದರ್ಭದಲ್ಲಿ ನಾನು ಇಲ್ಲಿಗೆ ಬಂದಿದ್ದೇನೆ. ಶತಮಾನೋತ್ಸವದ ಕಾರ್ಯಕ್ರಮಕ್ಕೂ ಬರುತ್ತೇನೆ ಎಂದು ತಿಳಿಸಿದರು.


ನಂತರ ನಟ ಶಿವರಾಜ್ ಕುಮಾರ್ ಅವರು ತಾವು ನಟಿಸಿದ ಚಿತ್ರಗಳ ಗೀತೆಗಳನ್ನು ಹಾಡಿದರಲ್ಲದೆ ನೃತ್ಯ ಮಾಡುವುದರೊಂದಿಗೆ ಕೆಲವು ಚಿತ್ರಗಳ ಡೈಲಾಗ್ ಹೇಳಿ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಎಂಎಂಸಿ ಅಂಡ್ ಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, ಕೆ.ಆರ್. ಆಸ್ಪತ್ರೆ ಅಧೀಕ್ಷಕ ಡಾ.ನಂಜುಂಡಸ್ವಾಮಿ, ಚೆಲುವಾಂಬ ಆಸ್ಪತ್ರೆಯ ಅಧೀಕ್ಷಕ ಡಾ.ರಾಜೇಂದ್ರ ಕುಮಾರ್, ಪಿಕೆಟಿಬಿ ಆಸ್ಪತ್ರೆ ಅಧೀಕ್ಷಕ ಡಾ.ಸಿ. ಪ್ರಶಾಂತ್, ಸ್ಟೂಡೆಂಟ್ ವೇಲ್ಫೇರ್ ಆಫೀಸರ್ ಡಾ.ಎಸ್. ಚಂದ್ರಶೇಖರ್ ಸೇರಿದಂತೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಎಂ.ಆರ್.ನಾಗರತ್ನಮ್ಮ ನಿಧನ



ಮೈಸೂರು, ನ.4– ಮೈಸೂರಿನ ರಾಮಾನುಜ ರಸ್ತೆ 18 ನೇ ಕ್ರಾಸ್ ನಿವಾಸಿ ದಿವಂಗತ ರಂಗರಾವ್ ಅವರ ಪತ್ನಿ, ಎಂ.ಆರ್.ನಾಗರತ್ನಮ್ಮ(87) ಶುಕ್ರವಾರ ನಿಧನರಾದರು. ಮೃತರು ಪುತ್ರ ನಿವೃತ್ತ ಇಂಜಿನಿಯರ್ ವೆಂಕಟೇಶ್ ಕುಮಾರ್, ಪುತ್ರಿ ಭಾರತಿ ಹಾಗೂ ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಜರುಗಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಎಂ.ಆರ್.ನಾಗರತ್ನಮ್ಮ ಅವರ ನಿಧನಕ್ಕೆ ನಗರ ಪಾಲಿಕೆ ಮಾಜಿ ಸದಸ್ಯ ಸ್ನೇಕ್ ಶ್ಯಾಮ್ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.11.2022 ಶನಿವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ : ಉಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಪುಸ್ತಕಗಳ ಮೇಲೆ ಶೇ. 15 ರಿಂದ 20 ರವರೆಗೆ ವಿಶೇಷ ರಿಯಾಯಿತಿ, ಸ್ಥಳ: ರಾಮಸ್ವಾಮಿ ಸರ್ಕಲ್, ಬೆಳಗ್ಗೆ 9.30 ರಿಂದ ರಾತ್ರಿ 8 ರವರೆಗೆ

■ **ರಾಷ್ಟ್ರೀಯ ಹಿಂದೂ ಸಮಿತಿ :** ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ತೆಗೆಯುವ ಅಭಿಯಾನ, ಭಾಗವಹಿಸುವವರು : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ವಿಕಾಸ್ ಶಾಸ್ತ್ರಿ, ತೇಜಸ್ ಗಾಯತ್ರಿ, ಪ್ರದೀಪ್, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 9.30ಕ್ಕೆ

■ **ಶಾಂತಲ ವಿದ್ಯಾಪೀಠ :** ಕನ್ನಡ ರಾಜ್ಯೋತ್ಸವ ಆಚರಣೆ, ಬೆಳಗ್ಗೆ 8.30ಕ್ಕೆ ಸಿದ್ಧಾರ್ಥನಗರದ ಗಣೇಶ ದೇವಸ್ಥಾನದಿಂದ ಜಾಥಾ, ಬೆಳಗ್ಗೆ 9.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ತಹಸೀಲ್ದಾರ್ ಗಿರೀಶ್, ಲೋಹಿತ್, ಸ್ಥಳ: ವಿದ್ಯಾಪೀಠ, ಸಿದ್ಧಾರ್ಥನಗರ.

■ **ಹಿರಣ್ಮಯಿ ಪ್ರತಿಷ್ಠಾನ, ಮುದ್ದುಕೃಷ್ಣ ಪ್ರಕಾಶನ :** ಶ್ರೀಮತಿ ಕಮಲಾ ರಾಜೇಶ್ ಅವರ ಮುಕ್ತಕ ಕಮಲ ಕೃತಿ ಬಿಡುಗಡೆ ಮತ್ತು ಮುಕ್ತಕ ಕವಿಗೋಷ್ಠಿ, ಅಧ್ಯಕ್ಷತೆ : ಸಮಾಜ ಸೇವಕ ಪ್ರಭುಸ್ವಾಮಿ, ಕೃತಿ ಬಿಡುಗಡೆ: ಸಂತೋಷ್ ಎಸ್. ಗೌಡ, ಕೃತಿ ಕುರಿತು ಮಾತನಾಡುವವರು : ಸಾಹಿತಿ ಬನ್ನೂರು ಕೆ. ರಾಜು, ಕವಿಗೋಷ್ಠಿ ಉದ್ಘಾಟನೆ : ವಿಶ್ರಾಂತ ಪ್ರಾಚಾರ್ಯ ಆರ್.ಎ. ಕುಮಾರ್, ಮುಖ್ಯ ಅತಿಥಿಗಳು : ಕಲಾವಿದೆ ಜಮುನಾರಾಣಿ ಮಿರ್ಲೆ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಮಾಲಂಗಿ ಸುರೇಶ್, ಪ್ರಾಸ್ತಾವಿಕ ನುಡಿ : ಮುದ್ದುಕೃಷ್ಣ ಪ್ರಕಾಶನದ ಅಧ್ಯಕ್ಷ ಎಂ. ಮುತ್ತುಸ್ವಾಮಿ, ಉಪಸ್ಥಿತರು : ಶ್ರೀಮತಿ ಕಮಲಾ ರಾಜೇಶ್, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗಕ್ಷೇಮ ಕೇಂದ್ರ, ನಿಮಿಷಾಂಬಾ ಬಡಾವಣೆ, ವಿವೇಕಾನಂದ ವೃತ್ತದ ಹತ್ತಿರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಪ್ಲೇಸ್‌ಮೆಂಟ್ ಟ್ರೈನಿಂಗ್ ಸೆಲ್ :** ಅಲ್ಯೂಮ್ನಿ ಇಂಟರಾಕ್ಷನ್, ಸ್ಥಳ: ಸೆಮಿನಾರ್ ಹಾಲ್, ಸುವರ್ಣ ಮಹೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಶ್ರೀ ಛಾಯಾದೇವಿ ಬಿ.ಎಡ್. ಕಾಲೇಜು :** ಬಿ.ಇಡಿ. ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ, ಉಪಸ್ಥಿತರು : ಡಾ. ವೀರೇಶ್, ಜಿ.ಟಿ. ದಿನೇಶ್ ಕುಮಾರ್, ಡಾ. ಭಾನುಪ್ರಕಾಶ್, ಡಾ. ಅಂತೋಣಿ ಪಾಲ್‌ರಾಜ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ :** ನಾಲೆಡ್ಜ್ ಪಾರ್ಟನರ್‌ಶಿಪ್ ಫಾರ್ ಅಡ್ವಾನ್ಸಿಂಗ್ ದಿ ಯುಎನ್ ಎಸ್‌ಡಿಜಿ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಡಾ. ರಾಜನ್ ಸುದೇಶ್ ರತ್ನ, ಗೌರವ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಪ್ರೊ. ಆರ್. ಶಿವಪ್ಪ, ಅಧ್ಯಕ್ಷತೆ : ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್‌ನ ಪ್ರೊ. ಎಸ್.ಜೆ. ಮಂಜುನಾಥ್, ಸ್ಥಳ : ರಾಣಿ ಬಹದ್ದೂರ್ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಪುಣ್ಯಕೋಟಿ ಸೇವಾ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ, ಡಾ.ಪುನೀತ್ ರಾಜ್‌ಕುಮಾರ್‌ಗೆ ನುಡಿನಮನ, ಅಧ್ಯಕ್ಷತೆ: ಪ್ರೊ. ಭಾಷ್ಯಂ ಸ್ವಾಮೀಜಿ, ಅಭಿನಂದಿತರು: ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಿ. ಮಾದೇಗೌಡ, ಪ್ರೊ.ಎಂ.ಕೃಷ್ಣೇಗೌಡ, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ. ದೇವೇಗೌಡ, ಎಲ್.ನಾಗೇಂದ್ರ, ಮಾಜಿ ಶಾಸಕ ವಾಸು, ಸ್ಥಳ: ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ.

■ **ಬಿಜೆಪಿ ನರಸಿಂಹರಾಜ ಯುವ ಮೋರ್ಚಾ :** ಬಿಜೆಪಿ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಧೀರಜ್ ಪ್ರಸಾದ್, ಜಯಶಂಕರ್, ಗಿರಿಧರ್, ಸೋಮಸುಂದರ್, ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ, ಸ್ಥಳ: ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ಸಭಾಂಗಣ, ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ, ಸಂಜೆ 5.30ಕ್ಕೆ.

■ **ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್ :** ಸುವರ್ಣ ಮಹೋತ್ಸವ ಆಚರಣೆ, ಅಧ್ಯಕ್ಷತೆ : ಬಿಷಪ್ ಆಫ್ ಮೈಸೂರು ರೆ. ಡಾ. ಕೆ. ಅಂತೋಣಿ ವಿಲಿಯಮ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಉಪಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಗೌರವ ಅತಿಥಿಗಳು : ಡಾ. ಜಗದೀಶ್, ಡಾ. ಎ. ಖಾದರ್ ಪಾಷಾ, ಡಾ. ಎಂ.ಎಸ್. ಗಿರಿಧರ್ ರಾವ್, ಡಾ. ಆರ್. ಶಿವಪ್ಪ, ಡಾ. ಎ.ಪಿ. ಜ್ಞಾನ ಪ್ರಕಾಶ್, ಡಾ. ಕೆ.ಬಿ. ಪ್ರವೀಣ, ಡಾ. ಎನ್.ಕೆ. ಲೋಕನಾಥ್, ಸ್ಥಳ: ಕಾಲೇಜು ಆವರಣ, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, ಸಂಜೆ 6ಕ್ಕೆ ಚಿಣ್ಣರ ಚಿತ್ರಕಲಾ ಮತ್ತು ಆಟೋಟ ಸ್ಪರ್ಧೆ, ಸಂಜೆ 7ಕ್ಕೆ ಮಹಿಳೆಯರ ರಂಗವಲ್ಲಿ ಸ್ಪರ್ಧೆ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ರಂಗಾಂತರಂಗ, ಮೈಸೂರು :** ಡಾ. ಬೆಸಗರಹಳ್ಳಿ ರಾಮಣ್ಣರಿಗೆ ನಮಸ್ಕಾರ, ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು ಕಥಾರಂಗ ಪ್ರಯೋಗ, ಹಾಡುಗಳು : ಡಾ. ಕೆ.ವೈ. ನಾರಾಯಣಸ್ವಾಮಿ, ರಂಗವಿನ್ಯಾಸ : ಹೆಚ್.ಕೆ. ದ್ವಾರಕನಾಥ್ ರಂಗಾಯಣ, ನಿರ್ದೇಶನ : ಸಿ. ಬಸವಲಿಂಗಯ್ಯ, ಉಪಸ್ಥಿತರು : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಡಾ. ರಾಮಣ್ಣ ಪ್ರತಿಷ್ಠಾನ ಅಧ್ಯಕ್ಷೆ ಶ್ರೀಮತಿ ಎಚ್.ಆರ್. ಸುಜಾತ, ನಗರ ಸಂಚಾರಿ ವಿಭಾಗದ ಜಂಟಿ ಆಯುಕ್ತ ಬಿ.ಆರ್. ರವಿಕಾಂತೇಗೌಡ, ಸಮಾಜವಾದಿ ಚಿಂತಕ ಪ. ಮಲ್ಲೇಶ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.10 ಗೀತಾರಾಧನ, 6.30 ಕವಿ ನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಋಷಿ ಮನೀಷಿಗಳು–ಲೇಖಿನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40ಹಾಡು ಹೇಳಿದ ಕಥೆ– ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ನಿತಿನ್ ರಾಜಾರಾಂ ಶಾಸ್ತ್ರಿ, 10.00 ಡಾ.ಎಸ್. ವಿಜಯರಾಘವನ್–ವೀಣಾವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದಸಂಗೀತ–ಚನ್ನಾಜಮ್ಮ ಮತ್ತು ತಂಡ, 1.20 ಭಾವಗೀತೆ–ಇಂದ್ರಾಣಿ ಅನಂತರಾಂ, ಡಾ.ಸೋಮಶೇಖರ ಇಮ್ರಾಪುರ, ವಾಣಿಶ್ರೀ ಕುಲಕರ್ಣಿ, 3.30 ಮಕ್ಕಳ ಮಂಟಪ–ಪ್ರತಿಭಾಪಲ್ಲವ, ಹಾಡುವ, ನಟಿಸುವ ತ್ರಿಜಲ್ ಕೆ.ಆರ್. ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ, 4.30 ನೆನಪಿನಂಗಳ, ಪ್ರಸ್ತುತಿ– ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.15 ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಕುರಿತು ಮಡ್ಡೀಕೆರೆ ಗೋಪಾಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಕಶೀಶ್ ಮಿತ್ತಲ್ – ಗಾಯನ, 10.30 ಸವಿನೆನಪು

ಸಾಂಸ್ಕೃತಿಕ ಉತ್ಸವ 'ಭಾರತೀಯ ಹಬ್ಬಗಳು' ಕಾರ್ಯಕ್ರಮ ನವೆಂಬರ್ 5





■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** ಸಂಜೆ 5.30ಕ್ಕೆ ಸಾಂಸ್ಕೃತಿಕ ಉತ್ಸವ 'ಭಾರತೀಯ ಹಬ್ಬಗಳು' ಕಾರ್ಯಕ್ರಮ, ಬೆಂಗಳೂರಿನ ದೃಷ್ಟಿ ಆರ್ಟ್ಸ್ ಎನ್‌ಸೆಂಬಲ್ ಅವರಿಂದ ಸಂಭ್ರಮ, ಶಾಸ್ತ್ರೀಯ ನೃತ್ಯ ಕಾರ್ಯಕ್ರಮ : ಭಾರತೀಯ ಹಬ್ಬಗಳು, ಶ್ರೀ ಕೃಷ್ಣ ಪರೀಕ್ಷಣಂ, ನಿರ್ದೇಶನ : ವಿದುಷಿ ಶ್ರೀಮತಿ ಅನುರಾಧ ವಿಕ್ರಾಂತ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 6 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 5 ಶನಿವಾರ 2022

ಸಂಪುಟ: 43 | ಸಂಚಿಕೆ: 198 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಸಂಯುಕ್ತಾಶ್ರಯದಲ್ಲಿ
‘ಭಾರತೀಯ ಹಬ್ಬಗಳು’ ಶೀರ್ಷಿಕೆಯಡಿ ‘ಸಾಂಸ್ಕೃತಿಕ ಉತ್ಸವ’ಕ್ಕೆ ಚಾಲನೆ

- ಏಳು ದಿನಗಳು ನಡೆಯುವ ಉತ್ಸವಕ್ಕೆ ಇನ್ಫೋಸಿಸ್ ಮೈಸೂರು ಕಾರ್ಯಕಾರಿ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಶಾಜಿ ಮ್ಯಾಥ್ಯೂ ಉದ್ಘಾಟನೆ
- ಭಾರತ ವಿಶ್ವದಲ್ಲೇ ಶ್ರೀಮಂತ ಕಲೆ–ಸಾಹಿತ್ಯ, ಸಂಸ್ಕೃತಿ ಹೊಂದಿದೆ: ಶಾಜಿ
- ಮೈಸೂರಿನ ಪಾರಂಪರಿಕ ಕಟ್ಟಡಗಳ ಉಳಿವಿಗೆ ಎಲ್ಲರೂ ಸಹಕರಿಸಬೇಕು: ಯದುವೀರ್
- ಭಾರತೀಯ ಕಲೆ–ಸಾಹಿತ್ಯ, ಸಂಸ್ಕೃತಿ ಎಲ್ಲರನ್ನೂ ಒಗ್ಗೂಡಿಸುತ್ತದೆ: ಬಿವಿಬಿ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ.ರಾಘವನ್ ಅಭಿಮತ




ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿರುವ ‘ಏಳು ದಿನಗಳ ಸಾಂಸ್ಕೃತಿಕ ಉತ್ಸವ’ಕ್ಕೆ ಇನ್ಫೋಸಿಸ್ ಮೈಸೂರು ಮುಖ್ಯಸ್ಥ ಶಾಜಿ ಮ್ಯಾಥ್ಯೂ ಶುಕ್ರವಾರ ಚಾಲನೆ ನೀಡಿದರು. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಭಾರತೀಯ ವಿದ್ಯಾಭವನ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ.ರಾಘವನ್, ಮೈಸೂರು ಕೇಂದ್ರ ಅಧ್ಯಕ್ಷರೂ ಆದ ‘ಮೈಸೂರು ಮಿತ್ರ’ ಹಾಗೂ ‘ಸ್ಟಾರ್ ಆಫ್ ಮೈಸೂರ್’ ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಉಪಸ್ಥಿತರಿದ್ದರು.

ಮೈಸೂರು, ನ.4(ಎಂಕೆ)– ಮೈಸೂರಿನ ಕಲಾಮಂದಿರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ‘ಭಾರತೀಯ ಹಬ್ಬಗಳು’ ಶೀರ್ಷಿಕೆಯಡಿ ಆಯೋಜಿಸಿರುವ ‘ಏಳು ದಿನಗಳ ಸಾಂಸ್ಕೃತಿಕ ಉತ್ಸವ’ಕ್ಕೆ ಶುಕ್ರವಾರ ವಿಧ್ಯುಕ್ತ ಚಾಲನೆ ದೊರೆಯಿತು.

ಸುಂದರ ವೇದಿಕೆಯಲ್ಲಿ ದೀಪ ಬೆಳಗಿಸುವ ಮೂಲಕ ಇನ್ಫೋಸಿಸ್ ಮೈಸೂರು ಕಾರ್ಯಕಾರಿ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಶಾಜಿ ಮ್ಯಾಥ್ಯೂ, ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಒಂದು ರಾಷ್ಟ್ರದ ಸಂಸ್ಕೃತಿ ಆ ದೇಶದ ಜನರ ಮನಸ್ಸು ಮತ್ತು ಹೃದಯದಲ್ಲಿರುತ್ತದೆ ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ. ಭಾರತ ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತ ಕಲೆ–ಸಾಹಿತ್ಯ, ಸಂಸ್ಕೃತಿಯನ್ನು ಒಳಗೊಂಡ ದೇಶವಾಗಿದೆ. ಈ ದೇಶದಲ್ಲಿನ ಸಂಸ್ಕೃತಿ ಸೃಷ್ಟಿಸುತ್ತಿರುವ ಮಾನವೀಯ ಮೌಲ್ಯಗಳನ್ನು ಬೇರೆ ಯಾವ ದೇಶಗಳಲ್ಲಿಯೂ ಕಾಣಲು ಸಾಧ್ಯವಿಲ್ಲ ಎಂದು ಅಭಿವ್ಯಕ್ತಪಡಿಸಿದರು.

ದೇಶದ ವಿವಿಧ ರಾಜ್ಯಗಳಲ್ಲಿರುವ ಕಲೆ–ಸಾಹಿತ್ಯ, ಸಂಸ್ಕೃತಿ ನಮ್ಮನ್ನು ಬೇರೆ ದೇಶದವರಿಗಿಂತ ವಿಶೇಷರನ್ನಾಗಿಸಿದ್ದು, ಅವುಗಳನ್ನು ನಮ್ಮ ಮುಂದಿನ ಪೀಳಿಗೆಯವರಿಗೆ ಉಳಿಸಿ–ಬೆಳೆಸುವುದು ಅತ್ಯಂತ ಅಗತ್ಯವಾಗಿದೆ. ಆದ್ದರಿಂದ ಇನ್ಫೋಸಿಸ್ ಪ್ರತಿಷ್ಠಾನ ಹಾಗೂ ಭಾರತೀಯ ವಿದ್ಯಾಭವನ ಒಟ್ಟಾಗಿ ಸಾಂಸ್ಕೃತಿಕ ಉತ್ಸವ ಆಯೋಜಿಸುವ ಮೂಲಕ ಕಲೆಗಳನ್ನು ಉಳಿಸುವ ಹಾಗೂ ಆರ್ಥಿಕವಾಗಿ ಹಿಂದುಳಿದ ಕಲಾವಿದರಿಗೆ ವೇದಿಕೆ ಕಲ್ಪಿಸುವುದರ ಮೂಲಕ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಸಾಮಾನ್ಯವಾಗಿ ಕಲಾಮಂದಿರಕ್ಕೆ ತಿಂಗಳಿಗೆ ಎರಡ್ಮೂರು ಬಾರಿ ಬರುತ್ತೇನೆ. ಪ್ರತೀ ಕಾರ್ಯಕ್ರಮದಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಹಿರಿಯರು ಭಾಗವಹಿಸುವುದನ್ನು ಕಾಣುತ್ತಿದ್ದೆ. ಆದರೆ ಇಂದು ಬಹುತೇಕ ಯುವಕ–ಯುವತಿಯರು, ಮಕ್ಕಳು ಭಾಗವಹಿಸಿರುವುದು ತುಂಬಾ ▶ 7ನೇ ಪುಟಕ್ಕೆ

ಅಪರಿಚಿತ ವಾಹನ ಡಿಕ್ಕಿ: ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಸಾವು



ಮೈಸೂರು, ನ.4– ಮೈಸೂರಿನ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ನಿವೃತ್ತ ಇಂಟೆಲಿಜೆನ್ಸ್ ಬ್ಯುರೋ (ಐಬಿ) ಅಧಿಕಾರಿ, ಲೇಖಕ ಆರ್.ಎನ್. ಕುಲಕರ್ಣಿ(82) ಅವರು ಇಂದು ಸಾವಿಗೀಡಾಗಿದ್ದಾರೆ.

ಮೈಸೂರಿನ ಶಾರದಾದೇವಿ ನಗರದ ನಿವಾಸಿಯಾದ ಇವರು ಎಂದಿನಂತೆ ಶುಕ್ರವಾರ ಸಂಜೆ ವಾಯುವಿಹಾರಕ್ಕೆಂದು ಕಾರಿನಲ್ಲಿ ಮಾನಸಗಂಗೋತ್ರಿ ಕ್ಯಾಂಪಸ್‌ಗೆ ತೆರಳಿದ್ದರು. ನಿತ್ಯದಂತೆ ಒಂದು ಕಡೆ ಕಾರು ನಿಲ್ಲಿಸಿಕೊಂಡು ಚಾಲಕ ನಿಂತಿದ್ದರು. ಆ ವೇಳೆ ವಾಯುವಿಹಾರದಲ್ಲಿದ್ದ ಕುಲಕರ್ಣಿ ▶ 8ನೇ ಪುಟಕ್ಕೆ

ಜಾಗತಿಕ ಹೂಡಿಕೆದಾರರ ಸಮಾವೇಶ ಯಶಸ್ವಿ ಸಂಪನ್ನ
10 ಲಕ್ಷ ಕೋಟಿ ಬಂಡವಾಳ ನಿರೀಕ್ಷೆ

- ವಿಶ್ವ ಮಟ್ಟದ ಅಗ್ರಗಣ್ಯ ಉದ್ಯಮಿಗಳೊಂದಿಗೆ ಒಪ್ಪಂದ
- ಐದು ಲಕ್ಷ ಕೋಟಿ ಹೂಡಿಕೆ; ಐದು ಲಕ್ಷ ಉದ್ಯೋಗದ ಗುರಿ ಮೀರಿ ಬಂಡವಾಳ, ಉದ್ಯೋಗದಲ್ಲಿ ಸಾಧನೆ ನಿರೀಕ್ಷೆ



ಬೆಂಗಳೂರು, ನ.4(ಕೆಎಂಶಿ)–ಜಾಗತಿಕ ಹೂಡಿಕೆದಾರರ ಸಮಾವೇಶ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದ್ದು, ವಿಶ್ವದಲ್ಲೇ ಮುಂಚೂಣಿಯಲ್ಲಿರುವ ಉದ್ಯಮಿಗಳು ಹತ್ತು ಲಕ್ಷ ಕೋಟಿ ರೂ.ಗೂ ಅಧಿಕ ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿದ್ದಾರೆ.

ಕರ್ನಾಟಕದ ಕೈಗಾರಿಕಾ ಸ್ನೇಹಿಗೆ ಮನಸೋತ ಅದಾನಿ, ಅಂಬಾನಿ, ಬಜಾಜ್, ಮಿತ್ತಲ್, ಜಿಂದಾಲ್ ಸೇರಿದಂತೆ ವಿಶ್ವಮಟ್ಟದ ಅಗ್ರಗಣ್ಯ ಉದ್ಯಮಿಗಳು ಲಕ್ಷಾಂತರ ಕೋಟಿ ರೂ. ಬಂಡವಾಳ ಹೂಡಿಕೆಗೆ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿವೆ. ಸಮಾವೇಶದ ಆರಂಭಕ್ಕೂ ಮುನ್ನ ಐದು ಲಕ್ಷ ಕೋಟಿ ಬಂಡವಾಳ ಹಾಗೂ ಐದು ಲಕ್ಷ ಉದ್ಯೋಗ ಗುರಿ ಇಟ್ಟುಕೊಂಡಿದ್ದ ರಾಜ್ಯ ಸರ್ಕಾರಕ್ಕೆ ನಿರೀಕ್ಷೆಗೂ ಮೀರಿ ಬಂಡವಾಳ ಹಾಗೂ ಉದ್ಯೋಗ ದ್ವಿಗುಣಗೊಂಡಿದೆ. ಮೂರು ದಿನಗಳ ಸಮಾವೇಶದ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ▶ 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಟೀಚರ್: ಲೇ ಗುಂಡ ಹೇಳೊ ಲಿಂಗದಲ್ಲಿ ಎಷ್ಟು ವಿಧ ?
ಗುಂಡ: ಮೇಸ್ಟ್ರೆ ಆರು ವಿಧ.
ಟೀಚರ್: ಅದ್ಯಾವದೊ ಆರು ವಿಧ !
ಗುಂಡ: ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ, ನಮ್ಮಪ್ಪ ಸಿದ್ದಲಿಂಗ, ನೀವ್ ಗುರುಲಿಂಗ, ಮತ್ತೆ ಶ್ರೀಲಂಕಾದ ಬೌಲರ್ ಮಲಿಂಗ

ಮೈಸೂರು ಮಿತ್ರ
ಶನಿವಾರ, 5 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಸತತ ಪ್ರಯತ್ನಶೀಲ ಮತ್ತು ಯಶ ಕಾಣುವ ಛಲವಿರುವವನ ಹೃದಯದಲ್ಲಿ ದೇವರು ಸದಾ ನೆಲೆಸಿರುತ್ತಾನೆ –ವೇಮನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಘಟ್ಟ ಹತ್ತಿದವನು ಅಟ್ಟ ಏರನೆ?

ನಿಮ್ಮ ಪತ್ರಗಳು

ಕರುನಾಡಲ್ಲಿ ಕನ್ನಡವೇ ಸಾರ್ವಭೌಮವಾಗಲಿ

ಮಾನ್ಯರೆ,

ಕೇಂದ್ರ ಸರ್ಕಾರದ ಪರೀಕ್ಷೆಗಳು ಕನ್ನಡದಲ್ಲೇ ಇರಬೇಕು. ಕರುನಾಡಲ್ಲಿ ಕನ್ನಡಿಗರಿಗೆ ಕೇಂದ್ರದ ಉದ್ಯೋಗಗಳು ದೊರೆಯಬೇಕು. ಹೀಗೆ ಕನ್ನಡ ನಾಡು ನುಡಿ, ನೆಲ, ಜಲದ ಸಂರಕ್ಷಣೆಯ ವಿಚಾರವಾಗಿ ಸಾಕಷ್ಟು ವರ್ಷಗಳಿಂದ ಕನ್ನಡಿಗರು ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಇಡುತ್ತಲೇ ಬಂದಿದ್ದಾರೆ. ಆದರೆ ಇಲ್ಲಿಯವರೆಗೂ ಸಹ ಯಾವುದೇ ಸರ್ಕಾರಗಳು ಈ ಬಗ್ಗೆ ದೃಢವಾದ ನಿಲುವು ತೆಗೆದುಕೊಳ್ಳದೆ ಕನ್ನಡಿಗರನ್ನು ಸದಾ ವಂಚಿಸುತ್ತಲೇ ಬಂದಿವೆ.

ಚುನಾವಣೆ ಬಂದಾಗಷ್ಟೇ ಕನ್ನಡ ನಾಡು, ನುಡಿ, ಜಲ ಎಂದು ಬೊಬ್ಬೆ ಹಾಕುವ ರಾಜಕೀಯ ಪಕ್ಷಗಳು ಹಾಗೂ ರಾಜಕೀಯ ನಾಯಕರುಗಳು ಅಧಿಕಾರಕ್ಕೆ ಬರುತ್ತಲೇ ಅವೆಲ್ಲವನ್ನು ನಿರ್ಲಕ್ಷಿಸಿ ಬಿಡುತ್ತಾರೆ. ಅದಕ್ಕೆ ನಿದರ್ಶನವೆಂಬಂತೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಬ್ಯಾಂಕಿಂಗ್ ಪರೀಕ್ಷೆ, ಎಸ್‌ಎಸ್‌ಸಿ ಪರೀಕ್ಷೆಗಳೆಲ್ಲಾ ಹಿಂದಿಯಲ್ಲಿ ನಡೆಯುತ್ತಿದ್ದು, ಇದರಿಂದ ಸಾಕಷ್ಟು ಕನ್ನಡಿಗರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಇದರಿಂದಾಗಿ ಕರುನಾಡಲ್ಲಿ ಕನ್ನಡಿಗರು ಸಾರ್ವಭೌಮತೆಯನ್ನು ಕಳೆದುಕೊಳ್ಳುತ್ತಿರುವುದು ದೊಡ್ಡ ದುರಂತವೇ ಸರಿ.

ಇದರ ನಡುವೆಯೇ ಇಂದಿಗೂ ಸಹ ಕೇಂದ್ರ ಸರ್ಕಾರ "ಹಿಂದಿ ದಿವಸ್" ಮೂಲಕ ಪರೋಕ್ಷವಾಗಿ ಕನ್ನಡಿಗರ ಮೇಲೆ ಹಿಂದಿ ಹೇರಿಕೆ ಮಾಡಲು ಹೊರಟಿರುವುದು ನಿಜಕ್ಕೂ ಖಂಡನೀಯ. ಇದರ ವಿರುದ್ಧ ನಮ್ಮ ನೆರೆ ರಾಜ್ಯ ತಮಿಳು ನಾಡಿಗರ ಮಾದರಿಯಲ್ಲಿಯೇ ಕೇಂದ್ರ ಸರ್ಕಾರಕ್ಕೆ ಉತ್ತರ ಕೊಡಬೇಕಿದೆ. ಕೇಂದ್ರ ಸರ್ಕಾರದ ಬಲವಂತ ಹಿಂದಿ ಹೇರಿಕೆ ವಿರುದ್ಧ ಈಗಾಗಲೇ ದಕ್ಷಿಣ ಭಾರತದ ರಾಜ್ಯಗಳಿಂದ ಹಲವೆಡೆ ವ್ಯಾಪಕ ಪ್ರತಿರೋಧಗಳು ವ್ಯಕ್ತವಾಗುತ್ತಲೇ ಇದೆ.

ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ದೊಡ್ಡ ಸ್ಟಾರ್ ಸೆಲಬ್ರಿಟಿಗಳೇ ವಿರೋಧ ವ್ಯಕ್ತಪಡಿಸುತ್ತಾ ಮುಕ್ತವಾಗಿ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವ ಮೂಲಕ "ಕೇಂದ್ರದ ಬಲವಂತ ಹಿಂದಿ ಹೇರಿಕೆ" ವಿರುದ್ಧದ ದೊಡ್ಡ ಹೋರಾಟಕ್ಕೆ ಮತ್ತಷ್ಟು ಪುಷ್ಟಿ ನೀಡಿದ್ದಾರೆ.

ಇದರ ಜೊತೆ ಜೊತೆಗೆ ಎಂದಿನಂತೆ ನಮ್ಮ ಕನ್ನಡ ಪರ ಸಂಘಟನೆಗಳು ಹಾಗೂ ಕನ್ನಡ ಪರ ಹೋರಾಟಗಾರರು ಸಹ ಹಿಂದಿ ಹೇರಿಕೆ ವಿರುದ್ಧ ಹೋರಾಟದ ದೊಡ್ಡ ಪ್ರತಿರೋಧವನ್ನೇ ತೋರಿದ್ದಾರೆ. ಆದರೂ ಸಹ ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಕನ್ನಡಿಗರನ್ನು ಸದಾ ವಂಚಿಸುತ್ತಲೇ ಬಂದಿರುವುದು ಕನ್ನಡಿಗರಿಗೆ ಮಾಡಿದ ದೊಡ್ಡ ದ್ರೋಹವೇ ಸರಿ. ಮುಂದಿನ ದಿನಗಳಲ್ಲಾದರೂ ಕೇಂದ್ರ ಸರ್ಕಾರ ಕನ್ನಡ ಭಾಷೆಗೆ ಹಾಗೂ ಕನ್ನಡಿಗರಿಗೆ ಎಲ್ಲಾ ರೀತಿಯಲ್ಲೂ ಪ್ರೋತ್ಸಾಹಿಸುವ ಮೂಲಕ ಕರುನಾಡಲ್ಲಿ ಕನ್ನಡಿಗರಿಗೆ ಸಾರ್ವಭೌಮತೆಯನ್ನು ಕಲ್ಪಿಸುವಂತಾಗಲಿ ಎಂಬುದು ನನ್ನ ಆಶಯ.

–ರಾಜೇಂದ್ರ ಅಪುರಾ. ಅಗತಗೌಡನಹಳ್ಳಿ, ಗುಂಡ್ಲುಪೇಟೆ. ತಾ.

ಶಾಲೆಗಳಲ್ಲಿ ಧ್ಯಾನ ಸ್ವಾಗತಾರ್ಹ ಸಂಗತಿ !

ಮಾನ್ಯರೆ,

ಶಾಲೆಗಳಲ್ಲಿ ವಿದ್ಯಾರ್ಥಿಗಳು ಪ್ರತಿನಿತ್ಯ ಧ್ಯಾನ ಮಾಡುವಂತೆ ಸರ್ಕಾರ ಹೊರಡಿಸಿರುವ ಸುತ್ತೋಲೆಗೆ ನಾಡಿನ ಕೆಲ ರಾಜಕಾರಣಿಗಳು ಹಾಗೂ ಸಾಹಿತಿಗಳು ವಿರೋಧ ವ್ಯಕ್ತಪಡಿಸಿರುವುದು ವಿಷಾದನೀಯ. ಶಾಲೆಗಳಲ್ಲಿ ಧ್ಯಾನ ಮಾಡುವುದರಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಲ್ಲಿ ದೃಢತೆ ಹಾಗೂ ಏಕಾಗ್ರತೆ ಹೆಚ್ಚಾಗಿ ದೈಹಿಕ ಮತ್ತು ಮಾನಸಿಕ ಒತ್ತಡ ನಿವಾರಣೆ ಕಡಿಮೆ ಆಗಲು ಸಹಕಾರಿಯಾಗುವುದರಿಂದ ಶಾಲೆಗಳಲ್ಲಿ ಪ್ರತಿದಿನ ಧ್ಯಾನ ಮಾಡಿಸುವುದು ಅಗತ್ಯವಾಗಿದೆ.

ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಸ್ಪಂದನೆ, ಒಳ್ಳೆಯ ಹವ್ಯಾಸ ಬೆಳೆಸಿಕೊಂಡು ಉತ್ತಮ ಪ್ರಜೆಯಾಗಲು ಸಹಕಾರಿಯಾಗುತ್ತದೆ. ಈಗಾಗಲೇ ಕೆಲವು ಜಿಲ್ಲೆಗಳ ಶಾಲೆಗಳಲ್ಲಿ ಧ್ಯಾನವನ್ನು ಮಾಡಿಸಲಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿದಿನ 10 ನಿಮಿಷಗಳ ಕಾಲ ಧ್ಯಾನವನ್ನು ಮಾಡಿಸುವುದರಿಂದ ಮಕ್ಕಳಲ್ಲಿ ಒತ್ತಡ ನಿವಾರಣೆ ಕಡಿಮೆ ಆಗಿ ಕಲಿಕೆಯಲ್ಲಿ ಮಕ್ಕಳು ಹೆಚ್ಚು ಆಸಕ್ತಿಯಿಂದ ತೊಡಗಿಸಿಕೊಳ್ಳಲು ನೆರವಾಗುವುದರಿಂದ ಶಾಲೆಗಳಲ್ಲಿ ಧ್ಯಾನ ಮಾಡಬೇಕೆಂದೇಳುವ ಸರ್ಕಾರದ ಸುತ್ತೋಲೆಯ ಆದೇಶ ಸ್ವಾಗತಾರ್ಹವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಶತಮಾನ ಕಂಡ ಅತ್ಯಂತ ಘೋರ ದುರಂತ

ಮಾನ್ಯರೆ,

ಗುಜರಾತ್‌ನ ಮೊರ್ಬಿಯ ನವೀಕರಣಗೊಂಡ ತೂಗು ಸೇತುವೆ ಕುಸಿದು ಬಿದ್ದ ಕಾರಣ ನೂರಾರು ಜನ ಮೃತಪಟ್ಟು ಮತ್ತು ಹಲವರು ನಾಪತ್ತೆ ಆಗಿರುವುದು ಈ ಶತಮಾನದಲ್ಲೇ ಅತೀ ದುಃಖದ ಸಂಗತಿ.ಆತುರ ಬಿದ್ದ ಒರೆವಾ ಕಂಪನಿ ಫಿಟ್‌ನೆಸ್ ಪ್ರಮಾಣ ಪತ್ರವಿಲ್ಲದೆ ತೂಗು ಸೇತುವೆ ಸಂಚಾರಕ್ಕೆ ಮುಕ್ತ ಅವಕಾಶ ನೀಡಿದ್ದು ತರವಲ್ಲ. ಇದರಲ್ಲಿ ರಾಜಕೀಯದ ಕೈವಾಡ ಇದೆ ಎಂಬುದು ತಳ್ಳಿ ಹಾಕುವಂತಿಲ್ಲ. ಐದು ದಿನಗಳ ಹಿಂದಷ್ಟೇ ದುರಸ್ತಿ ಮತ್ತು ನವೀಕರಣದ ನಂತರ ಪುನರಾರಂಭಗೊಂಡ ಶತಮಾನಕ್ಕೂ ಹೆಚ್ಚು ಹಳೆಯದಾದ ಸೇತುವೆ ಭಾನುವಾರ ಸಂಜೆ ಏಕಾಏಕಿ ಕುಸಿದಿದ್ದು ಯಕ್ಷ ಪ್ರಶ್ನೆ. ಇನ್ನು ದುರಂತದ ಎಲ್ಲಾ ಸಂತ್ರಸ್ತರಿಗೆ ಕೇಂದ್ರ ಮತ್ತು ಗುಜರಾತ್ ಸರಕಾರಗಳು ತ್ವರಿತ ಆರ್ಥಿಕ ಮತ್ತು ವೈದ್ಯಕೀಯ ನೆರವು ನೀಡಲೇಬೇಕು. ತೂಗು ಸೇತುವೆ ಕುಸಿದು ಬಿದ್ದ ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ತಿಂಗಳ ಒಂದು ಶನಿವಾರ ಬ್ಯಾಗ್‌ರಹಿತ ದಿನ ಸ್ವಾಗತ

ಮಾನ್ಯರೆ,

ರಾಜ್ಯ ಸರ್ಕಾರದಿಂದ ಶಿಕ್ಷಣ ಇಲಾಖೆಯು ಪ್ರತಿ ತಿಂಗಳ ಒಂದು ಶನಿವಾರವನ್ನು ಬ್ಯಾಗ್‌ರಹಿತ ದಿನವಾಗಿ ಜಾರಿಗೆ ತಂದಿರುವುದು ಸ್ವಾಗತ. ಈ ಕ್ರಮದಿಂದ ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ ಶಿಕ್ಷಕರಿಗೂ ಸಂತೋಷವಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಹಾಕಲು ಅನುಕೂಲವಾಗುತ್ತದೆ. ಆ ದಿನದಲ್ಲಿ ಜೀವನ ಮೌಲ್ಯ ತಿಳಿಸುವ ಹಾಗೂ ಪ್ರಾಯೋಗಿಕವಾಗಿ ಹಲವಾರು ವಿಷಯಗಳನ್ನು ತಿಳಿಸಬಹುದು. ಇದರಿಂದ ಮಕ್ಕಳಿಗೂ ಮನದಟ್ಟು ಆಗುತ್ತದೆ. ಒಂದು ದಿನ ರಿಲ್ಯಾಕ್ಸ್ ಮೂಡಲಿದ್ದರೆ ಹಲವಾರು ಉತ್ತಮ ಯೋಜನೆಗಳನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ. ಓದು ಬರೆಯುವ ಯೋಚನೆಗಳಿಲ್ಲದೆ ಎಲ್ಲರಂತೆ ಬೆರೆಯುತ ಸ್ನೇಹವನ್ನು ಸಂಪಾದಿಸಿಕೊಳ್ಳಬಹುದು. ಶಿಕ್ಷಕರು ಉಪಯುಕ್ತ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿದರೆ ಸತ್ಪ್ರಜೆಗಳಾಗಿ ಸಮಾಜದಲ್ಲಿ ಬಾಳಲು ಅನುಕೂಲವಾಗುತ್ತದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಭಾರತೀಯ ಸೇನೆಗೆ ಪ್ರಚಂಡ ಶಕ್ತಿ!



ಕಾರ್ಗಿಲ್ ಯುದ್ಧ 1999ರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಎತ್ತರದ ಪರ್ವತೀಯ ಪ್ರದೇಶಗಳಲ್ಲಿ ಸಾಗಿ ಹೊಡೆತ ನೀಡಬಲ್ಲ ಆಕ್ರಮಣಕಾರಿ ಲಘು ಯುದ್ಧ ಕಾಪ್ಟರ್‌ಗಳ ಅವಶ್ಯಕತೆಯನ್ನು ಭಾರತೀಯ ಸೇನೆ ಗಮನಿಸಿತು. 15 ರಿಂದ 16 ಸಾವಿರ ಅಡಿಯಷ್ಟು ಎತ್ತರಕ್ಕೆ ಹಾರಿ ಶತ್ರುಗಳ ಬಂಕರ್‌ಗಳನ್ನು ನಿರ್ನಾಮಗೊಳಿಸುವ ಕಾಪ್ಟರ್‌ಗಳು ಭಾರತಕ್ಕೆ ಬೇಕಿತ್ತು. ಆದರೆ ಭಾರತ ಇದಕ್ಕಾಗಿ ಮತ್ತೊಂದು ರಾಷ್ಟ್ರದ ಮುಂದೆ ಸಹಾಯಕ್ಕೆ ಅಪೇಕ್ಷೆಪಡಲಿಲ್ಲ. ಭವಿಷ್ಯದಲ್ಲಿ ತಾನೇ ಸ್ವತಃ ಇಂತಹ ಕಾಪ್ಟರ್‌ಗಳನ್ನು ಉತ್ಪಾದಿಸುವ ಛಲದಿಂದ ಮತ್ತು ಆತ್ಮ ವಿಶ್ವಾಸದಿಂದ ಕಾರ್ಯ ಆರಂಭಿಸಿತು. ಭಾರತೀಯ ರಕ್ಷಣಾ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿನ್ಯಾಸಕಾರರ ಸತತ ಹದಿನೈದು ವರ್ಷಗಳ ಪರಿಶ್ರಮ ಹಾಗೂ ಸರಕಾರದ ನಿರಂತರ ಪ್ರೋತ್ಸಾಹದ ಫಲವಾಗಿ ಇಂದು 'ಪ್ರಚಂಡ' ಸೇನೆಗೆ ಸೇರಿದೆ.

ರಾಷ್ಟ್ರದ ರಕ್ಷಣಾ ಕ್ಷೇತ್ರದಲ್ಲಿ ಆತ್ಮ ನಿರ್ಭರತೆಯತ್ತ, ಸ್ವಾವಲಂಬನೆಯತ್ತ ಸಾಗುವ ದಿಕ್ಕಿನಲ್ಲಿ ಭಾರತೀಯ ಸೇನೆ ಅತ್ಯಂತ ಮಹತ್ವದ ಹೆಜ್ಜೆ ಮುಂದಿಟ್ಟಿದೆ. ದೇಶದ ಸಾಮರಿಕ ಸಾಮರ್ಥ್ಯಕ್ಕೆ ಪ್ರೋತ್ಸಾಹ ನೀಡುವಂತೆ ಭಾರತವು ದೇಶೀಯವಾಗಿ ಅಭಿವೃದ್ಧಿಪಡಿಸಿದ ಮೊದಲ ಗುಂಪಿನ ಶಸ್ತ್ರಾಸ್ತ್ರಗಳು ಹಾಗೂ ಕ್ಷಿಪಣಿಗಳನ್ನು ಉಡಾಯಿಸುವ ಸಾಮರ್ಥ್ಯ ಹೊಂದಿರುವ "ಪ್ರಚಂಡ" ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು (ಎಲ್‌ಸಿಹೆಚ್) ದಿ. 3.10.2022 ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಾಯು ಪಡೆಯ ಏರ್ ಚೀಫ್ ಮಾರ್ಷಲ್ ವಿ.ಆರ್ ಚೌಧರಿ ಉಪಸ್ಥಿತಿಯಲ್ಲಿ ಜೋಧಪುರದಲ್ಲಿ ನಡೆದ ಸಮಾರಂಭದಲ್ಲಿ ಇದನ್ನು ಅಧಿಕೃತವಾಗಿ ಭಾರತೀಯ ವಾಯುಪಡೆಗೆ ಸೇರ್ಪಡೆಗೊಳಿಸಲಾಯಿತು. ದಿ. 19.11.2021 ರಂದು ಪ್ರಧಾನಿ ಮೋದಿಯವರು ಐಎಎಫ್‌ನ ಮುಖ್ಯಸ್ಥ ವಿ.ಆರ್. ಚೌಧರಿಯವರಿಗೆ ಎಲ್‌ಸಿಹೆಚ್ ಅನ್ನು ಔಪಚಾರಿಕವಾಗಿ ಹಸ್ತಾಂತರಿಸಿದ್ದರು.

ಕಾರ್ಗಿಲ್ ಯುದ್ಧ 1999ರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಎತ್ತರದ ಪರ್ವತೀಯ ಪ್ರದೇಶಗಳಲ್ಲಿ ಸಾಗಿ ಹೊಡೆತ ನೀಡಬಲ್ಲ ಆಕ್ರಮಣಕಾರಿ ಲಘು ಯುದ್ಧ ಕಾಪ್ಟರ್‌ಗಳ ಅವಶ್ಯಕತೆಯನ್ನು ಭಾರತೀಯ ಸೇನೆ ಗಮನಿಸಿತು. 15 ರಿಂದ 16 ಸಾವಿರ ಅಡಿಯಷ್ಟು ಎತ್ತರಕ್ಕೆ ಹಾರಿ ಶತ್ರುಗಳ ಬಂಕರ್‌ಗಳನ್ನು ನಿರ್ನಾಮಗೊಳಿಸುವ ಕಾಪ್ಟರ್‌ಗಳು ಭಾರತಕ್ಕೆ ಬೇಕಿತ್ತು. ಆದರೆ ಭಾರತ ಇದಕ್ಕಾಗಿ ಮತ್ತೊಂದು ರಾಷ್ಟ್ರದ ಮುಂದೆ ಸಹಾಯಕ್ಕೆ ಅಪೇಕ್ಷೆಪಡಲಿಲ್ಲ. ಭವಿಷ್ಯದಲ್ಲಿ ತಾನೇ ಸ್ವತಃ ಇಂತಹ ಕಾಪ್ಟರ್‌ಗಳನ್ನು ಉತ್ಪಾದಿಸುವ ಛಲದಿಂದ ಮತ್ತು ಆತ್ಮ ವಿಶ್ವಾಸದಿಂದ ಕಾರ್ಯ ಆರಂಭಿಸಿತು. ಭಾರತೀಯ ರಕ್ಷಣಾ ವಿಜ್ಞಾನಿಗಳು, ತಂತ್ರಜ್ಞರು ಹಾಗೂ ವಿನ್ಯಾಸಕಾರರ ಸತತ ಹದಿನೈದು ವರ್ಷಗಳ ಪರಿಶ್ರಮ ಹಾಗೂ ಸರಕಾರದ ನಿರಂತರ ಪ್ರೋತ್ಸಾಹದ ಫಲವಾಗಿ ಇಂದು 'ಪ್ರಚಂಡ' ಸೇನೆಗೆ ಸೇರಿದೆ.

ಹಿಂದೂಸ್ಥಾನ್ ಏರೋನಾಟಿಕ್ಸ್ ಸಾಧನೆ

ಪ್ರಚಂಡ ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು ನಮ್ಮ ಬೆಂಗಳೂರಿನ ಪ್ರತಿಷ್ಠಿತ ಏರೋಸ್ಪೇಸ್ ದೈತ್ಯ ಸಂಸ್ಥೆ (ಹೆಚ್‌ಎಎಲ್) ಅಭಿವೃದ್ಧಿಪಡಿಸಿತು. ಈ ಕಾಪ್ಟರ್‌ನ ಸಂಶೋಧನೆ, ವಿನ್ಯಾಸ ಹಾಗೂ ನಿರ್ಮಾಣಕ್ಕೆ ಸಂಸ್ಥೆಯು ರೂ. 3500 ಕೋಟಿ ಖರ್ಚು ಮಾಡಿದೆ. ಅಕ್ಟೋಬರ್ 3 ರಂದು ನಡೆದ ಸಮಾರಂಭದಲ್ಲಿ ಭಾರತೀಯ ಸೇನೆಗೆ ಹತ್ತು ಹಾಗೂ ಭಾರತೀಯ ವಾಯುಪಡೆಗೆ ಐದು ಹೆಲಿಕಾಪ್ಟರ್‌ಗಳು ಸೇರ್ಪಡೆಯಾಗಿವೆ. ಮುಂದಿನ ದಿನಗಳಲ್ಲಿ ಹೆಚ್‌ಎಎಲ್‌ನಲ್ಲಿ ನಿರ್ಮಾಣವಾಗಲಿರುವ 160 ಪ್ರಚಂಡ ಹೆಲಿಕಾಪ್ಟರ್‌ಗಳಲ್ಲಿ ಭಾರತೀಯ ಸೇನೆಗೆ 95 ಹಾಗೂ ವಾಯು ಪಡೆಗೆ 65 ಕಾಪ್ಟರ್‌ಗಳು ಸೇರ್ಪಡೆಯಾಗಲಿದೆ.

ಪ್ರಚಂಡ ಕಾಪ್ಟರ್‌ನ ವೈಶಿಷ್ಟ್ಯಗಳು

ಮುಂದಿನ ಕೆಲವೇ ವರ್ಷಗಳಲ್ಲಿ ಎಲ್‌ಸಿಹೆಚ್ ಭಾರತೀಯ ಸೇನೆ ಮತ್ತು ಭಾರತೀಯ ವಾಯು ಪಡೆಯ ದಾಳಿ ಕಾರ್ಯಾಚರಣೆಗಳಲ್ಲಿ ಪ್ರಧಾನ ಭೂಮಿಕೆ ನಿರ್ವಹಿಸಲಿವೆ. ಅಮೇರಿಕಾದ ಅಪಾಚೆ ಹೆಲಿಕಾಪ್ಟರ್‌ಗಳು ತಮ್ಮ ನಿಖರ ದಾಳಿ ಮತ್ತು ಸಾಮರ್ಥ್ಯಗಳಿಂದ ಜಗತ್ಪ್ರಸಿದ್ಧವಾಗಿವೆ. ಆದರೆ ಭಾರತ ನಿರ್ಮಿತ ಪ್ರಚಂಡ ಕಾಪ್ಟರ್‌ಗಳು ಅಪಾಚೆಗಿಂತ ಗಾತ್ರದಲ್ಲಿ ದೊಡ್ಡದಾಗಿವೆ. ಮತ್ತು ಹೆಚ್ಚು ಸಾಮರ್ಥ್ಯ ಹೊಂದಿವೆ. ಜಗತ್ತಿನ ಸೇನಾ ಯುದ್ಧ ಕಾಪ್ಟರ್‌ಗಳಲ್ಲಿ ಪ್ರಚಂಡ ಹೊಸ ಕ್ರಾಂತಿ, ಸದ್ದು ಮಾಡಲಿವೆ. ಈ ಕಾಪ್ಟರ್‌ಗಳು ಅತೀ ಎತ್ತರದ ಪರ್ವತೀಯ ಪ್ರದೇಶಗಳಲ್ಲಿ ನಡೆಯಲಿರುವ ಕಾರ್ಯಾಚರಣೆಗಳಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಿಸಲಿವೆ. ಚೀನಾದಂತಹ ರಾಷ್ಟ್ರಗಳ ವಿರುದ್ಧ ಹೋರಾಡುವ ಪರಿಸ್ಥಿತಿ ಎದುರಾದರೆ 'ಪ್ರಚಂಡ' ಕಾಪ್ಟರ್‌ಗಳು ನಿರ್ಣಾಯಕವೆನಿಸಲಿವೆ. ರಕ್ಷಣಾ ತಜ್ಞರಿಂದ ಭೀಷಣ, ಭಾರೀ ವೇಗ ಹಾಗೂ ವಿಧ್ವಂಸಕವೆಂದು ಬಣ್ಣಿಸಲ್ಪಟ್ಟಿರುವ ಈ ಕಾಪ್ಟರ್‌ನ ವಿನ್ಯಾಸವು ಸಂಪೂರ್ಣವಾಗಿ ಭಾರತೀಯವಾಗಿದೆ. 5.8 ಟನ್ ತೂಕದ ಈ ಕಾಪ್ಟರ್‌ನಲ್ಲಿ ಅವಳಿ ಎಂಜಿನ್‌ಗಳನ್ನು ಅಳವಡಿಸಲಾಗಿದೆ. ಕಾಪ್ಟರ್‌ನ ಕಾಕ್‌ಪಿಟ್‌ನಲ್ಲಿ ಇಬ್ಬರು ಪೈಲಟ್‌ಗಳು ಕೂರಲು ಸ್ಥಳಾವಕಾಶವಿದೆ. ಕಾಪ್ಟರ್ ಗ್ಲಾಸ್ ಕಾಕ್‌ಪಿಟ್ ಹೊಂದಿರುವುದರಿಂದ ಪೈಲಟ್‌ಗಳು ಸುಲಭವಾಗಿ ನೋಡಬಹುದು.

ಈ ಕಾಪ್ಟರ್‌ಗಳು ಹಲವಾರು ರಹಸ್ಯ ವಿಶೇಷಗಳು, ಶಸ್ತ್ರ ಸಜ್ಜಿತ ರಕ್ಷಣಾ ವ್ಯವಸ್ಥೆಗಳಿಂದ ಕೂಡಿವೆ. ರಾತ್ರಿ ದಾಳಿ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಗಾಗಿ ವಿಶೇಷ ಲ್ಯಾಂಡಿಂಗ್ ಗೇರ್ ಒಳಗೊಂಡಿದೆ. ಕಾಪ್ಟರ್‌ಗಳಿಗೆ ಅವಶ್ಯವಾದ ಚುರುಕುತನ ಕುಶಲತೆ ಹೊಂದುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಎತ್ತರದ ಪರ್ವತೀಯ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ಶತ್ರುಗಳ ಪತ್ತೆ ಹಚ್ಚುವಿಕೆ, ಶತ್ರುಗಳ ವಾಯು ರಕ್ಷಣಾ ವ್ಯವಸ್ಥೆಗಳ ನಾಶ! ಎತ್ತರದಲ್ಲಿರುವ ಶತ್ರುಗಳ ಬಂಕರ್ ನಾಶಕ ಕಾರ್ಯಾಚರಣೆಗಳು, ಅರಣ್ಯ ಹಾಗೂ ನಗರಗಳಲ್ಲಿನ ಪ್ರತಿಬಂಡಾಯ ಕಾರ್ಯಾಚರಣೆಗಳು, ಸೇನಾ ಪಡೆಗಳ ಕಾರ್ಯಾಚರಣೆಗಳಿಗೆ ಆಗಸದಿಂದ ಬೆಂಬಲಿಸಲು ನಿಯೋಜಿಸುವುದು ಸೇರಿದಂತೆ ಬಹು ಪಾತ್ರಗಳನ್ನು ನಿರ್ವಹಿಸುವ ಅಗಾಧ ಸಾಮರ್ಥ್ಯ ಹೊಂದಿದೆ.

ಪ್ರಚಂಡ ಹೆಲಿಕಾಪ್ಟರ್ 51 ಅಡಿ ಉದ್ದ, 15.5 ಅಡಿ ಎತ್ತರವಿದ್ದು, 700 ಕೆಜಿಯಷ್ಟು ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಗಂಟೆಗೆ 268 ಕಿ.ಮೀ. ವೇಗದಲ್ಲಿ ಚಲಿಸುವ ಕಾಪ್ಟರ್‌ನ ಕಾರ್ಯವ್ಯಾಪ್ತಿ 550 ಕಿ.ಮೀ. ಹಾಗೂ 6.5 ಕಿ.ಮೀ. ವರದಿಯಲ್ಲಿ ಕಾರ್ಯಾಚರಣೆ ಮಾಡುವುದು. ಸತತ ಮೂರು ಗಂಟೆ ಹತ್ತು ನಿಮಿಷಗಳ ಕಾಲ ಹಾರುವ ಸಾಮರ್ಥ್ಯ ಹೊಂದಿದೆ. ಈ ಕಾಪ್ಟರ್ 180 ಡಿಗ್ರಿಕೋನದಲ್ಲಿ ಗಾಳಿಯಲ್ಲಿ ಸ್ಥಿರವಾಗಿರುವುದರೊಂದಿಗೆ 360 ಕೋನದಲ್ಲಿ ಹಿಮ್ಮುಖವಾಗಿಯೂ ಆಕ್ರಮಣ ಮಾಡುವ ತಂತ್ರಜ್ಞಾನ ಹೊಂದಿದೆ. ಈ ಕಾಪ್ಟರ್‌ನ ಪೈಲೆಟ್‌ಗಳು ಇಲೆಕ್ಟ್ರಾನಿಕ್ ವಾರ್‌ಫೇರ್ ಸ್ಯೂಟ್‌ಗಳನ್ನು ಧರಿಸುವುದರೊಂದಿಗೆ ಹಗಲು – ರಾತ್ರಿಯಲ್ಲಿ ಕಾಣುವ ಮೌಂಟೆಡ್ ಡಿಸ್‌ಪ್ಲೇ ಹೆಲ್ಮೆಟ್‌ಗಳನ್ನು ಹೊಂದಿರುತ್ತಾರೆ. ಇದರಿಂದಾಗಿ ಹೆಚ್ಚಿನ ಕ್ಷಮತೆಯಿಂದ ಕಾರ್ಯಾಚರಣೆ ನಡೆಯಲು ಪೈಲೆಟ್‌ಗಳಿಗೆ ಅನುಕೂಲವಾಗುವುದು. ಶತ್ರುಗಳ ಮೇಲೆ ದಾಳಿ ನಡೆಸಲು, ಶತ್ರು ದಾಳಿಗಳಿಂದ ರಕ್ಷಿಸಿಕೊಳ್ಳಲು ಈ ಕಾಪ್ಟರ್‌ನಲ್ಲಿ 20 ಎಂ.ಎಂ. ರೋಟೆಟ್ ಗನ್, ಎಂ. 621 ಗನ್, 70 ಎಂ.ಎಂ. ರಾಕೆಟ್ ಮತ್ತು ಆಕಾಶದಲ್ಲಿ ಹೊಡೆಯಬಲ್ಲ ಕ್ಷಿಪಣಿಗಳನ್ನು ಹಾಗೂ ಇನ್ನಿತರ ಶಸ್ತ್ರಾಸ್ತ್ರಗಳನ್ನು ಅಳವಡಿಸಲಾಗಿದೆ. ಪ್ರಚಂಡ ಕಾಪ್ಟರ್ 16400 ಅಡಿ ಎತ್ತರದಲ್ಲೂ ಬಹುಬೇಗ ಲ್ಯಾಂಡ್ ಆಗುವ ಹಾಗೂ ಟೇಕಾಫ್ ಆಗುವ ಸಾಮರ್ಥ್ಯ ಹೊಂದಿದೆ. ಈ ಕಾಪ್ಟರ್‌ನ ಅತೀ ವಿಶೇಷ ಸಾಮರ್ಥ್ಯವೆಂದರೆ ಇವುಗಳು ಮೈನಸ್ 50 ಡಿಗ್ರಿ ತಾಪಮಾನವಿರುವ ಸಿಯಾಚಿನ್ ಹಾಗೂ ಪ್ಲಸ್ 50 ಡಿಗ್ರಿಯ ಪ್ರಖರ ತಾಪಮಾನವಿರುವ ರಾಜಸ್ಥಾನದ ಮರುಭೂಮಿ ಪ್ರದೇಶಗಳಲ್ಲಿ ಏಕರೀತಿಯ ಕಾರ್ಯನಿರ್ವಹಿಸುವ ರೀತಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ನಿರ್ಮಾಣ ಮಾಡಲಾಗಿದೆ. ಜಗತ್ತಿನ ಬಲಾಢ್ಯ ದೇಶಗಳು ಕೂಡಾ ಈ ರೀತಿ ಎಲ್ಲಾ ರೀತಿಯ ಕಠಿಣ ಹವಾಮಾನದಲ್ಲಿ ಕಾರ್ಯನಿರ್ವಹಿಸುವ ಕ್ಷಮತೆಯ ಹೆಲಿಕಾಪ್ಟರ್‌ಗಳನ್ನು ನಿರ್ಮಿಸಿಲ್ಲ. ಈ ದೃಷ್ಟಿಯಿಂದ 'ಪ್ರಚಂಡ' ಬಗ್ಗೆ ಭಾರತೀಯರು ಹೆಮ್ಮೆಪಡಬೇಕಾಗಿದೆ.

ಈ ಹೆಲಿಕಾಪ್ಟರ್‌ಗಳನ್ನು ನಿಧಾನವಾಗಿ ಚಲಿಸುವ ವಿಮಾನಗಳು, ಎದುರಾಳಿಗಳ ರಿಮೋಟ್ ಪೈಲೆಟ್ ವಿಮಾನಗಳ (ಆರ್‌ಪಿಎ) ವಿರುದ್ಧವೂ ಬಳಸಬಹುದು. ಈ ಕಾಪ್ಟರ್ 2 ಸಾವಿರ ಮೀ. ವ್ಯಾಪ್ತಿಯನ್ನು ಕವರ್ ಮಾಡುವ ಸ್ವಯಂ ಚಾಲಿತ ಫಿರಂಗಿ ಹೊಂದಿದೆ. ಪ್ರತಿ ನಿಮಿಷಕ್ಕೆ 750 ಸುತ್ತು ಗುಂಡು ಹಾರಿಸುವ ಸಾಮರ್ಥ್ಯ ಹೊಂದಿದೆ. ಶತ್ರುಗಳ ಕ್ಷಿಪಣಿ ಹೊಡೆತ ತಪ್ಪಿಸಿಕೊಳ್ಳುವ ಚುರುಕುತನ ಈ ಕಾಪ್ಟರ್‌ಗಳಲ್ಲಿದೆ. ಗುಂಡೇಟು ಇವುಗಳ ಮೇಲೆ ವಿಶೇಷ ಪರಿಣಾಮ ಬೀರುವುದಿಲ್ಲ. 'ಪ್ರಚಂಡ' ಕಾಪ್ಟರ್‌ಗಳನ್ನು ಲಡಾಕ್‌ನಲ್ಲಿ ಪರೀಕ್ಷಿಸಲಾಗಿದ್ದು, ಚೀನಾದ ಡ್ರೋನ್‌ಗಳನ್ನು ಕ್ಷಣ ಮಾತ್ರದಲ್ಲಿ ಹೊಡೆದುರುಳಿಸುವ ಸಾಮರ್ಥ್ಯವಿದೆ. ವಾಯುಮಾರ್ಗದಲ್ಲಿ ಹಾರಾಡುತ್ತಾ ನೆಲದಲ್ಲಿ ಚಲಿಸುವ ಟ್ಯಾಂಕರ್‌ಗಳನ್ನು ನಾಶಪಡಿಸಬಲ್ಲವು. ಇಂತಹ ಅತ್ಯಾಧುನಿಕ ಹೆಲಿಕಾಪ್ಟರ್ ಗಳನ್ನು ನಿರ್ಮಿಸುವುದರೊಂದಿಗೆ ಭಾರತವು ಜಗತ್ತಿನ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಬಲಾಢ್ಯ ರಾಷ್ಟ್ರಗಳ ಗಮನವನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿ ಯಾಗಿದೆ. ಇಂತಹ ಅತ್ಯಾಧುನಿಕ ಎಲ್‌ಸಿಹೆಚ್ ಅನ್ನು ನಿರ್ಮಿಸಿರುವ ದೇಶದ ರಕ್ಷಣಾ ವಿಜ್ಞಾನಿಗಳಿಗೆ ತಂತ್ರಜ್ಞರಿಗೆ ಹಾಗೂ ವಿನ್ಯಾಸಕಾರರಿಗೆ ನಾವೆಲ್ಲರೂ ಅಭಿನಂದಿಸೋಣ.

ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್‌ನಿಂದ 20 ವರ್ಷದಿಂದ ಗುಣಮಟ್ಟದ ಆಡಿಯಾಲಜಿ ಸುರಕ್ಷಾ ಸೇವೆ





"ಶ್ರವಣ ದೋಷವುಳ್ಳ ಜನರಿಗೆ ಅತ್ಯುತ್ತಮ ಗುಣಮಟ್ಟದ ಸುರಕ್ಷಾ ಖಾತರಿ ನೀಡುವುದು ನಮ್ಮ ಪರಮ ಉದ್ದೇಶ. ಶ್ರವಣಕ್ಕೆ ಸಂಬಂಧಿಸಿದಂತೆ ಉತ್ತಮ ಪರಿಹಾರ ಕಲ್ಪಿಸಲು ನಮ್ಮ ತಜ್ಞ ಆಡಿಯಾಲಜಿಸ್ಟ್ ಕಾರ್ಯ ನಿರ್ವಹಿಸುತ್ತಿದ್ದಾರೆ. ಕರ್ನಾಟಕವೇ ಅಲ್ಲದೆ ದಕ್ಷಿಣ ಭಾರತದಾದ್ಯಂತದಿಂದ ಜನರು ವೈಭವ್ ಸಂಪರ್ಕಿಸುತ್ತಾರೆ. ತನ್ನ ಸೇವೆಗಾಗಿ ನಮ್ಮ ಸೆಂಟರ್ ಹಲವಾರು ಪ್ರಶಸ್ತಿಗಳನ್ನು ಗಳಿಸಿದೆ. ನಮ್ಮ ಕೇಂದ್ರವು ಹಲವಾರು ಉಚಿತ ಶ್ರವಣ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡಿದೆ ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳ ಜನರು ಮತ್ತು ಮಕ್ಕಳಿಗೆ ರಿಯಾಯ್ತಿ ದರದಲ್ಲಿ ಶ್ರವಣ ಸಾಧನಗಳ ಒದಗಿಸುತ್ತಾ ಬಂದಿದೆ. – **ಜಿ.ಜಿ.ಆಶಾ, ಸಂಸ್ಥಾಪಕ ನಿರ್ದೇಶಕಿ, ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್**



ಮೈಸೂರು, ನ4– 2002ರಲ್ಲಿ ಮೈಸೂರಲ್ಲಿ ಆರಂಭವಾದ ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್, ಬಡ ರೋಗಿಗಳಿಗೆ ವಾಕ್ ಮತ್ತು ಶ್ರವಣ ದೋಷ ನಿವಾರಣೆಗೆ ಶ್ರಮಿಸುವುದರೊಂದಿಗೆ ಹೆಸರುವಾಸಿಯಾಗಿದೆ.

ಪರಿಣಿತ ಆಡಿಯಾಲಜಿಸ್ಟ್ ಹಾಗೂ ಸ್ಪೀಚ್ ಲಾಂಗ್ವೇಜ್ ಪಾಥಲಜಿಸ್ಟ್ ಜಿ.ಜಿ.ಆಶಾ ಅವರಿಂದ ಸ್ಥಾಪನೆಯಾದ ಸೆಂಟರ್, ಇದುವರೆಗೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಆಶಾ ಅವರು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯಲ್ಲಿ 1987ರಲ್ಲಿ ಎಂಎಸ್ಸಿ ಪೂರೈಸಿದರು. ನಂತರ 8 ವರ್ಷಗಳ ಕಾಲ ಕಾರ್ಯ ನಿರ್ವಹಿಸಿ, 2002ರಲ್ಲಿ ಮೈಸೂರಿನಲ್ಲಿ ಪ್ರಪ್ರಥಮ ಬಾರಿಗೆ ಖಾಸಗಿ ವಾಕ್ ಮತ್ತು ಶ್ರವಣ ಕೇಂದ್ರವನ್ನು ಆರಂಭಿಸಿದರು. ಇದಕ್ಕೆ ಅವರ ಪತಿ ಮನಮೋಹನ್ ಪ್ರಸಾದ್ ನೆರವಾಗಿದ್ದರು. ಮೊದಲು ಈ ಕೇಂದ್ರ ಇರ್ವಿನ್ ರಸ್ತೆಯ ಡಾ. ಮಹದೇವ್ ಅವರ ಕ್ಲಿನಿಕ್‌ನಲ್ಲಿ ಆರಂಭವಾಗಿತ್ತು. ನಂತರ ಇದನ್ನು 2007ರಲ್ಲಿ ಧನ್ವಂತ್ರಿ ರಸ್ತೆಗೆ ಸ್ಥಳಾಂತರಿಸಲಾಗಿತ್ತು. ಈಗ 2019ರಲ್ಲಿ ಜನತಾನಗರದಲ್ಲಿ ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್‌ನ ಎರಡನೇ ಶಾಖೆಯನ್ನು ಆರಂಭಿಸಲಾಗಿದೆ.

ಆಶಾ ಅವರ ಮಕ್ಕಳಾದ ಆರ್.ಎಂ. ವೈಭವ್ ಮತ್ತು ಆರ್.ಎಂ. ನಾಗಾರ್ಜುನ್ ಸಹ ತಾಯಿಯ ಮಾರ್ಗದಲ್ಲಿ ಸಾಗುತ್ತಿದ್ದು, ಆಡಿಯಾಲಸ್ಟ್ ಮತ್ತು ಸ್ಪೀಚ್ ಲಾಂಗ್ವೇಜ್ ಪಾಥಲಜಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಾರ್ಷಿಕೋತ್ಸವದ ಕೊಡುಗೆ: ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್‌ನ 20ನೇ ವಾರ್ಷಿಕೋತ್ಸವದ ಅಂಗವಾಗಿ ಇತ್ತೀಚಿನ ಹಿಯರಿಂಗ್ ಸಾಧನದ ಉಚಿತ ಟ್ರಯಲ್‌ಗೆ ಅವಕಾಶ ಮಾಡಿಕೊಟ್ಟಿದ್ದು, ಹಳೆಯ ಸಾಧನದ ಆಕರ್ಷಕ ಎಕ್ಸ್‌ಚೇಂಜ್ ಕೊಡುಗೆಯನ್ನು ನೀಡಲಾಗುತ್ತಿದೆ. ಜೊತೆಗೆ ಹಿಯರಿಂಗ್ ಸಾಧನಗಳ ಮೇಲೆ ವಿಶೇಷ ರಿಯಾಯಿತಿ ನೀಡಲಾಗುತ್ತಿದೆ.

ಈ ಕೊಡುಗೆ, ವೈಭವ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್, 1432/9, ಮೊದಲನೇ ಮಹಡಿ, ತ್ರಿಭುವನ್ ಟವರ್ಸ್, ಪಶುವೈದ್ಯ ಆಸ್ಪತ್ರೆ ಎದುರು, ದಿವಾನ್ಸ್ ರಸ್ತೆ ಮೈಸೂರು–570001 ಮತ್ತು ಇದರ ಶಾಖೆ ಎಂಐಜಿ–1–8, ನೆಲಮಹಡಿ, ವಿಜಯಾಬ್ಯಾಂಕ್ ಬಳಿ, ಜನತಾನಗರ, ಬೋಗಾದಿ 2ನೇ ಹಂತ, ಮೈಸೂರು–570009. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ 0821–2437373, 2547373, ಮೊಬೈಲ್ 984255757.

ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಲು ಯತ್ನ; ಅಕ್ಕಿಯೊಂದಿಗೆ ಪ್ಯಾಸೆಂಜರ್ ಆಟೋ ವಶಕ್ಕೆ

ಮೈಸೂರು, ನ.4– ಕಾಳಸಂತೆಯಲ್ಲಿ ಮಾರಾಟ ಮಾಡಲು ಪಡಿತರ ಚೀಟಿದಾರರಿಂದ ಅಕ್ಕಿ ಸಂಗ್ರಹಿಸುತ್ತಿದ್ದ ಪ್ರಕರಣ ಪತ್ತೆ ಹಚ್ಚಿದ ಮೇಟಗಳ್ಳಿ ಠಾಣೆ ಪೊಲೀಸರು ಹಾಗೂ ಆಹಾರ ನಿರೀಕ್ಷಕರು 6.30 ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು ಪ್ಯಾಸೆಂಜರ್ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಬೈರವೇಶ್ವರ ನಗರದ ಸಮೀಪ ಪಡಿತರ ಚೀಟಿದಾರರಿಂದ ಅನಧಿಕೃತವಾಗಿ ಅಕ್ಕಿ ಸಂಗ್ರಹಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ಮೇಟಗಳ್ಳಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕಿರಣ್ ಅರ್ಜುನ್ ಹಂಪಿಹೊಳಿ ಅವರು ಆಹಾರ ನಿರೀಕ್ಷಕ ಬಿ.ಎಸ್.ವೇಣುಗೋಪಾಲ್ ಅವರನ್ನು ಕರೆಸಿಕೊಂಡು ದಾಳಿ ನಡೆಸಿದ್ದಾರೆ. ಆ ವೇಳೆ ಪ್ಯಾಸೆಂಜರ್ ಆಟೋ (ಕೆಎ 41 1947) ಚಾಲಕ ಆಟೋ ಬಿಟ್ಟು ಪರಾರಿಯಾದನು. ಆಟೋದಲ್ಲಿದ್ದ 6.30 ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು ಎಲೆಕ್ಟ್ರಾನಿಕ್ ಡಿಜಿಟಲ್ ತೂಕದ ಯಂತ್ರವನ್ನು ವಶಪಡಿಸಿಕೊಂಡಿರುವ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ನ.4– ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ನ. 7 ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ನ. 6 ರಂದು ಸಂಜೆ 6.30ಕ್ಕೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 94484 58050, 86187 62110 ಸಂಪರ್ಕಿಸಬಹುದು.

ಇಂದು ಮೈಸೂರಲ್ಲಿ ವೈದ್ಯರ ತಂಡದಿಂದ 'ಕಸ್ತೂರಿ ಕಲರವ' ಸಂಗೀತ ಕಾರ್ಯಕ್ರಮ




ಮೈಸೂರು, ನ.4– ಕನ್ನಡ ರಾಜ್ಯೋತ್ಸವ ಆಚರಣೆಯ ಹಿನ್ನೆಲೆಯಲ್ಲಿ 'ಸ್ವರ ಸಂಜೀವಿನಿ' ವೈದ್ಯರ ತಂಡದಿಂದ ಸಂಗೀತ ಕಾರ್ಯಕ್ರಮ 'ಕಸ್ತೂರಿ ಕಲರವ' ನಾಳೆ(ನ.5) ಸಂಜೆ 5 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಮೈಸೂರಿನ ಕುವೆಂಪು ನಗರದ ಗಾನಭಾರತಿ ವೀಣೆಶೇಷಣ್ಣ ಭವನದಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್, ಡಾ. ಕುಲದೀಪ್, ಡಾ. ಬಲರಾಮ್, ಡಾ. ಭಾರತಿ, ಡಾ. ಶ್ಯಾಂ ಪ್ರಸಾದ್, ಡಾ. ಅನೂಪ್, ಡಾ. ರಘುವೀರ್, ಜೀವನ್‌ಕುಮಾರ್, ದರ್ಶಿತ್, ನಿಖಿಲ್‌ಪ್ರಭು, ಡಾ. ಸೋಮನಾಥ ವಾಸುದೇವ, ಡಾ. ಸೀತಾಲಕ್ಷ್ಮೀ ಹಾಗೂ ಡಾ. ಸುನೀತಾ ಅವರು ಕನ್ನಡದ ಜನಪ್ರಿಯ ಗೀತೆಗಳನ್ನು ಹಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

MYSURU'S BIGGEST FURNITURE SALE !

20ನೇ ವರ್ಷದ ಪುಣ್ಯ ಸ್ಮರಣೆ



ಟಿ.ಎಸ್.ದಶರಥ್
ಮಾಲೀಕರು, ಶ್ರೀ ತ್ರಿಪುರಾಂಭ ಮಾರ್ಡನ್ ರೈಸ್ ಮಿಲ್, ಮೂಗೂರು

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು

ರಾಷ್ಟ್ರೀಯ ಫ್ಲೋರೋಸಿಸ್ ನಿಯಂತ್ರಣ ಹಾಗೂ ತಡೆಗಟ್ಟುವ ಕಾರ್ಯಕ್ರಮ

ದಂತ ಫ್ಲೋರೋಸಿಸ್




- ಫ್ಲೋರೈಡ್ – ನಮ್ಮ ದೇಹಕ್ಕೆ ಬೇಕಾದ ಒಂದು ಖನಿಜಾಂಶ.
- ನಾವು ಸೇವಿಸುವ ಆಹಾರ ಮತ್ತು ಕುಡಿಯುವ ನೀರಿನಲ್ಲಿ ಅವಶ್ಯಕತೆಗಿಂತ ಹೆಚ್ಚು ಫ್ಲೋರೈಡ್ ಅಂಶ ಇದ್ದರೆ ಫ್ಲೋರೋಸಿಸ್ ಉಂಟಾಗುತ್ತದೆ.

ಮೂಳೆಗಳ ಫ್ಲೋರೋಸಿಸ್

ಲಕ್ಷಣಗಳು

ಹೊಟ್ಟೆ ತೊಳೆಸಿದಂತಾಗುವುದು, ವಾಂತಿ, ಹಸಿವಿನ ಶಕ್ತಿ ಇಲ್ಲದಂತಾಗುವುದು, ಹೊಟ್ಟೆ ನೋವು, ಹೊಟ್ಟೆ ಉಬ್ಬರ, ಹಲ್ಲುಗಳಲ್ಲಿ ಹಳದಿ / ಕಂದು ಬಣ್ಣ ಬದಲಾವಣೆ, ಹೆಚ್ಚು ಮೂತ್ರ ವಿಸರ್ಜಿಸುವುದು, ಸ್ನಾಯುಗಳು / ಕೀಲುಗಳಲ್ಲಿ ವಿಪರೀತ ನೋವು ಮತ್ತು ನಿಶಕ್ತಿ. ದೀರ್ಘಕಾಲಿನ ಫ್ಲೋರೈಡ್ ಸೇವನೆಯಿಂದ ಮೂಳೆಗಳು ಪೊಳ್ಳಾಗಿ ಬಾಗುವುದು.





ನಿಯಂತ್ರಣ

- 'ಸಿ' ಅನ್ನಾಂಗ ಹೆಚ್ಚಿರುವ ನಿಂಬೆ, ನೆಲ್ಲಿಕಾಯಿ, ಕಿತ್ತಳೆ, ಮೋಸಂಬಿ, ಸೀಬೆ ಹಣ್ಣುಗಳನ್ನು ಆಹಾರದಲ್ಲಿ ಸೇವಿಸುವುದು.
- ಕ್ಯಾಲ್ಸಿಯಂ ಹೆಚ್ಚಿರುವ ಪದಾರ್ಥಗಳಾದ ಹಾಲು, ಬೆಲ್ಲ, ಹಸಿರು ಸೊಪ್ಪು, ತರಕಾರಿಗಳು, ರಾಗಿ ಮುಂತಾದ ಆಹಾರ ಪದಾರ್ಥಗಳನ್ನು ಸೇವಿಸಿ.
- ಕುಡಿಯಲು ಮತ್ತು ಅಡುಗೆ ಮಾಡಲು ಫ್ಲೋರೈಡ್ ಮುಕ್ತ ನೀರು ಬಳಸುವುದು.

ಹೆಚ್ಚಿನ ವಿವರಗಳಿಗೆ: 24×7 ಉಚಿತ ಆರೋಗ್ಯ ಸಹಾಯವಾಣಿ – 104ಕ್ಕೆ ಕರೆ ಮಾಡಿ ಅಥವಾ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ.

ಪ್ರಕಟಣೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಐ.ಇ.ಸಿ ವಿಭಾಗ, ಮೈಸೂರು



ಮಾಡಬೇಕು ಮತ್ತು ಮಾಡಬಾರದು

1. ಸೈಕ್ಲೋನ್‌ಗೂ ಮುನ್ನ

- ವದಂತಿಗಳನ್ನು ನಂಬಬೇಡಿ, ಶಾಂತವಾಗಿರಿ, ಆತಂಕಕ್ಕೆ ಒಳಗಾಗಬೇಡಿ.
- ಸಂಪರ್ಕ ಖಾತರಿಯಾಗಿ ನಿಮ್ಮ ಮೊಬೈಲ್‌ಗಳನ್ನು ಚಾರ್ಜ್‌ನಲ್ಲಿಡಿ; ಎಸ್‌ಎಂಎಸ್ ಉಪಯೋಗಿಸಿ.
- ಕ್ಷಣಕ್ಷಣದ ಹವಾಮಾನ ತಿಳಿಯಲು ರೇಡಿಯೋ ಕೇಳಿ, ಟಿವಿ ವೀಕ್ಷಿಸಿ, ನ್ಯೂಸ್ ಪೇಪರ್ ಓದಿ.
- ನಿಮ್ಮ ದಾಖಲಾತಿಗಳು ಮತ್ತು ಬೆಲೆ ಬಾಳುವ ಪದಾರ್ಥಗಳನ್ನು ವಾಟರ್ ಪ್ರೂಫ್ ಕಂಟೈನರ್‌ಗಳಲ್ಲಿಡಿ.
- ಸುರಕ್ಷತೆ ಮತ್ತು ಉಳಿವಿಗಾಗಿ ಅಗತ್ಯವಿರುವಂತಹ ಪದಾರ್ಥಗಳುಳ್ಳ ತುರ್ತು ಕಿಟ್‌ವೊಂದನ್ನು ಸಿದ್ಧವಾಗಿಡಿ.
- ನಿಮ್ಮ ಮನೆಯನ್ನು ಕಾಪಾಡಿಕೊಳ್ಳಿ; ರಿಪೇರಿಗಳನ್ನು ಮಾಡಿಕೊಳ್ಳಿ; ಚೂಪಾದ ಪದಾರ್ಥಗಳು ಸಡಿಲವಾಗಿರಲು ಬಿಡಬೇಡಿ.
- ಜಾನುವಾರುಗಳು ಮತ್ತು ಪ್ರಾಣಿಗಳನ್ನು ಅವುಗಳ ಸುರಕ್ಷತೆ ದೃಷ್ಟಿಯಿಂದ ಕಟ್ಟಿ ಹಾಕದಿರಿ.

ಮೀನುಗಾರರು ಮಾಡಬೇಕಿರುವುದು

- ಕೈಯಲ್ಲಿ ಹೆಚ್ಚುವರಿ ಬ್ಯಾಟರಿಗಳೊಂದಿಗೆ ಒಂದು ರೇಡಿಯೋ ಸೆಟ್ ಇರಿಸಿಕೊಳ್ಳಿ.
- ಒಂದು ಸುರಕ್ಷಿತ ಸ್ಥಳದಲ್ಲಿ ದೋಣಿಗಳು ಮತ್ತು ರಾಫ್ಟ್‌ಗಳನ್ನು ಕಟ್ಟಿಹಾಕಿ.
- ಸಮುದ್ರದಲ್ಲಿ ಸಾಹಸಕ್ಕೆ ಮುಂದಾಗದಿರಿ.

2. ಸೈಕ್ಲೋನ್ ಸಮಯ ಮತ್ತು ನಂತರ

A) ಒಳಾವರಣವಾಗಿದ್ದರೆ


- ಎಲೆಕ್ಟ್ರಿಕಲ್ಸ್ ಮೇನ್ಸ್, ಗ್ಯಾಸ್ ಸರಬರಾಜು ಸ್ವಿಚ್ ಆಫ್ ಮಾಡಿ.
- ಬಾಗಿಲುಗಳು ಮತ್ತು ಕಿಟಕಿಗಳನ್ನು ಮುಚ್ಚಿರಿ.
- ನಿಮ್ಮ ಮನೆ ಅಸುರಕ್ಷಿತವಾಗಿದ್ದರೆ ಸೈಕ್ಲೋನ್ ಆವರಿಸುವ ಮುನ್ನ ಆದಷ್ಟು ಬೇಗ ಖಾಲಿ ಮಾಡಿ.
- ರೇಡಿಯೋ / ಟ್ರಾನ್ಸಿಸ್ಟರ್‌ಗಳನ್ನು ಕೇಳುತ್ತಾ ಇರಿ.
- ಬಿಸಿ/ಕ್ಲೋರಿನೇಟೆಡ್ ನೀರನ್ನು ಕುಡಿಯಿರಿ.
- ಅಧಿಕೃತ ಎಚ್ಚರಿಕೆಗಳಿಗೆ ಮಾತ್ರವೇ ಪ್ರತಿಕ್ರಿಯಿಸಿ.

B) ಹೊರಾವರಣವಾಗಿದ್ದರೆ

- ಜಖಂಗೊಂಡ ಕಟ್ಟಡಗಳಿಗೆ ಪ್ರವೇಶಿಸಬೇಡಿ.
- ಮುರಿದು ಹೋದ ಎಲೆಕ್ಟ್ರಿಕ್ ಕಂಬಗಳು ಮತ್ತು ವೈರ್‌ಗಳು, ಹಾಗೂ ಇನ್ನಿತರೆ ಚೂಪಾದ ಪದಾರ್ಥಗಳ ಬಗ್ಗೆ ಎಚ್ಚರಿಕೆ ವಹಿಸಿ.
- ಸಾಧ್ಯವಾದ ಮಟ್ಟಿಗೆ ಮುಂಚಿತವಾಗಿ ಸುರಕ್ಷತಾ ಸೂರನ್ನು ಕಂಡುಕೊಳ್ಳಿ.

CBC19106/13/0021/2223

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ
ಭಾರತ ಸರ್ಕಾರ
@NDMA.in @ndmaindia /ndmaindia /NDMAIndia
ಕರೆಮಾಡಿ 112
www.ndma.gov.in



ವಿರಾಜಪೇಟೆ ರಸ್ತೆಗಳು ಗುಂಡಿಮಯ

ಪುರಸಭೆಯ ವಿರುದ್ಧ ನಾಗರಿಕ ಸಮಿತಿ ಆಕ್ರೋಶ



ವಿರಾಜಪೇಟೆ, ನ.4– ವಿರಾಜಪೇಟೆ ನಗರದ ಎಲ್ಲಾ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ಪುರಸಭೆಯ ನಿರ್ಲಕ್ಷ್ಯದಿಂದ ವಾಹನ ಸವಾರರು ಮತ್ತು ಸಾರ್ವಜನಿಕರು ಪರಿತಪಿಸುವಂತಾಗಿದೆ ಎಂದು ನಾಗರಿಕ ಸಮಿತಿ ಸಂಚಾಲಕ ಡಾ.ದುರ್ಗಾ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ನಾಗರಿಕ ಸಮಿತಿ ವತಿಯಿಂದ ನಗರದ ಬ್ರೈಟ್ ಶಾಲಾ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಸ್ವಚ್ಛತೆ ಕಾಪಾಡುವಲ್ಲಿ ಪುರಸಭೆ ವಿಫಲವಾಗಿದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದೆ. ಶುದ್ಧ ಕುಡಿಯುವ ನೀರು ಒದಗಿಸಲು ಸಾಧ್ಯವಾಗದೆ ನಿವಾಸಿಗಳಿಗೆ ನೀರಿನ ಕರವನ್ನು ಏರಿಸಲಾಗಿದೆ. ಆದ್ದರಿಂದ ಪುರಸಭೆ ಅಧಿಕಾರಿಗಳು ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಅವರು ಆಗ್ರಹಿಸಿದರು. ಹಲವು ಬಾರಿ ಸಮಸ್ಯೆಗಳ ಪರಿಹಾರಕ್ಕೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆ ನಾಗರಿಕ ಸಮಿತಿಯಿಂದ ಮುಂದಿನ ದಿನದಲ್ಲಿ ಪುರಸಭೆ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಇದೇ ವೇಳೆ ಎಚ್ಚರಿಕೆ ನೀಡಿದರು.

ನಾಗರಿಕ ಸಮಿತಿಯ ಸಹ ಸಂಚಾಲಕ ವಕೀಲ ಸೋಮ ಲೋಕನಾಥ್ ಮಾತನಾಡಿ, ವಿರಾಜಪೇಟೆ ಪಟ್ಟಣ ಪಂಚಾಯಿತಿಯನ್ನು ಉನ್ನತ ಮಟ್ಟಕ್ಕೇರಿಸಿ ಈಗ ಪುರಸಭೆ ಮಾಡಲಾಗಿದೆ. ಆದರೂ ನಗರದ ಸಮಸ್ಯೆಗಳು ಹೆಚ್ಚಾಗಿದ್ದು, ಈ ಹಿಂದೆ ಮಾಡಿರುವ ಅನೇಕ ಕಾಮಗಾರಿಗಳು ಕಳಪೆಯಿಂದ ಕೂಡಿರುವುದು ಕಂಡು ಬಂದಿದೆ. ಸರ್ಕಾರದಿಂದ ಬಂದ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಮಾಡಬೇಕಾಗಿದೆ ಎಂದರು.

ಈಗ ಲಿಂಗಯ್ಯನ ಓಣಿ ಕಾಂಕ್ರೀಟ್ ರಸ್ತೆ ಒಂದೇ ಮಳೆಗೆ ಗುಂಡಿಯಾಗಿದೆ. ಪುರಸಭೆ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಯ ಮುಖ್ಯ ರಸ್ತೆಗಳಂತು ವಾಹನಗಳ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿದೆ. ಆದ್ದರಿಂದ ನಾಗರಿಕ ಸಮಿತಿ ಹೋರಾಟಕ್ಕೆ ತಯಾರಿ ನಡೆಸಿದೆ ಎಂದರು.

ಸಮಿತಿಯ ಪಿ.ಕೆ.ಅಬ್ದುಲ್ ರೆಹಮನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಿತಿಯ ಎನ್.ಕೆ.ಶರೀಫ್ ಮತ್ತು ಎಲ್.ಜಿ. ಅಶೋಕ್ ಉಪಸ್ಥಿತರಿದ್ದರು.

ಪೌತಿ ಖಾತೆ ಆಂದೋಲನ

ಮಡಿಕೇರಿ,ನ4– ಪೊನ್ನಂಪೇಟೆ ಹೋಬಳಿ ಹಳ್ಳಿಗಟ್ಟು ಹುದೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಪೌತಿ ಖಾತೆ ಆಂದೋಲನ ನಡೆಯಿತು. ಪೊನ್ನಂಪೇಟೆ ಹೋಬಳಿಯ ಕಂದಾಯ ಪರಿವೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಸಿಬ್ಬಂದಿ ಇದ್ದರು.

ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯಾವಳಿ

ಸೆಮಿಫೈನಲ್‌ಗೆ 16 ತಂಡಗಳ ಸೆಣಸಾಟ

ಗೋಣಿಕೊಪ್ಪ, ನ.4– ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನದಲ್ಲಿ ಕೊಡವ ಹಾಕಿ ಅಕಾಡೆಮಿ ವತಿಯಿಂದ ನಡೆಯುತ್ತಿರುವ ಪಾಂಡಂಡ ಎಂ. ಕುಟ್ಟಪ್ಪ ಜ್ಞಾಪಕಾರ್ಥದ ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯಾವಳಿಯಲ್ಲಿ 16 ತಂಡಗಳು ಸೆಮಿಫೈನಲ್‌ಗೆ ಪ್ರವೇಶ ಪಡೆಯಲು ಹೋರಾಟ ನಡೆಸಲಿವೆ.

ಪ್ರೀಕ್ವಾರ್ಟರ್‌ಗೆ ಪ್ರವೇಶ ಪಡೆದಿರುವ ಪರದಂಡ, ಮಾತಂಡ, ಮಚ್ಚಂಡ, ಮಂಡೇಪಂಡ, ಕುಲ್ಲೇಟಿರ, ಚೆಪ್ಪುಡೀರ, ಪೆಮ್ಮಂಡ, ಚೇಂದಂಡ, ಕುಪ್ಪಂಡ (ಕೈಕೇರಿ), ಚೆಕ್ಕೇರ, ಚೇನಂಡ, ಮಾರ್ಚಂಡ, ಕಲಿಯಂಡ, ಸೋಮೆಯಂಡ, ಕಡೇಮಾಡ ಹಾಗೂ ನೆಲ್ಲಮಕ್ಕಡ ತಂಡಗಳಿಂದ ಶನಿವಾರ ರೋಚಕ ಹಣಾಹಣಿ ನಿರೀಕ್ಷಿಸಲಾಗಿದೆ.

ಫಲಿತಾಂಶ ; ಮಾರ್ಚಂಡಕ್ಕೆ ಮೇಕೇರಿರ ವಿರುದ್ಧ 4–2 ಗೋಲುಗಳ ಜಯ ದೊರೆಯಿತು. ಮಾರ್ಚಂಡ ನಾಚಪ್ಪ 2, ಸುಬ್ರಮಣಿ, ಪಳಂಗಪ್ಪ, ಮೇಕೇರಿರ ರೋನಕ್, ನೆಹಾಲ್ ತಲಾ ಒಂದೊಂದು ಗೋಲುಗಳ ಕಾಣಿಕೆ ನೀಡಿದರು.

ಸೋಮೆಯಂಡವು ಕೋಟೇರವನ್ನು 6–3 ಗೋಲುಗಳಿಂದ ಸೋಲಿಸಿತು. ಸೋಮೆಯಂಡ ಅಪ್ಪಚ್ಚು 4, ಅಪ್ಪಯ್ಯ 2, ಕೋಟೇರ ಕೌಶಿಕ್ 2, ಭರತ್ 1 ಗೋಲು ಹೊಡೆದರು.

ಕಡೇಮಡಕ್ಕೆ ಇಟ್ಟೀರ ವಿರುದ್ಧ 5–4 ಗೋಲುಗಳ ರೋಚಕ ಗೆಲುವು ದೊರೆಯಿತು. ಕಡೇಮಾಡ ಚರ್ಮಣ 4, ಕಾವೇರಪ್ಪ 1, ಇಟ್ಟೀರ ಅಚ್ಚಯ್ಯ 2, ಕಿರಣ್, ಕುಟ್ಟಪ್ಪ ತಲಾ ಒಂದೊಂದು ಗೋಲು ದಾಖಲೆ ಮಾಡಿದರು.

ನೆಲ್ಲಮಕ್ಕಡ ತಂಡವು ಪೊರುಕೊಂಡವನ್ನು 6–1 ಗೋಲುಗಳಿಂದ ಮಣಿಸಿತು. ನೆಲ್ಲಮಕ್ಕಡ ಸೋಮಯ್ಯ 3, ಪೂವಣ್ಣ, ಮೊಣ್ಣಪ್ಪ, ಸಚಿನ್, ಪೊರುಕೊಂಡ ಅನಿಲ್ ಒಂದೊಂದು ಗೋಲುಗಳ ಕಾಣಿಕೆ ನೀಡಿದರು.



ಮೇಕೇರಿರ ದೇಯಂಡವನ್ನು 11–5 ಗೋಲುಗಳಿಂದ ಮಣಿಸಿತು. ಮೇಕೇರಿರ ನೆಹಾಲ್ 9, ದೇಯಂಡ ಸಂಜು 4, ಮೇಕೇರಿರ ನವೀನ್, ರೋನಕ್ ದೇಯಂಡ ಯಶಿಕ್ ತಲಾ ಒಂದೊಂದು ಗೋಲುಗಳ ಕಾಣಿಕೆ ನೀಡಿದರು.

ಮಾರ್ಚಂಡಕ್ಕೆ ಶಾಂತೇಯಂಡ ವಿರುದ್ಧ 12–4 ಗೋಲುಗಳ ಜಯ ಲಭಿಸಿತು. ಮಾರ್ಚಂಡ ನಾಚಪ್ಪ 5, ಸುಬ್ರಮಣಿ 4, ಪಳಂಗಪ್ಪ 3, ಶಾಂತೇಯಂಡ ವಿಕಾಸ್, ತನೀಶ್, ಉತ್ತಪ್ಪ, ತಿಮ್ಮಯ್ಯ ತಲಾ 1 ಗೋಲು ಹೊಡೆದರು.

ಕೋಟೇರವು ಅಪ್ಪಂಡೇರಂಡವನ್ನು 11–6 ಗೋಲುಗಳಿಂದ ಸೋಲಿಸಿತು. ಕೋಟೇರ ಕೌಶಿಕ್ 6, ದಿಲಿಪ್ 3, ಭರತ್, ನಾಣಯ್ಯ ತಲಾ 1, ಅಪ್ಪಂಡೇರಂಡ ಬೋಪಣ್ಣ ಮತ್ತು ಪೂವಯ್ಯ ತಲಾ 3 ಗೋಲು ಬಾರಿಸಿದರು.

ಸೋಮೆಯಂಡಕ್ಕೆ ಮಚ್ಚಾರಂಡ ವಿರುದ್ಧ 10–3 ಗೋಲುಗಳ ಗೆಲುವು ದೊರೆಯಿತು. ಸೋಮೆಯಂಡ ಅಪ್ಪಚ್ಚು 6, ವಚನ್ 3, ಪ್ರಯಾಗ್ 1, ಮಚ್ಚಾರಂಡ ಗಗನ್ 3 ಗೋಲು ಹೊಡೆದರು.

ಇಟ್ಟೀರವು ಪೊನ್ನೋಲತಂಡವನ್ನು 9–2 ಗೋಲುಗಳಿಂದ ಮಣಿಸಿತು. ಇಟ್ಟೀರ ಅಚ್ಚಯ್ಯ 5, ಅಚ್ಚಪ್ಪ 3, ಕುಟ್ಟಪ್ಪ 1, ಪೊನ್ನೋಲ ತಂಡ ನಾಣಯ್ಯ, ಅಶ್ವತ್ ತಲಾ ಒಂದೊಂದು ಗೋಲು ಬಾರಿಸಿದರು.

ಪೊರುಕೊಂಡವು ಪಾಂಡಂಡವನ್ನು 4–3 ಗೋಲುಗಳಿಂದ ಸೋಲಿಸಿತು. ಪೊರುಕೊಂಡ ಅನಿಲ್ 3, ಲವ 1, ಪಾಂಡಂಡ ಕಾರ್ಲ್ 2, ಅಯ್ಯಪ್ಪ 1 ಗೋಲು ಹೊಡೆದರು.

ಕಡೇಮಡವು ಮುಕ್ಕಾಟೀರ (ಪುಲಿಕೋಟ್) ವಿರುದ್ಧ 8–4 ಗೋಲುಗಳ ಅಂತರದಲ್ಲಿ ಜಯಿಸಿತು. ಕಡೇಮಡ ಚರ್ಮಣ 4, ಕಾವೇರಪ್ಪ 3, ಕುಶಾಲಪ್ಪ 1, ಮುಕ್ಕಾಟೀರ ಮುತ್ತಪ್ಪ 3, ಕಾಳಪ್ಪ 1 ಗೋಲು ಹೊಡೆದರು. ನೆಲ್ಲಮಕ್ಕಡವು ಪುಚ್ಚಿಮಂಡವನ್ನು 8–3 ಗೋಲುಗಳಿಂದ ಸೋಲಿಸಿತು. ನೆಲ್ಲಮ್ಕಕಡ ಪೂವಣ್ಣ, ಸೋಮಯ್ಯ ತಲಾ 2, ಸಚಿನ್, ಅಯ್ಯಪ್ಪ, ಮೊಣ್ಣಪ್ಪ, ಅಪ್ಪಣ್ಣ, ಪುಚ್ಚಿಮಂಡ ಅಯ್ಯಪ್ಪ, ಭವನ್, ಯಶ್ವಿನ್ ತಲಾ 1 ಗೋಲು ದಾಖಲಿಸಿದರು.

ನಾಳೆ ಸಮಾರೋಪ ಸಮಾರಂಭ


ಮಡಿಕೇರಿ: ಕೊಡವ ಹಾಕಿ ಅಕಾಡೆಮಿ ವತಿಯಿಂದ ಕೊಡವ ಹಾಕಿ ಹಬ್ಬದ ಜನಕ ಪಾಂಡಂಡ ಕುಟ್ಟಪ್ಪ(ಕುಟ್ಟಣಿ) ಅವರ ಸ್ಮರಣಾರ್ಥ ಕೊಡವ ಕುಟುಂಬ ತಂಡಗಳ ನಡುವೆ ನಡೆಯುತ್ತಿರುವ 5–ಎ ಸೈಡ್ ಹಾಕಿ ನಮ್ಮೆಯ ಸಮಾರೋಪ ಸಮಾರಂಭ ನ.6ರಂದು ನಡೆಯಲಿದೆ. ಪೊನ್ನಂಪೇಟೆ ಟರ್ಫ್ ಮೈದಾನದಲ್ಲಿ ಮಧ್ಯಾಹ್ನ 2.30 ಗಂಟೆಗೆ ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ.

ಗೌರವ ಅತಿಥಿಯಾಗಿ ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಪಾಂಡಂಡ ಲೀಲಾ ಕುಟ್ಟಪ್ಪ ಪಾಲ್ಗೊಳ್ಳಲಿದ್ದು, ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಜಿ.ಬೋಪಯ್ಯ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ಭಾಗವಹಿಸಲಿದ್ದಾರೆ.

ಬಾಯಿ ಜ್ವರ ರೋಗ ನಿರೋಧಕ ಲಸಿಕೆ ಕಾರ್ಯಕ್ರಮ

ಮಡಿಕೇರಿ, ನ.4– ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ನ.7 ರಿಂದ ಡಿ.7 ರವರೆಗೆ 3ನೇ ಸುತ್ತಿನ ಕಾಲು ಬಾಯಿ ಜ್ವರ ರೋಗ ನಿರೋಧಕ ಲಸಿಕೆ ಹಾಕುವ ಕಾರ್ಯಕ್ರಮ ನಡೆಯಲಿದೆ. ಆದ್ದರಿಂದ ಜಿಲ್ಲೆಯ ರೈತ ಬಾಂಧವರು ತಮ್ಮ ರಾಸುಗಳಿಗೆ ತಪ್ಪದೇ ಲಸಿಕೆ ಹಾಕಿಸುವಂತೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಸುರೇಶ್ ಭಟ್ ಕೋರಿದ್ದಾರೆ.

ಸೋಮಿನಿ ಥಾಮಸ್ ನಿಧನ



ಕುಶಾಲನಗರ, ನ.4– ಕಾಂಗ್ರೆಸ್ ಮುಖಂಡ ಕೆ.ಥಾಮಸ್ ಅವರ ಪತ್ನಿ ಸೋಮಿನಿ ಥಾಮಸ್ ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಪುತ್ರಿ ಹಾಗೂ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಕುಶಾಲನಗರದ ಕ್ರೈಸ್ತ ರುದ್ರಭೂಮಿಯಲ್ಲಿ ನಡೆಯಲಿದೆ.

ರಾಜ್ಯದಲ್ಲಿ ಪರಿವರ್ತನೆಯ ಗಾಳಿ ಬೀಸುತ್ತಿದೆ

ಬಿಜೆಪಿ ಸಂಕಲ್ಪ ಸಭೆಯಲ್ಲಿ ರಾಜ್ಯಾಧ್ಯಕ್ಷ ಕಟೀಲ್ ಹೇಳಿಕೆ

● ಶಾಸಕರು, ನಾಯಕರಿಲ್ಲದೆ ಕಾಂಗ್ರೆಸ್ ಅತಂತ್ರ



ಮಂಡ್ಯ, ನ.4– ಸಿದ್ದರಾಮಯ್ಯ ಅವರು 5 ವರ್ಷ ಆಡಳಿತ ನಡೆಸಿದರು. ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಪರಿಹಾರ ನೀಡಲಿಲ್ಲ. ಹಿಂದೂಗಳ ಭಾವನೆಗೆ ಧಕ್ಕೆ ತಂದರು ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಕಿಡಿಕಾರಿದ್ದಾರೆ.

ನಗರದ ಕಾಳಿಕಾಂಬ ದೇವಾಲಯದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಂಕಲ್ಪ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಪರಿವರ್ತನೆ ಗಾಳಿ ಬೀಸುತ್ತಿದೆ. ಕಾಂಗ್ರೆಸ್ ಅತಂತ್ರ ಸ್ಥಿತಿಯಲ್ಲಿದೆ. ಕಾಂಗ್ರೆಸ್‌ನಲ್ಲಿ ಶಾಸಕರು, ನಾಯಕರಿಲ್ಲದೆ ಖಾಲಿಯಾಗಿದೆ ಎಂದು ವಾಗ್ದಾಳಿ ನಡೆಸಿದರು.

ಪಿಎಫ್‌ಐ ಸಂಘಟನೆಯ 2 ಸಾವಿರ ಜನರನ್ನು ಜೈಲಿನಿಂದ ಹೊರಗೆ ತಂದರು. ಹಿಂದೂ–ಮುಸ್ಲಿಂ ನಡುವೆ ಒಡೆದಾಳುವ ನೀತಿ ಅನುಸರಿಸಿದರು. ವೀರಶೈವ–ಲಿಂಗಾಯಿತ ಸಮುದಾಯವನ್ನು ಒಡೆಯಲು ಯತ್ನಿಸಿದರು. ಅಹಿಂದ ಹೆಸರಿನಲ್ಲಿ ಅಧಿಕಾರ ಪಡೆದ ಇವರು ಅಹಿಂದ ವರ್ಗದವರಿಗೆ ಅವಮಾನ ಮಾಡಿದರು ಎಂದು ಟೀಕಾ ಪ್ರಹಾರ ನಡೆಸಿದರು.

ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಾ.ಜಿ.ಪರಮೇಶ್ವರ್ ಅವರನ್ನು ಸೋಲಿಸಿದರು. ಅದರಂತೆ ಈ ಬಾರಿ ಸಿದ್ದರಾಮಯ್ಯ ಅವರನ್ನು ಮಲ್ಲಿಕಾರ್ಜುನ ಖರ್ಗೆ ಸೋಲಿಸಿದರೆ, ಡಿ.ಕೆ.ಶಿವಕುಮಾರ್ ಅವರನ್ನು ಸಿದ್ದರಾಮಯ್ಯ ಸೋಲಿಸಲಿದ್ದಾರೆ. ಒಂದು ರೀತಿಯ ಒಡೆದ ಮನೆಯಾಗಿ ಪರಿವರ್ತನೆಯಾಗಿದೆ ಎಂದರು.

ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಕಣ್ಣೀರು ನಾಯಕ. ಅಧಿಕಾರ ಇದ್ದಾಗ, ಇಲ್ಲದಿದ್ದಾಗಲೂ ಹಾಗೂ ಪ್ರಸ್ತುತ ಕಣ್ಣೀರು ಹಾಕುತ್ತಲೇ ಇದ್ದಾರೆ. ಕಣ್ಣೀರು ಹಾಕುವ ಮೂಲಕ ಭಾವನಾತ್ಮಕವಾಗಿ ಜನರನ್ನು ಸೆಳೆಯುತ್ತಿದ್ದಾರೆ. ಇವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜನರ ಸಮಸ್ಯೆ ಆಲಿಸಲಿಲ್ಲ. ಶಾಸಕರ ಕೈಗೆ ಸಿಗಲಿಲ್ಲ. ಒಂದೂ ದಿನವೂ ವಿಧಾನಸೌಧದಲ್ಲಿ ಕುಳಿತು ಆಡಳಿತ ನಡೆಸಲಿಲ್ಲ. ಕೇವಲ ತಾಜ್ ಹೋಟೆಲ್‌ನಲ್ಲಿ ಆಡಳಿತ ನಡೆಸಿದರು ಎಂದು ವ್ಯಂಗ್ಯವಾಡಿದರು.

ಮುಂದಿನ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ ಕಮಲ ಅರಳಲಿದೆ. ಜಾತಿ ರಾಜಕಾರಣ ಮುಗಿಯಲಿದೆ. ಜಾತಿ ಹೆಸರಿನಲ್ಲಿ ರಾಜಕಾರಣ ಮಾಡಿದವರು, ನಾಡಪ್ರಭು ಕೆಂಪೇಗೌಡರಿಗೆ ಗೌರವ ಸಲ್ಲಿಸುವ ಕೆಲಸ ಮಾಡಲಿಲ್ಲ. ಆದರೆ ಬಿಜೆಪಿ ಕೆಂಪೇಗೌಡರ ಪ್ರತಿಮೆ, ಥೀಮ್ ಪಾರ್ಕ್ ನಿರ್ಮಾಣ ಮಾಡುವ ಮೂಲಕ ಗೌರವ ಸಲ್ಲಿಸುತ್ತಿದೆ ಎಂದರು.

ಭ್ರಷ್ಟಾಚಾರದ ಪಿತಾಮಹ ಕಾಂಗ್ರೆಸ್ ಆಗಿದೆ. ಇಡೀ ಕಾಂಗ್ರೆಸ್ ನಾಯಕರು ಜೈಲಿಗೆ ಹೋಗಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಅರ್ಕಾವತಿ, ಚೆಕ್ ಹಗರಣಗಳು ಶೀಘ್ರದಲ್ಲಿಯೇ ಹೊರಬರಲಿದ್ದು, ಜೈಲಿಗೆ ಹೋಗಲಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಕಾಂಗ್ರೆಸ್‌ನದ್ದು ಭ್ರಷ್ಟಾಚಾರ, ಭಯೋತ್ಪಾದನೆ ಹಾಗೂ ಪರಿವಾರ ರಾಜಕಾರಣವಾಗಿದೆ. ಭಯೋತ್ಪಾದನೆ ಕಾಂಗ್ರೆಸ್‌ನ ಇನ್ನೊಂದು ಮುಖ. ಗಾಂಧಿ ಕುಟುಂಬದ ಗುಲಾಮಗಿರಿಯ ರಾಜಕಾರಣ ಕಾಂಗ್ರೆಸ್ ಮಾಡುತ್ತಿದೆ. ಗಾಂಧಿ ಹೆಸರಲ್ಲಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಸಭೆಯಲ್ಲಿ ಸಚಿವ ಕೆ.ಗೋಪಾಲಯ್ಯ, ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ, ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮಾಜಿ ಸಚಿವ ಬಿ.ಸೋಮಶೇಖರ್, ಮುಖಂಡರಾದ ಮುನಿರಾಜು, ಚಂದಗಾಲು ಶಿವಣ್ಣ, ಡಾ. ಸಿದ್ದರಾಮಯ್ಯ, ಅಶೋಕ್ ಜಯರಾಂ, ಡಾ.ಇಂದ್ರೇಶ್ ಹಾಗೂ ಮತ್ತಿತರರಿದ್ದರು.

ನ.7, ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮಂಡ್ಯ,ನ.4– ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಅಭಿವೃದ್ಧಿ ನಿಗಮ ಹಾಗೂ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಇವರುಗಳ ಸಂಯುಕ್ತಾಶ್ರಯದಲ್ಲಿ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಎಂ.ಎಸ್. ಕಾಯ್ದೆ 2013 ರಂತೆ ಸಫಾಯಿ ಕರ್ಮಚಾರಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ನ.7 ರಂದು ಬೆಳಗ್ಗೆ 10 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಅವರು ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ರೇಷ್ಮೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣಗೌಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವ ಕೋಟಶ್ರೀನಿವಾಸ ಪೂಜಾರಿ ಅವರು ಭಾಗವಹಿಸಲಿದ್ದಾರೆ.

ಏಕ ಬಳಕೆ ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಲು ಕಾರ್ಯಪಡೆ



ಮಂಡ್ಯ, ನ.4– ಜಿಲ್ಲೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ನಿಯಂತ್ರಿಸಲು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಪೊಲೀಸ್ ಸಿಬ್ಬಂದಿಗಳನ್ನೊಳಗೊಂಡ ಕಾರ್ಯ ಪಡೆ ರಚಿಸುವಂತೆ ಜಿಲ್ಲಾಧಿಕಾರಿ ಡಾ. ಎಚ್.ಎನ್. ಗೋಪಾಲ ಕೃಷ್ಣ ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ನಗರ ಸ್ಥಳೀಯ ಸಂಸ್ಥೆಗಳ ವಿವಿಧ ಯೋಜನೆಗಳು ಹಾಗೂ ಘನ ತ್ಯಾಜ್ಯ ವಸ್ತು ನಿರ್ವಹಣೆಯ ಟಾಸ್ಕ್ ಫೋರ್ಸ್ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಏಕ ಬಳಕೆ ಪ್ಲಾಸ್ಟಿಕ್ ಪರಿಸರಕ್ಕೆ ಹಾನಿಕರಕವಾಗಿದ್ದು, ಅವುಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಕಾರ್ಯಪಡೆ ನಿಗದಿತವಾಗಿ ದಾಳಿ ನಡೆಸಿ ಏಕಬಳಕೆ ಪ್ಲಾಸ್ಟಿಕ್ ಮಾರಾಟ, ಬಳಕೆ ನಿಯಂತ್ರಿಸಬೇಕು ಎಂದರು.

ನಗರ ಸ್ಥಳೀಯ ಸಂಸ್ಥೆಗಳು 14ನೇ ಹಾಗೂ 15ನೇ ಹಣಕಾಸು ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನದ ಹಂತದಲ್ಲಿದೆ. ಟೆಂಡರ್ ಆಹ್ವಾನ ಮಾಡಬೇಕು ಹಾಗೂ ಕಾಮಗಾರಿ ಪ್ರಾರಂಭ ಮಾಡಿರುವ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದರು.

ಎಸ್.ಸಿ.ಪಿ ಹಾಗೂ ಟಿ.ಎಸ್.ಪಿ ಯೋಜನೆಯಡಿ ಕೈಗೊಂಡಿರುವ ಹಿಂದಿನ ಸಾಲಿನ ಕಾಮಗಾರಿಗಳನ್ನು ಶೇ.100 ರಷ್ಟು ಹಾಗೂ ಪ್ರಸಕ್ತ ಸಾಲಿನ ಕಾಮಗಾರಿಗಳನ್ನು ಶೇ. 50 ರಷ್ಟು ಈ ಮಾಹೆಯ ಅಂತ್ಯದೊಳಗೆ ಪ್ರಗತಿ ಸಾಧಿಸಿ ಮುಂದಿನ ಸಭೆಗೆ ವರದಿ ಸಲ್ಲಿಸಬೇಕು ಎಂದು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ತಿಳಿಸಿದರು.

ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತಂತೆ ಮನೆಗಳಿಂದ ಕಸ ಸಂಗ್ರಹಿಸುವ ಸಂದರ್ಭದಲ್ಲೇ ಹಸಿ ಹಾಗೂ ಒಣ ತ್ಯಾಜ್ಯವನ್ನು ಬೇರ್ಪಡಿಸಿ ಸಂಗ್ರಹಿಸಲು ಯೋಜನೆ ರೂಪಿಸಿಕೊಳ್ಳಬೇಕು. ಸಾರ್ವಜನಿಕರಲ್ಲಿ ತ್ಯಾಜ್ಯ ಪ್ರತ್ಯೇಕ ಸಂಗ್ರಹಣೆಯ ಬಗ್ಗೆ ಅರಿವು ಮೂಡಿಸಬೇಕು. ಡಿಸೆಂಬರ್ 15 ರೊಳಗಾಗಿ ಯೋಜನೆ ಅನುಷ್ಠಾನವಾಗಿ ಹಸಿ ಮತ್ತು ಒಣ ಕಸವನ್ನು ಬೇರೆ ಬೇರೆ ಸಂಗ್ರಹಿಸಿ ಸಂಸ್ಕರಿಸುವ ಕೆಲಸವಾಗಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಳಿನ ಕುಮಾರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ತುಷರಾ ಮಣಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸರಸ್ವತಿ, ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರ ನಾಗರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಪಾರ್ವತಿ ದೇವಿ, ಮಂಡ್ಯ ನಗರಸಭೆ ಆಯುಕ್ತ ಮಂಜುನಾಥ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಬೆಂಗಳೂರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ



ಮಂಡ್ಯ, ನ.4– ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಪ್ರಥಮ ಬಾರಿಗೆ ತವರು ರಾಜ್ಯಕ್ಕೆ ಆಗಮಿಸುತ್ತಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸ್ವಾಗತ ಕೋರಲು ನ.6ರಂದು ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್‌ನಲ್ಲಿ ಅದ್ಧೂರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಪಿಸಿಸಿಯ ಎಲ್ಲಾ ಪದಾಧಿಕಾರಿಗಳು ಸೇರಿದಂತೆ ಪಕ್ಷದ ಸಂಸದರು, ಶಾಸಕರು, ಎಲ್ಲಾ ಜಿಲ್ಲಾಧ್ಯಕ್ಷರು, ಮುಂಚೂಣಿ ಘಟಕಗಳ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಜಿಲ್ಲೆಯ ಪ್ರತಿ ತಾಲೂಕಿನಿಂದ ತಲಾ 2 ರಿಂದ 3 ಸಾವಿರ ಕಾರ್ಯಕರ್ತರಂತೆ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ತೆರಳಲಿದ್ದಾರೆ ಎಂದು ತಿಳಿಸಿದರು.

ಶ್ರೀ ಚಾಮರಾಜೇಶ್ವರ ದೇವಸ್ಥಾನದ ವಿದ್ಯುತ್ ಸಂಪರ್ಕ ಕಟ್

ಚಾಮರಾಜನಗರ, ನ.4–ಬಿಲ್ ಬಾಕಿ ಹಿನ್ನೆಲೆಯಲ್ಲಿ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ಭಕ್ತರು ಕಗ್ಗತ್ತಲಿನಲ್ಲಿಯೇ ಭಕ್ತರು ದೇವರ ದರ್ಶನ ಪಡೆದರು.

ಶ್ರೀಚಾಮರಾಜೇಶ್ವರ ದೇವಸ್ಥಾನದ ವಿದ್ಯುತ್ ಸುಮಾರು 60 ಸಾವಿರ ರೂ. ಬಾಕಿ ಇತ್ತು ಎನ್ನಲಾಗಿದೆ. ಈ ಹಣವನ್ನು ಮುಜರಾಯಿ ಇಲಾಖೆ ಪಾವತಿಸದ ಕಾರಣ ಸೆಸ್ಕ್ ಸಿಬ್ಬಂದಿ ದೇವಸ್ಥಾನದ ವಿದ್ಯುತ್ ಸಂಪರ್ಕವನ್ನು ಗುರುವಾರ ಸಂಜೆ ಕಡಿತಗೊಳಿಸಿದರು. ಹೀಗಾಗಿ ಭಕ್ತರು ಬ್ಯಾಟರಿ ಬೆಳಕಲ್ಲೇ ರಾತ್ರಿ ದೇವರ ದರ್ಶನ ಪಡೆದರು. ವಿಷಯ ತಿಳಿದ ಮುಜರಾಯಿ ಇಲಾಖೆ ಅಧಿಕಾರಿಗಳು ಶುಕ್ರವಾರ ದೇವಸ್ಥಾನದ ವಿದ್ಯುತ್ ಬಿಲ್ ಪಾವತಿಸಿದರು ಎನ್ನಲಾಗಿದೆ. ನಂತರ ಸೆಸ್ಕ್ ಸಿಬ್ಬಂದಿ ವಿದ್ಯುತ್ ಸಂಪರ್ಕ ಕಲ್ಪಿಸಿದರು.

ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧ ದಲಿತ ಮುಖಂಡರ ಅಸಮಾಧಾನ

ಧ್ರುವನಾರಾಯಣ್ ಸಂಧಾನ ಸಭೆ ವಿಫಲ



ಚಾಮರಾಜನಗರ,ನ.4–ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ವಿರುದ್ಧ ಕಾಂಗ್ರೆಸ್ ದಲಿತ ಮುಖಂಡರು ಅಸಮಾಧಾನಗೊಂಡಿರುವ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಡೆಸಿದ ಸಂಧಾನ ಸಭೆ ವಿಫಲವಾಯಿತು.

ಸಂತೇಮರಳ್ಳಿ ಪ್ರವಾಸಿಮಂದಿರದಲ್ಲಿ ಆರ್.ಧ್ರುವನಾರಾಯಣ್ ಗುರುವಾರ ರಾತ್ರಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಪಕ್ಷದ ದಲಿತ ಮುಖಂಡರ ಸಂಧಾನ ಸಭೆ ನಡೆಸಿದರೂ ಯಾವುದೇ ತೀರ್ಮಾನ ಕೈಗೊಳ್ಳಲಾಗಲಿಲ್ಲ. ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಕಾರ್ಯ ವೈಖರಿಸಿ ಬಗ್ಗೆ ಪಕ್ಷದ ದಲಿತ ಮುಖಂಡರು ಅಸಮಾಧಾನಗೊಂಡು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನ.1ರಂದು ಸಭೆ ನಡೆಸಿದ್ದರು. ಸಭೆಯ ನಿರ್ಣಯದಂತೆ ಅಸಮಾಧಾನಿತ ದಲಿತ ಮುಖಂಡರು ಶಾಸಕರ ವಿರುದ್ಧ ಪಕ್ಷದ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರಿಗೆ ಲಿಖಿತ ದೂರು ಸಲ್ಲಿಸಿದ್ದರು. ಈ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯ ನ.4ರ ಸಂಚಿಕೆಯ ಪುಟ 7ರಲ್ಲಿ ಶಾಸಕ ಪುಟ್ಟರಂಗಟ್ಟಿ ವಿರುದ್ಧ ಸಿಡಿದೆದ್ದ ಕಾಂಗ್ರೆಸ್ ದಲಿತ ಮುಖಂಡರು ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಧ್ರುವನಾರಾಯಣ್ ಸಂತೇಮರಳ್ಳಿ ಪ್ರವಾಸಿ ಮಂದಿರದಲ್ಲಿ ಶಾಸಕರು ಹಾಗೂ ಅಸಮಾಧಾನಿತರ ಸಭೆ ಕರೆದಿದ್ದರು. ಸಭೆಯ ಆರಂಭದಲ್ಲೇ ಪುಟ್ಟರಂಗಶೆಟ್ಟಿ ಅವರ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತವಾಯಿತು. ಪುಟ್ಟರಂಗಶೆಟ್ಟಿ ಅವರೂ ಸಹ ತಮ್ಮ ಉತ್ತರ ನೀಡಿದರು. ನಂತರ ಪುಟ್ಟರಂಗಶೆಟ್ಟಿ ಅವರ ಪರವಾಗಿ ಕೆಲ ಮುಖಂಡರು ಮಾತನಾಡಲು ಆರಂಭಿಸಿದಾಗ ಗೊಂದಲ ಉಂಟಾಗಿ, ಮತ್ತೊಂದು ಸಭೆ ನಡೆಸಲು ತೀರ್ಮಾನಿಸಿ, ಸಭೆ ಮುಂದೂಡಲಾಯಿತು ಎಂದು ತಿಳಿದು ಬಂದಿದೆ.


ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ



ಚಾಮರಾಜನಗರ, ನ.4–ಬಿಜೆಪಿ ಯುವ ನಾಯಕ, ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಅವರ ಜನ್ಮದಿನದ ಅಂಗವಾಗಿ ನ.5ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಕನಕಪುರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗನ್ನಾಥ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ವೈ.ವಿಜಯೇಂದ್ರ ಅಭಿಮಾನಿ ಬಳಗದಿಂದ ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಬಸವರಾಜ ಸ್ವಾಮೀಜಿ ಅನುಭವ ಮಂಟಪದಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಶಿಬಿರ ನಡೆಯಲಿದ್ದು, ಕಣ್ಣಿನ ತಪಾಸಣೆ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಾ.ನಗರ ಬಿಜೆಪಿ ಗ್ರಾಮಾಂತರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಜ್ಯೋತಿ, ನಂದೀಶ್ ಕೊತ್ತಲವಾಡಿ, ಮಲ್ಲೇಶ್ ನಾಗವಳ್ಳಿ, ಬಿಜೆಪಿ ಓಬಿಸಿ ಜಿಲ್ಲಾ ಕಾರ್ಯದರ್ಶಿ ಚಿಕ್ಕಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಗೌಡಿಕೆ ಬಸವಣ್ಣ, ಬಿಜೆಪಿ ಗ್ರಾಮಾಂತರ ಮಂಡಲ ಕಾರ್ಯದರ್ಶಿ ನಲ್ಲೂರು ಶಿವರುದ್ರಸ್ವಾಮಿ ಇದ್ದರು.

ಪುಟ್ಟನಾಯಕ ನಿಧನ



ಚಾಮರಾಜನಗರ,ನ.4–ತಾಲೂಕಿನ ಜ್ಯೋತಿಗೌಡನಪುರ ಗ್ರಾಮ ನಿವಾಸಿ ಪುಟ್ಟನಾಯಕ(92) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರಿ, ಪುತ್ರ ಎಲ್‌ಐಸಿ ನಿವೃತ್ತ ಅಧಿಕಾರಿ ಗುರುಸಿದ್ದಯ್ಯ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ರಾಮಸಮುದ್ರದ ನಾಯಕರ ರುದ್ರಭೂಮಿಯಲ್ಲಿ ಶನಿವಾರ ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಶ್ರೀಕುಮಾರಿ



ಚಾಮರಾಜನಗರ, ನ.4–ನಗರದ ಭ್ರಮರಾಂಬ ಬಡಾವಣೆ ನಿವಾಸಿ ಕೃಷ್ಣಮೂರ್ತಿ ಪತ್ನಿ ಶ್ರೀಕುಮಾರಿ(72) ಶುಕ್ರವಾರ ನಿಧನರಾದರು ಮೃತರು ಪತಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಅಂತ್ಯಕ್ರಿಯೆ ಶನಿವಾರ ಶಂಕರ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

7,070 ಲೀ. ಸ್ಪಿರಿಟ್ ಸಾಗಿಸುತ್ತಿದ್ದ ಇಬ್ಬರ ಬಂಧನ



ಚಾಮರಾಜನಗ, ನ.4– ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 7,070 ಲೀ. ಪ್ರಮಾಣದ ಸ್ಪಿರಿಟ್ ಅನ್ನು ಪತ್ತೆ ಹಚ್ಚುವಲ್ಲಿ ರಾಮಸಮುದ್ರ ಠಾಣೆ ಪೊಲೀಸರು ಯಶಸ್ವಿಯಾಗಿದ್ದು, ಇಬ್ಬರನ್ನು ಬಂಧಿಸಿದ್ದಾರೆ.

ಕೇರಳ ಮೂಲದ ಕುಮಾರ್ ಹಾಗೂ ಮರಿ ಬಂಧಿತರು. ಗೂಡ್ಸ್ ವಾಹನದಲ್ಲಿ ಸ್ಪಿರಿಟ್ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ತಾಲೂಕಿನ ಪುಣಜನೂರು ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆ ಆರಂಭಿಸಲಾಯಿತು. ಈ ವೇಳೆ ಈರುಳ್ಳಿ ತುಂಬಿದ್ದ ಮಹೇಂದ್ರ ಗೂಡ್ಸ್ ವಾಹನ ಪರಿಶೀಲಿಸಿದಾಗ ಈರುಳ್ಳಿ ಮೂಟೆ ಕೆಳಗಡೆ ಸ್ಪಿರಿಟ್ ತುಂಬಿದ್ದ ಕ್ಯಾನ್‌ಗಳು ಪತ್ತೆಯಾಗಿ, 7070 ಲೀ. ಸ್ಪಿರಿಟ್ ಲಭ್ಯವಾಗಿದೆ. ಇದರ ಒಟ್ಟು ಮೌಲ್ಯ ಸುಮಾರು 5 ಲಕ್ಷ ರೂ. ಎಂದು ಅಂದಾಜಿಸಲಾಗಿದೆ. ಅಕ್ರಮವಾಗಿ ಸಾಗಿಸುತ್ತಿದ್ದ ಸ್ಪಿರಿಟ್ ಕೇರಳಕ್ಕೆ ಹೋಗುತ್ತಿತ್ತು ಎನ್ನಲಾಗಿದೆ.

ಕೇರಳಕ್ಕೆ ಸಂಪರ್ಕ ಕಲ್ಪಿಸುವ ಮಾತಂಗ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ಬಿಗಿಯಾಗಿರುವ ಕಾರಣ ತಮಿಳುನಾಡು ಮೂಲಕ ಕೇರಳಕ್ಕೆ ಸಾಗಿಸುವ ಯೋಜನೆ ಇದಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ರಾಮಸಮುದ್ರ ಠಾಣೆಯ ಇನ್ಸ್‌ಪೆಕ್ಟರ್ ಆನಂದ್ ಮತ್ತು ತಂಡ ಪ್ರಕರಣವನ್ನು ಪತ್ತೆಹಚ್ಚುವಲ್ಲಿ ಯಶಕಂಡಿದೆ.

ಹಳ್ಳಕ್ಕೆ ಉರುಳಿದ ಕೆಎಸ್‌ಆರ್‌ಟಿಸಿ ಬಸ್; 12 ಮಂದಿಗೆ ಗಾಯ



ಚಾಮರಾಜನಗರ, ನ.4–ಕೆಎಸ್‌ಆರ್‌ಟಿಸಿ ಬಸ್‌ವೊಂದು ರಸ್ತೆ ಬದಿಯ ಹಳ್ಳಕ್ಕೆ ಉರುಳಿ ಬಿದ್ದ ಪರಿಣಾಮ 12 ಪ್ರಯಾಣಿಕರು ಗಾಯಗೊಂಡಿರುವ ಘಟನೆ ನಗರದಲ್ಲಿ ಗುರುವಾರ ತಡರಾತ್ರಿ ಸಂಭವಿಸಿದೆ.

ಶಿವಮೊಗ್ಗ ಡಿಪೋಗೆ ಸೇರಿದ ಕೆಎಸ್‌ಆರ್‌ಟಿಸಿ ಬಸ್ ಕೊಯಮತ್ತೂರಿಗೆ ತೆರಳುತ್ತಿತ್ತು. ಈ ವೇಳೆ ನಗರದ ನಂಜನಗೂಡು ರಸ್ತೆಯಲ್ಲಿರುವ (ಶಂಕರ ರುದ್ರಭೂಮಿ ಬಳಿ) ಸಣ್ಣ ಸೇತುವೆಗೆ ಬಸ್ ಡಿಕ್ಕಿ ಹೊಡೆದಿದೆ. ನಂತರ ಬಸ್ ಸೇತುವೆ ಎಡಭಾಗದಲ್ಲಿರುವ ಹಳ್ಳಕ್ಕೆ ಉರುಳಿ ಬಿದ್ದಿದೆ. ಪರಿಣಾಮ ಬಸ್‌ನಲ್ಲಿದ್ದ 24 ಜನ ಪ್ರಯಾಣಿಕರ ಪೈಕಿ ಚಾಲಕ ಸೇರಿದಂತೆ 12 ಪ್ರಯಾಣಿಕರು ಗಾಯಗೊಂಡಿದ್ದಾರೆ. ಇವರಲ್ಲಿ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದು ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ 8 ಗಾಯಾಳುಗಳು ನಗರದ ಆಸ್ಪತ್ರೆಯಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ 'ಮೈಸೂರುಮಿತ್ರ'ನಿಗೆ ತಿಳಿಸಿದರು.

ಅಪಘಾತ ಮಧ್ಯರಾತ್ರಿ ಆಗಿರುವುದರಿಂದ ಚಾಲಕ ನಿದ್ರೆಗೆ ಜಾರಿದ್ದರಿಂದ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಇದನ್ನು ಚಾಲಕನ ನಿರ್ಲಕ್ಷ್ಯ ಎಂದು ಪರಿಗಣಿಸಲಾಗುವುದು ಎಂದು ಶ್ರೀನಿವಾಸ್ ತಿಳಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಕೆಎಸ್‌ಆರ್‌ಟಿಸಿ ಡಿಸಿ ಶ್ರೀನಿವಾಸ್ ಹಾಗೂ ಇತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೂರನೇ ಪುಟದಿಂದ

ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಸಂಯುಕ್ತಾಶ್ರಯದಲ್ಲಿ

'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ 'ಸಾಂಸ್ಕೃತಿಕ ಉತ್ಸವ'ಕ್ಕೆ ಚಾಲನೆ



ಉತ್ತಮ ವ್ಯಕ್ತಿತ್ವಕ್ಕೆ ಕಲೆ-ಸಾಹಿತ್ಯ ಸಂಸ್ಕೃತಿ ಅತ್ಯಗತ್ಯ...



ಒಬ್ಬ ಪುರುಷನನ್ನು ಪುರುಷೋತ್ತಮನನ್ನಾಗಿ ಮಾಡುವ ಶಕ್ತಿ ಕಲೆ-ಸಾಹಿತ್ಯ, ಸಂಸ್ಕೃತಿಗಿದೆ. ನಾವು ನಮ್ಮ ಜೀವನದಲ್ಲಿ ಸಂಸ್ಕೃತಿಯನ್ನು ಅಳವಡಿಸಿಕೊಳ್ಳದೆ ಹೋದರೆ ನಮ್ಮ ಜೀವನಕ್ಕೆ ಅರ್ಥ ಬರುವುದಿಲ್ಲ ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ತಿಳಿಸಿದರು.

ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕಾರ್ಯಕ್ರಮವೊಂದಕ್ಕೆ ಆಗಮಿಸಿದ್ದ ರಾಷ್ಟ್ರದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರು ಭಾಷಣ ಮಾಡುವಾಗ, ನಮಗೆ ಎಂತಹ ದೊಡ್ಡ ಮಟ್ಟದ ಅಧಿಕಾರಗಳು ದೊರೆತರು ನಾವು ಮೊದಲು ಮನುಷ್ಯರಾಗಿ ರುವುದು, ಉತ್ತಮ ಪ್ರಜೆಯಾಗುವುದು ಮುಖ್ಯ ಎಂದಿದ್ದರು. ಮನುಷ್ಯನಿಗೂ ಪ್ರಾಣಿಗೂ ಇರುವ ವ್ಯತ್ಯಾಸವೇನು? ಎಂದು ಪ್ರಶ್ನಿಸಿ, ನಂತರ ಮನುಷ್ಯ ನಗುತ್ತಾನೆ. ಆದರೆ ಪ್ರಾಣಿ ನಗುವುದಿಲ್ಲ ಎಂದು ತಿಳಿಸಿಕೊಟ್ಟಿದ್ದರು ಎಂದು ಸ್ಮರಿಸಿದರಲ್ಲದೆ ಮನುಷ್ಯ ಉತ್ತಮ ವ್ಯಕ್ತಿತ್ವವುಳ್ಳ ವ್ಯಕ್ತಿಯಾಗಲು ಕಲೆ-ಸಾಹಿತ್ಯ ಸಂಸ್ಕೃತಿ ಅಗತ್ಯ ಎಂದರು.

ದೇವರ ಆಶೀರ್ವಾದಿಂದ ಬರುವ ಕಲೆಯನ್ನು, ಕಲಾವಿದರನ್ನು ಮೆಚ್ಚಿ ಅವರಿಗೆ ಪ್ರೋತ್ಸಾಹ ನೀಡುವುದು ನಮ್ಮಂತಹ ಸಾಧಾರಣ ವ್ಯಕ್ತಿಗಳಿಗೆ ಅಭ್ಯಾಸವಾಗಬೇಕು. ಮೈಸೂರು ಮಹಾರಾಜರು ಕಲೆ-ಸಾಹಿತ್ಯ ಉಳಿಸಲು ದೊಡ್ಡ ಮಟ್ಟದಲ್ಲಿ ಪ್ರೋತ್ಸಾಹ ನೀಡಿದ್ದಾರೆ. ಇದಕ್ಕೆಲ್ಲಾ ಕಾರಣ ವೇದ-ಉಪನಿಷತ್ತುಗಳು. ಯಾವ ಬಗೆಯ ಕಲೆಯನ್ನು ತೆಗೆದುಕೊಂಡರು ಅದು ವೇದ-ಉಪನಿಷತ್ತುಗಳಿಂದ ಬಂದಿದೆ ಎಂಬುದು ಅಧ್ಯಯನಗಳಿಂದ ತಿಳಿಯುತ್ತದೆ ಎಂದು ಹೇಳಿದರು.

ನಾಗರಿಕತೆಗಳು ನಶಿಸಿಹೋಗಲು ಕಾರಣ ಏನೆಂಬುದು ಚರಿತ್ರೆ ಓದಿದವರಿಗೆ ಗೊತ್ತಿದೆ. ನಾಗರಿಕತೆಗಳು ನಶಿಸಿ ಹೋಗಲು ಅಲ್ಲಿನ ಸಂಸ್ಕೃತಿ ನಾಶವಾಗಿದ್ದು ಹಾಗೂ ಬೇರೆಯವರು ದಾಳಿ ಮಾಡಿ ಅಲ್ಲಿನ ಸಂಸ್ಕೃತಿಯನ್ನು ನಾಶ ಮಾಡಿದ್ದೇ ಕಾರಣ ಎಂಬುದು ಸತ್ಯ. ಆದರೆ ಭಾರತ ದೇಶ ವಿಶೇಷವಾದ ಪುಣ್ಯ, ಕರ್ಮ ಹಾಗೂ ಪೂಜ್ಯನೀಯ ಭೂಮಿಯಾಗಿದೆ. ಎಷ್ಟೋ ಜನರು ಈ ದೇಶದ ಮೇಲೆ ದಾಳಿ ಮಾಡಿದ್ದರೂ ನಾವು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದೇವೆ. ಹೇಗಾದರೂ ಮಾಡಿ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಭಾರತೀಯ ವಿದ್ಯಾಭವನನ್ನು ಡಾ.ಕೆ.ಎಂ.ಮುನ್ಷಿ ಅವರು ಸ್ಥಾಪನೆ ಮಾಡಿದರು. ನಂತರ ಅವರು ಮಾಡಿದ ಕೆಲಸಗಳಿಗೆ ಪುಸ್ತಕಗಳೇ ಪುರಾವೆಗಳಾಗಿವೆ ಎಂದು ತಿಳಿಸಿಕೊಟ್ಟರು.

ಖುಷಿ ತಂದಿದೆ. ಅಲ್ಲದೆ ಇಂತಹ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯವೂ ಆಗಿದೆ ಎಂದರು.

ಮೈಸೂರಿನಲ್ಲಿ ದಸರಾ, ದೀಪಾವಳಿ ಹಬ್ಬ ಮುಗಿದಿದ್ದರೂ ಹಬ್ಬದ ವಾತಾವರಣ ವರ್ಷದ ಕಡೆಯವರೆಗೂ ಇರುವಂತೆ ಸಾಂಸ್ಕೃತಿಕ ಉತ್ಸವ ಆಯೋಜಿಸಿರುವುದು ಶ್ಲಾಘನೀಯ. ಇದಕ್ಕಾಗಿ ಭಾರತೀಯ ವಿದ್ಯಾಭವನಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ಫೋಸಿಸ್ ಪ್ರತಿಷ್ಠಾನ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿದ್ದು, ಪಾರಂಪರಿಕತೆಯನ್ನು ಉಳಿಸಿ-ಬೆಳೆಸುವಲ್ಲಿ ಪ್ರಮುಖ ಕೊಡುಗೆ ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಉಳಿಸುವ ಕಾಲ: ಮೈಸೂರನ್ನು ಸಾಂಸ್ಕೃತಿಕ, ಪಾರಂಪರಿಕ ನಗರಿ ಎಂದು ಕರೆಯಲಾಗುತ್ತದೆ. ಮೊನ್ನೆಯಷ್ಟೇ ಮಹಾರಾಣಿ ಕಾಲೇಜು ಪಾರಂಪರಿಕ ಕಟ್ಟಡ ಕುಸಿದು ಬಿದ್ದಿದ್ದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಇದೇ ರೀತಿಯಾದರೆ ಮತ್ತಷ್ಟು ಪಾರಂಪರಿಕ ಕಟ್ಟಡಗಳನ್ನು ಕಳೆದುಕೊಳ್ಳ ಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ಪಾರಂಪರಿಕ ಕಟ್ಟಡಗಳನ್ನು ಉಳಿಸಲು ಸಹಕಾರ ನೀಡಬೇಕು. ಪಾರಂಪರಿಕ ಕಟ್ಟಡಗಳನ್ನು ಉಳಿಸುವ ಕಾಲ ಇದಾಗಿದೆ ಎಂದು ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

ವಿಶ್ವವೇ ಒಂದು ಕುಟುಂಬ: ಬಿವಿಬಿ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ.ರಾಘವನ್ ಮಾತನಾಡಿ, ದೇಶದ ಎರಡು ಪ್ರಮುಖ ಸಂಸ್ಥೆಗಳು ಸೇರಿ ಆಯೋಜಿಸಿರುವ ಈ ಸಾಂಸ್ಕೃತಿಕ ಉತ್ಸವ ಅದ್ದೂರಿ ಮಾತ್ರವಲ್ಲ, ಕಲೆ-ಸಾಹಿತ್ಯ, ಸಂಸ್ಕೃತಿ ಮೂಲಕ ಎಲ್ಲರನ್ನೂ ಒಂದುಗೂಡಿಸುವ ಕಾರ್ಯಕ್ರಮವಾಗಿದೆ. ಬಿವಿಬಿ ಕಳೆದ 84 ವರ್ಷಗಳಿಂದ ಭಾರತೀಯ ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಭಾರತದ ಸಂವಿಧಾನ ರಚನೆಯಲ್ಲಿ ಮುಖ್ಯ ಪಾತ್ರವಹಿಸಿದ ಡಾ.ಕೆ.ಎಂ.ಮುನ್ಷಿ ಅವರು ಸ್ಥಾಪಿಸಿದ ಭಾರತೀಯ ವಿದ್ಯಾಭವನ, ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯ ಉತ್ತೇಜಿಸುವ ಮುಖ್ಯ ಧ್ಯೇಯವನ್ನು ಹೊಂದಿದೆ ಎಂದರಲ್ಲದೆ ಭಾರತೀಯ ವಿದ್ಯಾಭವನ ವಿಶ್ವವೇ ಒಂದು ಕುಟುಂಬ ಎಂಬುದನ್ನು ನಂಬಿದೆ ಎಂದರು.

ಪೂರ್ಣಕುಂಭ ಸ್ವಾಗತ: ಕಲಾಮಂದಿರ ವೇದಿಕೆಯಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಉತ್ಸವದ ಉದ್ಘಾಟನೆಗೂ ಮುನ್ನ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರಿಗೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಧಾರ್ಮಿಕ ಮುಖಂಡರಾದ ಡಾ.ವಿ.ಭಾನುಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ ವೇದಘೋಷಗಳೊಂದಿಗೆ ಗಣ್ಯರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಉಪಸ್ಥಿತರಿದ್ದರು.

ಅತ್ಯಾಕರ್ಷಕ ಪುಸ್ತಕ ಮೇಳ...

ಸಾಂಸ್ಕೃತಿಕ ಕಲಾಪ್ರಕಾರಗಳ ಪ್ರದರ್ಶನದ ಜೊತೆಗೆ ಬಿವಿಬಿ ಪ್ರಕಾಶನದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ. ಕನ್ನಡ, ಹಿಂದಿ ಹಾಗೂ ಇಂಗ್ಲಿಷ್‌ನ ಸುಪ್ರಸಿದ್ಧ ಕತೆ-ಕಾದಂಬರಿಗಳನ್ನು ಪ್ರದರ್ಶನಕ್ಕಿಡಲಾಗಿದೆ. ರಿಯಾಯಿತಿ ದರದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಿದ್ದು, ಓದುಗರ ಅನುಕೂಲಕ್ಕೆ ತಕ್ಕಂತೆ ಪುಸ್ತಕಗಳನ್ನು ಪತ್ಯೇಕವಾಗಿರಿಸಿ ಪ್ರದರ್ಶನಕ್ಕಿಡಲಾಗಿದೆ.



ಅಪಾರ ಮೆಚ್ಚುಗೆ ಪಡೆದ ಸೂತ್ರದ ಗೊಂಬೆಯಾಟ ಪ್ರದರ್ಶನ

'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ದ ಮೊದಲ ದಿನ ಪ್ರದರ್ಶನಗೊಂಡ ಸೂತ್ರದ ಗೊಂಬೆ ಆಟಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

ಭಾಸ್ಕರ್ ಕೊಗ್ಗಾ ಕಾಮತ್ ನಿರ್ದೇಶನದಲ್ಲಿ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಲಿ ಪ್ರಸ್ತುತ ಪಡಿಸಿದ 'ಚೂಡಾಮಣಿ-ಲಂಕಾದಹನ' ಪ್ರಸಂಗ ನೋಡುಗರ ಮನಗೆದ್ದಿತು. ಹಿನ್ನೆಲೆ ಗಾಯನಕ್ಕೆ ತಕ್ಕಂತೆ ಅಭಿನಯಿಸಿದ ಗೊಂಬೆಗಳ ಮನಮೋಹಕ ದೃಶ್ಯವನ್ನು ಕಣ್ತುಂಬಿಕೊಂಡ ಕಲಾಸಕ್ತರು, ವಿದ್ಯಾರ್ಥಿಗಳ ಶಿಳ್ಳೆ-ಚಪ್ಪಾಳೆ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಿದರು.

ಇಂದು ಶಾಸ್ತ್ರೀಯ ನೃತ್ಯ ಪ್ರದರ್ಶನ..

ನಾಳೆ(ನ.5) ಸಂಜೆ 6 ಗಂಟೆಗೆ ಬೆಂಗಳೂರಿನ ದೃಷ್ಟಿ ಆರ್ಟ್ಸ್ ಎನ್‌ಸೆಂಬಲ್ ತಂಡದ ವತಿಯಿಂದ ವಿದುಷಿ ಶ್ರೀಮತಿ ಅನುರಾಧ ವಿಕ್ರಾಂತ್ ಅವರ ನಿರ್ದೇಶನದಲ್ಲಿ 'ಭಾರತೀಯ ಹಬ್ಬಗಳು' ಹಾಗೂ 'ಶ್ರೀ ಕೃಷ್ಣ ಪರೀಕ್ಷಣಂ' ಕುರಿತ ಶಾಸ್ತ್ರೀಯ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ.

ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

ಮೈಸೂರು, ನ. 4-ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್, ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಕರ್ನಾಟಕ ಮತ್ತು ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ನ 12 ಮತ್ತು 13 ರಂದು 42ನೇ ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟವನ್ನು ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಅಥ್ಲೆಟಿಕ್ಸ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಕ್ರೀಡಾಕೂಟಕ್ಕೆ ಎಲ್ಲಾ ಜಿಲ್ಲೆಗಳಿಂದ ಸುಮಾರು 500 ಕ್ರೀಡಾಪಟುಗಳು 30 ರಿಂದ 90 ವರ್ಷ ವಯೋಮಿತಿಯ ಪುರುಷರು ಮತ್ತು ಮಹಿಳೆಯರು ಭಾಗವಹಿಸಲಿದ್ದಾರೆ.

ವಿಕೃತ ಕಾಮಿ ಉಮೇಶ್ ರೆಡ್ಡಿ ಗಲ್ಲು ಶಿಕ್ಷೆ ರದ್ದುಪಡಿಸಿದ 'ಸುಪ್ರೀಂ' ಕೋರ್ಟ್

ನವದೆಹಲಿ: ವಿಕೃತ ಕಾಮಿ ಉಮೇಶ್ ರೆಡ್ಡಿ ಗಲ್ಲು ಶಿಕ್ಷೆಯನ್ನು ಸುಪ್ರೀಂಕೋರ್ಟ್ ರದ್ದುಪಡಿಸಿದೆ.

ಉಮೇಶ್ ರೆಡ್ಡಿಗೆ ಕರ್ನಾಟಕ ಹೈಕೋರ್ಟ್ ಗಲ್ಲು ಶಿಕ್ಷೆ ವಿಧಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಉಮೇಶ್ ರೆಡ್ಡಿ ಸುಪ್ರೀಂ ಮೆಟ್ಟಿಲೇರಿದ್ದ. ಅರ್ಜಿಯ ವಿಚಾರಣೆ ನಡೆಸಿದ ಸಿಜೆಐ ನೇತೃತ್ವದ ತ್ರಿಸದಸ್ಯ ಪೀಠ ಗಲ್ಲು ಶಿಕ್ಷೆ ವಿಳಂಬವು ಅಪರಾಧಿಯ ಯೋಗಕ್ಷೇಮದ ಮೇಲೆ ದುಷ್ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟು ಗಲ್ಲು ಶಿಕ್ಷೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. ಇನ್ನು ಉಮೇಶ್ ರೆಡ್ಡಿಯನ್ನು ಬೆಳಗಾವಿ ಜೈಲಿನಲ್ಲಿ 10 ವರ್ಷಗಳ ಕಾಲ ಏಕಾಂಗಿಯಾಗಿ ಇರಿಸಲಾಗಿತ್ತು.

ಮೈಸೂರು ಮಿತ್ರ

ಜೆಎಸ್ಎಸ್ ಆಯುರ್ವೇದ ಕಾಲೇಜು ಘಟಿಕೋತ್ಸವ; 100 ಮಂದಿಗೆ ಪದವಿ ಪ್ರದಾನ



ರ್‍ಯಾಂಕ್ ಪಡೆದ ಶಮಿತಾ, ಅಮರೇಶ್‌ಗೆ ಆಯುರ್ ವಿಶಾರದ ಪ್ರಶಸ್ತಿಯೊಂದಿಗೆ ನಗದು ಬಹುಮಾನ ಹಾಗೂ 10ನೇ ರ್‍ಯಾಂಕ್ ಪಡೆದ ಪ್ರೇಕ್ಷಣ ಮತ್ತು ಕೆ.ಎಂ.ಸೀಮಾಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಈ ವೇಳೆ ಆಯುಷ್ ಮಂತ್ರಾಲಯದ ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಡಾ.ಬಿ.ಎಸ್. ಪ್ರಸಾದ್, ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಪ್ರಾಂಶುಪಾಲ ಡಾ. ಸರ್ಬೇಶ್ವರ್‌ಕರ್ ಉಪಸ್ಥಿತರಿದ್ದರು.

ಮೈಸೂರು, ನ.4(ಜಿಎ)– ಭಾರತ ಸೇರಿದಂತೆ ಇತರ ರಾಷ್ಟ್ರಗಳಲ್ಲೂ ಇತ್ತೀಚಿನ ದಿನಗಳಲ್ಲಿ ವೈದ್ಯರಿಗೆ ಬೇಡಿಕೆ ಹೆಚ್ಚಾಗಿದ್ದು, ಪದವಿ ಪಡೆಯುವುದರ ಜೊತೆಗೆ ವೈದ್ಯಕೀಯ ಕ್ಷೇತ್ರಕ್ಕೆ ಕಾಲಿಡುತ್ತಿರುವ ನಿಮ್ಮ ಮೇಲೆ ಜವಾಬ್ದಾರಿ ಹೆಚ್ಚಿದೆ ಎಂದು ಆಯುಷ್ ಮಂತ್ರಾಲಯದ ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗದ ಅಧ್ಯಕ್ಷ ಡಾ.ಬಿ.ಎಸ್.ಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಜೆಎಸ್ಎಸ್ ವಿದ್ಯಾಸಂಸ್ಥೆಯು ಉತ್ತಮ ಮೂಲ ಭೂತ ಸೌಲಭ್ಯದ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಇದಕ್ಕಾಗಿ ಇಡೀ ಆಡಳಿತ ಮಂಡಳಿಯವರು ಶ್ರಮಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇಂದು ಇಷ್ಟೊಂದು ಮಂದಿ ಪದವಿ ಪಡೆಯುತ್ತಿದ್ದಾರೆ ಎಂದರೆ ಅದರಲ್ಲಿ ಶಿಕ್ಷಕರ ಪಾತ್ರ ಬಹಳ ದೊಡ್ಡ ಮಟ್ಟದಲ್ಲಿದೆ. ವಿದ್ಯಾರ್ಥಿಗಳನ್ನು ರೂಪಿಸಲು ಶಿಕ್ಷಕರು ಕಷ್ಟಪಟ್ಟಿರುತ್ತಾರೆ. ಶಿಕ್ಷಕರ ಶ್ರಮ ಇಲ್ಲದಿದ್ದರೆ ವಿದ್ಯಾರ್ಥಿಗಳು ಏನೂ ಸಾಧಿಸಲು ಸಾಧ್ಯವಾಗದು. ಆದ್ದರಿಂದ ನಾನು ಇಡೀ ಶಿಕ್ಷಕರನ್ನು ಪ್ರಶಂಸಿಸುತ್ತೇನೆ ಎಂದರು.

ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ಪ್ರಾಕ್ಟಿಸ್ ಸಮಯದಲ್ಲಿ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವು ದರೊಂದಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಹೆಚ್ಚಿನ ಆದ್ಯತೆ ನೀಡಿ. ಇತ್ತೀಚಿನ ದಿನಗಳಲ್ಲಿ ಭಾರತ ಸೇರಿದಂತೆ ವಿಶ್ವಾದ್ಯಂತ ವೈದ್ಯರ ಅಗತ್ಯತೆ ಹೆಚ್ಚಿದೆ. ಕಳೆದ 2 ವರ್ಷಗಳಿಂದ ಕೋವಿಡ್ ಎಲ್ಲರನ್ನೂ ಕಾಡುವುದರ ಜೊತೆಗೆ ಮುಂಜಾಗ್ರತ ಕ್ರಮ ಹೇಗೆ ತೆಗೆದುಕೊಳ್ಳಬೇಕು ಎಂಬುದನ್ನು ಕಲಿಸಿದ್ದು, ಆ ನಿಟ್ಟಿನಲ್ಲಿ ನಾವು ಅದನ್ನು ಅಳವಡಿಸಿಕೊಳ್ಳಬೇಕಿದೆ ಎಂದರು.

ಕಳೆದ 15 ವರ್ಷಗಳ ಹಿಂದಿನ ಜನರ ಜೀವನ ಶೈಲಿ ಮತ್ತು ಆಹಾರ ಪದ್ಧತಿ ಹೋಲಿಸಿದರೆ, ಇಂದು ಬಹಳಷ್ಟು ಬದಲಾಗಿದೆ. ಎಲ್ಲರೂ ಸೂರ್ಯ ಮುಳುಗಿದ ನಂತರ ಊಟ ಮುಗಿಸಿ ನೆಮ್ಮದಿಯ ನಿದ್ರೆ ಮಾಡುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ತಮ್ಮ ಬದಲಾದ ಜೀವನ ಶೈಲಿಯಿಂದ ತಡವಾಗಿ ಮಲಗಿ ಬೆಳಗ್ಗೆ ತಡವಾಗಿ ಏಳುತ್ತಿದ್ದಾರೆ. ಇದರಿಂದಾಗಿ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಈ ಬದಲಾದ ಜೀವನ ಮತ್ತು ಆಹಾರ ಶೈಲಿಯ ಬಗ್ಗೆ ನಮ್ಮ ಆಯುರ್ವೇದ ಚಿಕಿತ್ಸೆಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಕೇಂದ್ರ ಸರ್ಕಾರವು ಇತ್ತೀಚೆಗೆ 'ಹೀಲ್ ಇನ್ ಇಂಡಿಯಾ; ಹೀಲ್ ಬೈ ಇಂಡಿಯಾ' ಯೋಜನೆ ಯನ್ನು ಜಾರಿಗೊಳಿಸಿದ್ದು ಹೀಲ್ ಇನ್ ಇಂಡಿಯಾ ಉಪಕ್ರಮದ ಅಡಿಯಲ್ಲಿ ಭಾರತೀಯ ಆರೋಗ್ಯ ಕಾರ್ಯಕರ್ತರು ತಮ್ಮ ವೃತ್ತಿಪರ ಗುರಿಗಳನ್ನು ಅನುಸರಿಸಲು ವಿದೇಶಗಳಿಗೆ ತೆರಳಲು ಅವಕಾಶವನ್ನು ಒದಗಿಸಲಿದ್ದು, ಇದಕ್ಕಾಗಿ ಪ್ರತ್ಯೇಕ ವೀಸಾವನ್ನು ನೀಡುತ್ತದೆ. ಈ ಯೋಜನೆಯಡಿ ವಿದ್ಯಾರ್ಥಿಗಳು ಅಲ್ಲಿಗೆ ಹೋಗಿ ಆಯುರ್ವೇದ ಅಧ್ಯಯನ ಮತ್ತು ಪ್ರವಾಸೋದ್ಯಮ ಕುರಿತು ತಿಳಿದುಕೊಂಡು ಬನ್ನಿ. ಪಾರಂಪರಿಕ ವೈದ್ಯಕೀಯ ಪದ್ಧತಿ ಮತ್ತು ಆಧುನಿಕ ವೈದ್ಯಕೀಯ ಪದ್ಧತಿ ಎರಡನ್ನೂ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು. 100 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ರ್‍ಯಾಂಕ್ ಪಡೆದ ಶಮಿತಾ, ಅಮರೇಶ್‌ಗೆ ಆಯುರ್ ವಿಶಾರದ ಪ್ರಶಸ್ತಿಯೊಂದಿಗೆ ನಗದು ನೀಡಿ ಗೌರವಿಸಿದರು. 10ನೇ ರ್‍ಯಾಂಕ್ ಪಡೆದ ಪ್ರೇಕ್ಷಣ ಮತ್ತು ಕೆ.ಎಂ. ಸೀಮಾಗೆ ಪ್ರಮಾಣ ಪತ್ರ ನೀಡಲಾಯಿತು. ನಂತರ ಹೊರ ಹೋಗುತ್ತಿರುವ ಅತ್ಯುತ್ತಮ ವಿದ್ಯಾರ್ಥಿ ಎಂದು ಎಸ್. ಶಮಿತಾಗೆ ಹಾಗೂ ಹೊರ ಹೋಗುತ್ತಿರುವ ಅತ್ಯುತ್ತಮ ಇಂಟರ್ನಿ ಎಂದು ಮೇಘನಾ ಪಾಟೀಲ್‌ಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರಮಠ್, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಪ್ರಾಂಶುಪಾಲ ಡಾ. ಸರ್ಬೇಶ್ವರ್ ಕರ್ ಸೇರಿದಂತೆ ಮತ್ತಿತರರಿದ್ದರು.

ಮೂರನೇ ಪುಟದಿಂದ

10 ಲಕ್ಷ ಕೋಟಿ ಬಂಡವಾಳ ನಿರೀಕ್ಷೆ

ನಿರಾಣಿ ರಾಜ್ಯದಲ್ಲಿ ಬಂಡವಾಳ ಹೂಡಿಕೆಗಾಗಿ ರಾಷ್ಟ್ರ ಮತ್ತು ವಿಶ್ವದ ವಿವಿಧ ಭಾಗಗಳಲ್ಲಿ ರೋಡ್ ಶೋ ನಡೆಸಿದಾಗ ನಮಗೆ ಐದು ಲಕ್ಷ ಕೋಟಿ ಬಂಡವಾಳ ಹರಿದುಬರುವ ನಿರೀಕ್ಷೆ ಇತ್ತು. ಸಮಾವೇಶಕ್ಕೆ ಬಂದ ಉದ್ದಿಮೆದಾರರು ರಾಜ್ಯ ಸರ್ಕಾರದ ಕೈಗಾರಿಕಾ ಸ್ನೇಹಿ ಯನ್ನು ನೋಡಿ ನಮ್ಮ ನಿರೀಕ್ಷೆಗೂ ಮೀರಿ ಬಂಡವಾಳ ಹೂಡಿಕೆಗೆ ಮುಂದಾಗಿದ್ದಾರೆ. ಹೂಡಿಕೆದಾರರ ನಿರೀಕ್ಷೆಗಳನ್ನು ರಾಜ್ಯ ಸರ್ಕಾರ ಹುಸಿ ಮಾಡುವುದಿಲ್ಲ. ಇದೇ ಕಾರಣಕ್ಕಾಗಿ ನಿನ್ನೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಒಂದೇ ಸೂರಿನಡಿ ಉದ್ದಿಮೆದಾರರಿಗೆ ಅನುಮತಿ ನೀಡುವ ಬಂಡವಾಳ ಸ್ನೇಹಿ ಪ್ರಾಧಿಕಾರ ರಚನೆಗೆ ತೀರ್ಮಾನ ಕೈಗೊಳ್ಳಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರ ನೀಡಿದ ಬೆಂಬಲ ನಮ್ಮ ನಿರೀಕ್ಷೆಯನ್ನು ಮೀರಿ ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಸುವ ಅವಕಾಶ ಲಭ್ಯವಾಗಿದೆ. ಇದನ್ನು ನಾವು ಸಮರ್ಥವಾಗಿ ಬಳಸಿ ಕೊಳ್ಳುತ್ತೇವೆ. ನಾಳೆಯಿಂದಲೇ ಈ ಉದ್ದಿಮೆ ದಾರರಿಗೆ ಕೈಗಾರಿಕೆ ಸ್ಥಾಪಿಸಲು ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳುತ್ತೇವೆ. ಹಸಿರು ಇಂಧನ ವಲಯದಲ್ಲಿ ಎರಡರಿಂದ ಮೂರು ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆಗೆ ಉದ್ದಿಮೆದಾರರು ಮುಂದಾಗಿದ್ದಾರೆ. ಈ ವಲಯ ದಲ್ಲಿ ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಮತ್ತು ಸಬ್ಸಿಡಿಯ ನಿಯಮಾವಳಿಗಳಿಗೆ ಮನಸೋತ ಉದ್ದಿಮೆ ದಾರರು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಲು ಮುಂದಾಗಿದ್ದಾರೆ ಎಂದರು. ಬಂಡವಾಳ ಹೂಡಲು ಮುಂದಾಗಿರುವ ಕೈಗಾರಿಕೋದ್ಯಮಿಗಳು ಬೆಂಗಳೂರು, ಮೈಸೂರು, ತುಮಕೂರು ಹಾಗೂ ಮಂಗಳೂರನ್ನೇ ಕೇಂದ್ರವಾಗಿಟ್ಟು ಕೊಂಡಿದ್ದಾರೆ. ಆದರೆ ರಾಜ್ಯದ ಎಲ್ಲೆಡೆ ಉದ್ಯಮಗಳು ತಲೆ ಎತ್ತಬೇಕು. ಸ್ಥಳೀಯವಾಗಿ ಉಂಟಾಗಿರುವ ನಿರುದ್ಯೋಗ ಸಮಸ್ಯೆ ಬಗೆಹರಿಸಬೇಕೆಂಬ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಉತ್ತೇಜನ ನೀಡುತ್ತಿದೆ.

ಕರ್ನಾಟಕದಲ್ಲಿ ಇದುವರೆಗೂ ನಡೆದಿರುವ ಹೂಡಿಕೆದಾರರ ಸಮಾವೇಶಕ್ಕೂ ಈ ಮೂರು ದಿನಗಳಲ್ಲಿ ನಡೆದಿರುವ ಸಮಾವೇಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಬೃಹತ್ ಉದ್ಯಮಿದಾರರು ದೊಡ್ಡ ಪ್ರಮಾಣದಲ್ಲಿ ಆಸಕ್ತಿ ತೋರಿರುವುದರಿಂದ ನಮ್ಮ ನಿರೀಕ್ಷೆಗೂ ಮೀರಿ ಸಮಾವೇಶ ಯಶಸ್ವಿ ಕಂಡಿದೆ ಎಂದರು. ರಾಜ್ಯದಲ್ಲಿ ಅಂದಾಜು ಹತ್ತು ಲಕ್ಷ ಉದ್ಯೋಗ ಸೃಷ್ಟಿಯಾಗಿ, ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಲಭ್ಯವಾಗಲಿದೆ ಎಂಬುದೇ ಅತ್ಯಂತ ಸಂತಸದ ವಿಷಯ ಎಂದರು.

ಆರ್.ಎನ್.ಕುಲಕರ್ಣಿ ಸಾವು

ಅವರಿಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾ ಗಿದೆ. ವಿಷಯ ತಿಳಿದ ಅವರ ಕಾರು ಚಾಲಕ ಸ್ಥಳಕ್ಕೆ ದೌಡಾಯಿಸಿ, ತಕ್ಷಣ ಕಾಮಾಕ್ಷಿ ಆಸ್ಪತ್ರೆಗೆ ಅವರನ್ನು ಕರೆತಂದಿದ್ದಾರೆ. ಆದರೆ ತಲೆಗೆ ತೀವ್ರ ತರವಾದ ಪೆಟ್ಟು ಬಿದಿದ್ದ ಪರಿಣಾಮ ಚಿಕಿತ್ಸೆ ಫಲಕಾರಿಯಾಗದೆ ಕುಲಕರ್ಣಿ ಅವರು ಕೊನೆಯುಸಿರೆಳೆದಿದ್ದಾರೆ. ಕುಲಕರ್ಣಿ ಅವರು ಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯು ವಿಹಾರದಲ್ಲಿದ್ದಾಗ ನಾನು ಎಂದಿನಂತೆ ಒಂದು ಜಾಗದಲ್ಲಿ ಕಾರು ನಿಲ್ಲಿಸಿಕೊಂಡು ಕಾಯುತ್ತಿದ್ದೆ. ಆದರೆ ಸುಮಾರು 5.45ರ ವೇಳೆಯಲ್ಲಿ ದಾರಿಯಲ್ಲಿ ಹೋಗುತ್ತಿದ್ದ ಯಾರೋ ಒಬ್ಬರು ನೀವು ನಿತ್ಯ ಕರೆದುಕೊಂಡು ಬರುತ್ತಿದ್ದ ವ್ಯಕ್ತಿಗೆ ಯಾವುದೋ ವಾಹನ ಗುದ್ದಿಕೊಂಡು ಹೋಗಿದೆ ಎಂದು ತಿಳಿಸಿದರು. ನಾನು ತಕ್ಷಣ ಹೋಗಿ ಅವರನ್ನು ಆಸ್ಪತ್ರೆಗೆ ಕರೆತಂದಿದ್ದಾಗಿ ಕಾರು ಚಾಲಕ ನಿಂಗರಾಜು ತಿಳಿಸಿದ್ದಾರೆ.

ಆರ್.ಎನ್.ಕುಲಕರ್ಣಿ ಅವರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಬಂಧುಗಳು, ಅಪಾರ ಸ್ನೇಹಿತರನ್ನು ಅಗಲಿದ್ದಾರೆ. ಮಕ್ಕಳು ವಿದೇಶದಲ್ಲಿದ್ದು ಅವರು ಬಂದ ನಂತರ ಕುಲಕರ್ಣಿ ಅವರ ಅಂತ್ಯ ಸಂಸ್ಕಾರದ ಮಾಹಿತಿ ಲಭ್ಯವಾಗಲಿದೆ.

ಬಹುಮುಖ ಪ್ರತಿಭೆ: ಹಾವೇರಿ ಜಿಲ್ಲೆ ಸವಣೂರಿನಲ್ಲಿ 1940ರಲ್ಲಿ ಜನಿಸಿದ ಆರ್.ಎನ್. ಕುಲಕರ್ಣಿ ಅವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿಎಸ್(ಆನರ್ಸ್) ಪದವಿ ಪಡೆದಿದ್ದರು. ಅಲ್ಲದೆ ಭಾರತೀಯ ವಿದ್ಯಾಭವನ, ಬಾಂಬೆಯಿಂದ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಕೂಡ ಪಡೆದಿದ್ದರು. ಶಿಕ್ಷಕರಾಗಿ ವೃತ್ತಿ ಪ್ರಯಾಣ ಆರಂಭಿಸಿದ್ದ ಇವರು. ನಂತರ 1963ರಲ್ಲಿ ಭಾರತ ಸರ್ಕಾರದ ಇಂಟೆಲಿಜೆನ್ಸ್ ಬ್ಯುರೋ ಸೇರ್ಪಡೆಗೊಂಡು ನಾನಾ ಹುದ್ದೆ ಹಾಗೂ ಸ್ಥಳಗಳಲ್ಲಿ ಮೂರೂವರೆ ದಶಕಗಳ ಕಾಲ ಸೇವೆ ಸಲ್ಲಿಸಿದ್ದರು. ಭಾರತೀಯ ರಾಜತಾಂತ್ರಿಕ ಕಾರ್ಯಗಳು, ಕಾರ್ಪೊರೇಟ್ ಕ್ಷೇತ್ರದಲ್ಲೂ ಕೆಲಸ ಮಾಡಿದರು. ವಾಯುಯಾನ ಸಂಶೋಧನಾ ಕೇಂದ್ರ(ಎಆರ್‌ಸಿ)ದಲ್ಲಿ, ಭಾರತ ಸರ್ಕಾರದ ವಿದೇಶಿ ಇಂಟೆಲಿಜೆನ್ಸ್ ಏಜೆನ್ಸಿಯ ಸಂಶೋಧನೆ ಮತ್ತು ವಿಶ್ಲೇಷಣೆ ದಳ(ರಾ)ದಲ್ಲಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್(ಐಓಸಿ) ಮಾರ್ಕೆಟಿಂಗ್ ವಿಭಾಗದಲ್ಲಿ ವಿಜಿಲನ್ಸ್ ಚೀಫ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಖಾಸಗಿ ಪೈಲೆಟ್ ಲೈಸೆನ್ಸ್ ಪಡೆದಿದ್ದ ಇವರು, ದೇಶದ ಒಳಗೆ ಹಾಗೂ ಹೊರಗೆ ಸಾಕಷ್ಟು ಪ್ರಯಾಣಿಸಿದ್ದರು. ಕುಲಕರ್ಣಿ ಅವರ ವಿಶೇಷ ಕರ್ತವ್ಯ ಪರಿಗಣಿಸಿ ನಾಗಾಲ್ಯಾಂಡ್ ಸರ್ಕಾರ ಅವರಿಗೆ ಪೊಲೀಸ್ ಸರ್ವೀಸ್ ಮೆಡಲ್ ನೀಡಿ ಪ್ರಶಂಸಿಸಿತ್ತು. ಓದು ಮತ್ತು ಬರವಣಿಗೆಯನ್ನು ಹವ್ಯಾಸವಾಗಿಸಿಕೊಂಡಿದ್ದ ಕುಲಕರ್ಣಿ ಅವರು 'ಸಿನ್ ಆಫ್ ನ್ಯಾಷನಲ್ ಕಾನ್ಷಿಯನ್ಸ್', 'ಗಾಡ್ ಸ್ಮೈಲ್ಸ್' 'ಫೇಸೆಟ್ಸ್ ಆಫ್ ಟೆರರಿಸಂ ಇನ್ ಇಂಡಿಯಾ' ಸೇರಿದಂತೆ ಮಹತ್ವದ ವಿಷಯಗಳನ್ನೊಳಗೊಂಡ ಹಲವು ಪುಸ್ತಕಗಳನ್ನೂ ಪ್ರಕಟಿಸಿದ್ದರು.

ಆರ್ಯ ಈಡಿಗರ ಸಂಘದ ನೂತನ ಹಾಸ್ಟೆಲ್ ಉದ್ಘಾಟನೆ

● ಸುತ್ತೂರು ಶ್ರೀಗಳಿಂದ ಉದ್ಘಾಟನೆ ● ಶ್ರೀ ವಿಖ್ಯಾತಾನಂದ ಸ್ವಾಮೀಜಿ ಸಾನ್ನಿಧ್ಯ



ಮೈಸೂರಿನ ವಿಜಯನಗರದ 3ನೇ ಹಂತದಲ್ಲಿ ನಿರ್ಮಿಸಿರುವ ಆರ್ಯ ಈಡಿಗರ ಸಂಘದ ಹಾಸ್ಟೆಲ್‌ನ ನೂತನ ಕಟ್ಟಡವನ್ನು ಶುಕ್ರವಾರ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ನ.4(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದಿಂದ ಮೈಸೂರಿನ ವಿಜಯ ನಗರದ 3ನೇ ಹಂತದಲ್ಲಿ ಸಪ್ತಮಾತೃಕಾ ದೇವಸ್ಥಾನದ ಎದುರು ನಿರ್ಮಿಸಿರುವ ಸಮುದಾಯದ ಹಾಸ್ಟೆಲ್‌ನ ನೂತನ ಕಟ್ಟಡ ಶುಕ್ರವಾರ ಉದ್ಘಾಟನೆಗೊಂಡಿತು.

ಹಾಸ್ಟೆಲ್ ಉದ್ಘಾಟನೆ ನೆರವೇರಿಸಿದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಳಿಕ ಹಾಸ್ಟೆಲ್ ಆವರಣದಲ್ಲಿ ನಡೆದ ಸಭಾ ಕಾರ್ಯಕ್ರಮವನ್ನೂ ಉದ್ಘಾಟಿಸಿದರು. ಬಳಿಕ ಮಾತನಾಡಿದ ಶ್ರೀಗಳು, ಆರ್ಯ ಈಡಿಗ ಸಮುದಾಯ ಇಡೀ ದಕ್ಷಿಣ ಭಾರತ ತುಂಬೆಲ್ಲಾ ಹರಡಿರುವ ಸಮಾಜ. ಈ ಕಾರ್ತಿಕ ಮಾಸವು ಸಮುದಾಯಕ್ಕೆ ವಿಶೇಷ. ಈ ಸಂದರ್ಭದಲ್ಲಿ ವಿಶೇಷ ಪೂಜಾ ಕೈಂಕರ್ಯ ಸಮಾಜದಿಂದ ನೆರವೇರಲಿದೆ. ಇಂತಹ ಸುಸಂದರ್ಭದಲ್ಲೇ ಹಾಸ್ಟೆಲ್ ಉದ್ಘಾಟನೆಯಾಗಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಡಾ.ರಾಜ್ ಸ್ಮರಿಸಿದ ಶ್ರೀಗಳು: ಡಾ.ರಾಜ್ ಕುಮಾರ್ ಹಾಗೂ ಅವರ ಪುತ್ರ ಪುನೀತ್ ರಾಜ್‌ಕುಮಾರ್, ಬಂಗಾರಪ್ಪ, ಆರ್.ಎಲ್.ಜಾಲಪ್ಪ ಸೇರಿದಂತೆ ಸಮಾಜದ ಅನೇಕ ಮಹನೀಯರು ಸಮುದಾಯದ ಗೌರವ ಎತ್ತಿಹಿಡಿದಿದ್ದಾರೆ. ಡಾ.ರಾಜ್ ಕುಮಾರ್ ಅಪ್ರತಿಮ ಕಲಾವಿದರು. ಅಷ್ಟು ದೊಡ್ಡ ಕಲಾವಿದರಾದರೂ ಅತ್ಯಂತ ವಿನಯಶೀಲರು. ಮೈಸೂರು ವಿವಿ ಘಟಿಕೋತ್ಸವ ಕ್ರಾಫರ್ಡ್ ಭವನದಲ್ಲಿ ನಡೆಯುವುದು ವಾಡಿಕೆ ಆದರೆ ರಾಜ್‌ಕುಮಾರ್ ಅವರಿಗೆ ಡಾಕ್ಟರೇಟ್ ಪ್ರದಾನ ಮಾಡಬೇಕಿರುವ ಕಾರಣಕ್ಕೆ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಘಟಿಕೋತ್ಸವ ಆಯೋಜಿಸಲಾಗಿತ್ತು ಎಂದು ಹೇಳಿದರು.

ಅಂದು ಡಾಕ್ಟರೇಟ್ ಪದವಿ ಸ್ವೀಕರಿಸಿದ ರಾಜ್‌ಕುಮಾರ್, ಪದವಿ ಪ್ರಮಾಣ ಪತ್ರ ಪ್ರದರ್ಶಿಸಿ, 'ಇದು ನನ್ನದಲ್ಲ, ನಿಮ್ಮದು' ಎಂದು ಕನ್ನಡಿಗರನ್ನು ಉದ್ದೇಶಿಸಿ ನುಡಿದರು. ಅಂತಹ ವಿನಯವಂತಿಕೆ ಅವರದು. ಅಂತೆಯೇ ಪುನೀತ್ ರಾಜ್‌ಕುಮಾರ್, ತಂದೆ ಮಾರ್ಗದಲ್ಲಿ ಮುನ್ನಡೆದವರು. ರಾಜ್‌ಕುಮಾರ್ ದಂಪತಿ ಮಠಕ್ಕೆ ಬರುತ್ತಿದ್ದಾಗ ಪುನೀತ್ ಸಣ್ಣ ಹುಡುಗ. ಅಂದಿನಿಂದಲೂ ಶ್ರೀಮಠದೊಂದಿಗೆ ಪುನೀತ್ ಸಂಪರ್ಕ ಹೊಂದಿದ್ದರು. ಅವರ ನಿಧನರಾಗುವ ಸ್ವಲ್ಪ ದಿನಗಳ ಹಿಂದೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನನ್ನನ್ನು ಭೇಟಿ ಮಾಡಿದ್ದರು. ಪುನೀತ್ ಅತ್ಯಂತ ವಿನಯಶಾಲಿ ವ್ಯಕ್ತಿತ್ವ ಹೊಂದಿದ್ದವರು. ಶ್ರೀ ನಾರಾಯಣ ಗುರುಗಳು ಸಮುದಾಯದ ಶಕ್ತಿಯಾಗಿ ಕೆಲಸ ಮಾಡಿದವರು. ಅವರು ಸಮುದಾಯಕ್ಕೆ ಆತ್ಮಶಕ್ತಿ ತುಂಬಿದ ಗುರುಗಳು ಎಂದು ಸ್ಮರಿಸಿದರು.

ಸಾನ್ನಿಧ್ಯ ವಹಿಸಿದ್ದ ಸೋಲೂರು ರೇಣುಕಾ ಪೀಠದ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಮಾತನಾಡಿ, ಶ್ರೀ ನಾರಾಯಣ ಗುರುಗಳ ತತ್ವ ಸಿದ್ಧಾಂತದ ಅಡಿಯಲ್ಲಿ ಇಲ್ಲಿನ ಆರ್ಯ–ಈಡಿಗರ ಸಂಘದ ಮುನ್ನಡೆಯುತ್ತಿದೆ ಎಂಬುದಕ್ಕೆ ಈ ಸುಸಜ್ಜಿತ ಹಾಸ್ಟೆಲ್ ನಿರ್ಮಾಣವೇ ಸಾಕ್ಷಿ. ನಾರಾಯಣ ಗುರುಗಳ ಸಿದ್ಧಾಂತಕ್ಕೆ ಅನುಗುಣವಾಗಿ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವುದು ಪ್ರಶಂಸನೀಯ. ಸಂಘದಿಂದ ಇನ್ನು ಹೆಚ್ಚಿನ ಪ್ರಮಾಣದಲ್ಲಿ ಸಮುದಾಯದ ಶ್ರೇಯೋಭಿವೃದ್ಧಿಯ ಕಾರ್ಯಗಳು ನಡೆಯಲಿ ಎಂದು ಆಶೀರ್ವದಿಸಿದರು.

4 ಕೋಟಿ ವೆಚ್ಚದಲ್ಲಿ ನಿರ್ಮಾಣ: 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಕಟ್ಟಡವು (ಪುರುಷರ ವಿದ್ಯಾರ್ಥಿನಿಲಯ) ನೆಲ ಅಂತಸ್ತು ಸೇರಿದಂತೆ 3 ಅಂತಸ್ತಿನ ಕಟ್ಟಡವಾಗಿದ್ದು, ಒಟ್ಟು 40 ಕೊಠಡಿಗಳನ್ನು ಹೊಂದಿದೆ. ಶಾಸಕ ಜಿ.ಟಿ.ದೇವೇಗೌಡ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಡಾ.ಎಂ.ತಿಮ್ಮೇಗೌಡ, ಜೆಪಿಎನ್‌ಪಿ ಪ್ರತಿಷ್ಠಾನದ ಗೌರವಾಧ್ಯಕ್ಷ ಜೆ.ಪಿ.ಸುಧಾಕರ್, ಸಂಘದ ಅಧ್ಯಕ್ಷ ಡಾ.ಎಂ.ಕೆ.ಪೋತರಾಜ್, ಮಾಜಿ ಅಧ್ಯಕ್ಷ ಮಾಂಬಳ್ಳಿ ಕೆ.ಪಾಪೇಗೌಡ, ಉಪಾಧ್ಯಕ್ಷ ರಾಜಶೇಖರ ಕದಂಬ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಆರ್ಯ ಈಡಿಗರ ಮಹಿಳಾ ಸಂಘದ ಅಧ್ಯಕ್ಷೆ ಸರೋಜಮ್ಮ ಪಾಪೇಗೌಡ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ಅನುಕೂಲ ; ಶಾಸಕ ಜಿ.ಟಿ.ದೇವೇಗೌಡ ಮೆಚ್ಚುಗೆ

ಮೈಸೂರು,ನ4(ಪಿಎಂ)– ನೆರೆ ಜಿಲ್ಲೆಗಳು ಸೇರಿದಂತೆ ವಿವಿಧ ಭಾಗಗಳಿಂದ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಹೆಚ್ಚಿನ ವಿದ್ಯಾರ್ಥಿಗಳು ಬರುತ್ತಿದ್ದು, ಈ ನಿಟ್ಟಿನಲ್ಲಿ ಆರ್ಯ ಈಡಿಗರ ಸಂಘವು ಸುಸಜ್ಜಿತ ಹಾಸ್ಟೆಲ್ ನಿರ್ಮಿಸಿರುವುದು ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲ ಆಗಲಿದೆ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ನೆನಪಿನ ಸಂಚಿಕೆ 'ವಿದ್ಯಾಸಿರಿ' ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಂಘವು ದಾನಿಗಳ ನೆರವಿನೊಂದಿಗೆ ಸುಸಜ್ಜಿತ ಹಾಸ್ಟೆಲ್ ನಿರ್ಮಿಸಿ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವುದು ಸಂತಸದ ಸಂಗತಿ. ಮಂಡ್ಯ, ಹಾಸನ, ಚಾಮರಾಜನಗರ ಸೇರಿದಂತೆ ಬೇರೆ ಬೇರೆ ಜಿಲ್ಲೆಗಳಿಂದ ಶಿಕ್ಷಣ ಪಡೆಯಲು ಹೆಚ್ಚು ಮಂದಿ ಮೈಸೂರಿನತ್ತ ಮುಖ ಮಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಅವರಿಗೆ ವಾಸ್ತವ್ಯಕ್ಕೆ ಹಾಸ್ಟೆಲ್ ಸೌಲಭ್ಯ ಕಲ್ಪಿಸುವುದು ಅಗತ್ಯ. ಇಂತಹ ಸಂದರ್ಭದಲ್ಲಿ ಹಾಸ್ಟೆಲ್ ನಿರ್ಮಿಸಿರುವುದು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲಿದೆ. ನನ್ನ ಕ್ಷೇತ್ರ ವ್ಯಾಪ್ತಿಗೆ ಸದರಿ ಹಾಸ್ಟೆಲ್ ಬರಲಿದ್ದು, ನನ್ನಿಂದ ಯಾವುದೇ ಕೆಲಸ ಕಾರ್ಯಗಳು ಆಗಬೇಕಾದರೂ ತಮ್ಮೊಂದಿಗೆ ಇರುತ್ತೇನೆ ಎಂದು ತಿಳಿಸಿದರು.

ಡಿ.ಕೆ.ಶಿವಕುಮಾರ್, ಸುರೇಶ್‌ಗೆ ಇಡಿ ನೋಟಿಸ್

ಬೆಂಗಳೂರು: ನ್ಯಾಷನಲ್ ಹೆರಾಲ್ಡ್ ಕೇಸ್ ವಿಚಾರಕ್ಕೆ ಸಂಬಂಧಿಸಿದಂತೆ ನವೆಂಬರ್ 7ರಂದು ಬೆಳಗ್ಗೆ ಖುದ್ದು ವಿಚಾರಣೆಗೆ ಹಾಜರಾಗುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಅವರ ಸಹೋದರ, ಸಂಸದ ಡಿ.ಕೆ. ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇಡಿ) ಸಮನ್ಸ್ ಜಾರಿ ಮಾಡಿದೆ. ಈ ಮಧ್ಯೆ ಇಡಿ ಅಧಿಕಾರಿಗಳು ತಮ್ಮನ್ನು ಬಂಧಿಸುವ ಸಾಧ್ಯತೆ ಇರುವ ಹಿನ್ನೆಲೆ ಮಧ್ಯಂತರ ರಕ್ಷಣೆ ಕೋರಿ ಡಿ.ಕೆ.ಶಿವಕುಮಾರ್ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ವಿದ್ಯಾರ್ಥಿವೇತನ ಬಿಡುಗಡೆಗೆ ಆಗ್ರಹಿಸಿ ಯುವರಾಜ ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

ಸಮಾಜ ಕಲ್ಯಾಣ ಇಲಾಖೆಯಿಂದ ಕೋಟ್ಯಾಂತರ ರೂ. ವಿದ್ಯಾರ್ಥಿವೇತನ ಬಾಕಿ ; ವಿದ್ಯಾರ್ಥಿಗಳ ಆರೋಪ



ಮೈಸೂರು,ನ.4(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಯುವರಾಜ ಕಾಲೇಜಿನ ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕ್ರಾಫರ್ಡ್ ಭವನದ ಎದುರು ಜಮಾಯಿಸಿದ ವಿದ್ಯಾರ್ಥಿಗಳು, 2019–2020ರಿಂದ 2021–22ರವರೆಗೆ ವಿದ್ಯಾರ್ಥಿವೇತನ ಕಡಿಮೆ ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಪ್ರವೇಶಾತಿ ಶುಲ್ಕವನ್ನು ವಿದ್ಯಾರ್ಥಿಗಳೇ ಪಾವತಿಸಬೇಕೆಂದು ಕಾಲೇಜಿನಲ್ಲಿ ಒತ್ತಡ ಹೇರುತ್ತಿದ್ದು, ಬಡ ವಿದ್ಯಾರ್ಥಿಗಳಾದ ನಮ್ಮಿಂದ ಶುಲ್ಕ ಭರಿಸಲು ಸಾಧ್ಯವಾಗದೇ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಉಂಟಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುವರಾಜ ಕಾಲೇಜಿನ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2019–20, 2020–21 ಮತ್ತು 2021–22ನೇ ಸಾಲಿನ ವಿದ್ಯಾರ್ಥಿವೇತನವು ಕಡಿಮೆ ಮಂಜೂರಾಗಿದೆ ಎಂದು ದೂರಿದರು.

ಸುಮಾರು 681 ವಿದ್ಯಾರ್ಥಿಗಳಿಗೆ ಒಟ್ಟು 1,96,79,080 ರೂ.ಗಳು ಬಿಡುಗಡೆಯಾಗಬೇಕಿದ್ದು, ಅದರಲ್ಲಿ ಕೇವಲ 33,74,029 ರೂ.ಗಳು ಮಾತ್ರ ಬಿಡುಗಡೆ ಮಾಡಿ, 1,63,05,053 ರೂ.ಗಳನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಇದು 2019–20ನೇ ಸಾಲಿಗೆ ಸಂಬಂಧಿಸಿದ ದತ್ತಾಂಶವಾದರೆ, ಇನ್ನು 2020–21ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯು ಒಂದು ರೂಪಾಯಿಯನ್ನು ಬಿಡುಗಡೆ ಮಾಡದೇ ಕೋಟ್ಯಾಂತರ ರೂ.ಗಳನ್ನು ಬಾಕಿ ಉಳಿಸಿಕೊಂಡಿದೆ ಎಂದು ಆರೋಪಿಸಿದರು.

ಇದನ್ನು ನಮ್ಮ ಕಾಲೇಜಿನ ಪ್ರಾಂಶುಪಾಲರ ಗಮನಕ್ಕೆ ಅನೇಕ ಬಾರಿ ತಂದಿದ್ದೇವೆ. ಆದರೂ ಅವರು ಅದಕ್ಕೆ ತಲೆಕೆಡಿಸಿ ಕೊಳ್ಳದೇ ಸರ್ಕಾರದಿಂದ ವಿದ್ಯಾರ್ಥಿ ವೇತನ ಕಡಿಮೆ ಮಂಜೂರಾದ ಕಾರಣ ಲಕ್ಷ ರೂ.ವರೆಗೆ ವೆಚ್ಚವನ್ನು ನೀವೇ ಪಾವತಿಸಬೇಕು. ಇಲ್ಲವಾದರೆ ನಿಮ್ಮ ಮೂಲ ದಾಖಲಾತಿಗಳನ್ನು ನೀಡುವುದಿಲ್ಲವೆಂದು ವಿದ್ಯಾರ್ಥಿಗಳನ್ನು ಒತ್ತಾಯಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಬಡ ವಿದ್ಯಾರ್ಥಿಗಳಾದ ನಾವು ಅಷ್ಟೊಂದು ಹಣವನ್ನು ಕಟ್ಟಲು ಸಾಧ್ಯವಿಲ್ಲ. ಕೂಡಲೇ ಕುಲಪತಿಗಳು ಸರ್ಕಾರದ ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ನಮ್ಮ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ವಿದ್ಯಾರ್ಥಿವೇತನ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು. ಕಾಲೇಜಿನ ವಿದ್ಯಾರ್ಥಿ ಗೌತಮ ಬುದ್ಧ ಸೇರಿದಂತೆ ಕಾಲೇಜಿನ ಹಲವು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ತಿಲಕ್‌ನಗರದಲ್ಲಿರುವ ಅಂಧ ಮಕ್ಕಳ ಶಾಲೆಯ ಮಕ್ಕಳಿಗೆ ಸಿಹಿ ವಿತರಿಸುವ ಮೂಲಕ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಮೋಹನ್‌ಕುಮಾರ್, ಧನಶೇಖರ್, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಯೋಗೇಶ್, ಉಪಾಧ್ಯಕ್ಷ ಮೆಸ್ ಬಾಬು, ಮಂಜುನಾಥ್ (ಮುನ್ನಾ), ಮಹಮದ್, ಕಾರ್ಯದರ್ಶಿ ಸರ್ದಾರ್ ಮಹೇಶ್, ಕೃಪ, ರಂಗಪ್ಪಗೌಡ ಉಪಸ್ಥಿತರಿದ್ದರು.

ನರರೋಗ ಸಂಬಂಧಿತ ಕಾಯಿಲೆಗೆ ವೈದ್ಯಕೀಯ ತಪಾಸಣೆ

ಮೈಸೂರು, ನ. 4– ಮೈಸೂರಿನ ಶ್ರೀರಾಮಪುರ 2ನೇ ಹಂತ, ಬೆಮೆಲ್ ನಗರದಲ್ಲಿರುವ ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರದಲ್ಲಿ ನ. 6 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ನರರೋಗ ಸಂಬಂಧಿತ ಕಾಯಿಲೆಗೆ ವೈದ್ಯಕೀಯ ತಪಾಸಣೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8147205326 (ಸಂಜೆ 4 ರಿಂದ 6 ರವರೆಗೆ) ಸಂಪರ್ಕಿಸಬಹುದು.

ರೇಣುಕಾಚಾರ್ಯ ಸಹೋದರನ ಪುತ್ರನ ಸಾವಿನ ಸಂಬಂಧ ಕೊಲೆ ಕೇಸ್ ದಾಖಲು

ದಾವಣಗೆರೆ, ನ.4– ಶಾಸಕ ಎಂ.ಪಿ. ರೇಣುಕಾಚಾರ್ಯ ಸಹೋದರನ ಪುತ್ರ ಚಂದ್ರಶೇಖರ್ ಸಾವಿನ ಪ್ರಕರಣ ಸಂಬಂಧ ಕೊಲೆ ಕೇಸ್ ದಾಖಲಾಗಿದೆ. ಚಂದ್ರುವಿನ ತಂದೆ ರಮೇಶ್ ನೀಡಿದ ದೂರಿನನ್ವಯ ಹೊನ್ನಾಳಿ ಠಾಣೆ ಪೊಲೀಸರು ಕೊಲೆ, ಸಾಕ್ಷ್ಯ ನಾಶ ಮತ್ತು ವಾಹನ ಜಖಂ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದಾರೆ. ಅ.30ರಂದು ರಾತ್ರಿ ನಿಗೂಢವಾಗಿ ನಾಪತ್ತೆಯಾಗಿದ್ದ ಚಂದ್ರು ಎಲ್ಲೇ ಹುಡುಕಾಡಿದರೂ ಪತ್ತೆಯಾಗದ ಕಾರಣ ಅವರ ತಂದೆ ರಮೇಶ್ ನ.1ರಂದು ಹೊನ್ನಾಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಗುರುವಾರ ತುಂಗಭದ್ರಾ ನಾಲೆಯಲ್ಲಿ ಕಾರಿನ ಸಮೇತ ಚಂದ್ರು ಶವ ದೊರೆತ ಹಿನ್ನೆಲೆಯಲ್ಲಿ ರಮೇಶ್ ಅವರು ಇಂದು ಪೊಲೀಸರಿಗೆ ಮತ್ತೊಂದು ದೂರು ಸಲ್ಲಿಸಿದರು.



ಕಾರಿನಲ್ಲಿದ್ದ ತಮ್ಮ ಪುತ್ರನ ಶವವನ್ನು ನೋಡಿದಾಗ ಮೃತದೇಹವು ಕಾರಿನ ಹಿಂಬದಿ ಸೀಟಿನಲ್ಲಿ ಇತ್ತು. ಆತನ ಕೈ–ಕಾಲುಗಳನ್ನು ಬಟ್ಟೆಯಿಂದ ಕಟ್ಟಿದ ಗುರುತುಗಳು ಕಂಡುಬಂದಿವೆ. ತಲೆ ಮತ್ತು ಕಿವಿ ಭಾಗಕ್ಕೆ ಹಲ್ಲೆ ಮಾಡಿದ ಗುರುತುಗಳು ಕೂಡ ದೇಹದ ಮೇಲಿವೆ. ಪುತ್ರನ ಕೈ–ಕಾಲು ಕಟ್ಟಿ ಕೊಲೆ ಮಾಡಿದ ನಂತರ ಶವವನ್ನು ಕಾರಿನಲ್ಲಿರಿಸಿ, ಕಾರನ್ನು ಜಖಂಗೊಳಿಸಿ ನಂತರ ನಾಲೆಗೆ ನೂಕಲಾಗಿದೆ ಎಂದು ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಈ ಪ್ರಕರಣದ ತನಿಖೆಗೆ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಇಂದು ಶವ ದೊರೆತ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಅಲ್ಲದೆ ಪರೀಕ್ಷೆಗಾಗಿ ಸ್ಯಾಂಪಲ್‌ಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದರು. ಎಫ್‌ಎಸ್‌ಎಲ್ ವರದಿ ಬಂದ ನಂತರ ಚಂದ್ರು ಸಾವು ಹೇಗೆ ಸಂಭವಿಸಿದೆ ಎಂಬುದು ನಿಖರವಾಗಿ ತಿಳಿಯಲಿದೆ. ಮತ್ತೊಂದೆಡೆ ಇಂದು ಮಧ್ಯಾಹ್ನ ಚಂದ್ರುವಿನ ಅಂತ್ಯಕ್ರಿಯೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರೇಣುಕಾಚಾರ್ಯ, ಚಂದ್ರುವನ್ನು ವ್ಯವಸ್ಥಿತವಾಗಿ ಹತ್ಯೆ ಮಾಡಲಾಗಿದೆ. ರಾಜಕೀಯ ಷಡ್ಯಂತ್ರದಿಂದ ಈ ಕೃತ್ಯ ಎಸಗಲಾಗಿದ್ದು, ಕುತ್ತಿಗೆ ಹಾಗೂ ಬೆನ್ನಿನಲ್ಲಿ ಹಲ್ಲೆ ಮಾಡಿರುವ ಗುರುತುಗಳು ಪತ್ತೆಯಾಗಿವೆ. ಆತನನ್ನು ಕೈ–ಕಾಲು ಕಟ್ಟಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿದರು.

ಚಂದ್ರಶೇಖರ್ ಅಂತ್ಯಕ್ರಿಯೆ

ದಾವಣಗೆರೆ, ನ4– ನಿಗೂಢವಾಗಿ ಸಾವನ್ನಪ್ಪಿದ ಶಾಸಕ ರೇಣುಕಾಚಾರ್ಯ ಸಹೋದರನ ಪುತ್ರ ಚಂದ್ರಶೇಖರ್ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಹೊನ್ನಾಳಿಯಿಂದ 20 ಕಿ.ಮೀ. ಅಂತರದಲ್ಲಿರುವ ಕುಂದೂರು ಗ್ರಾಮದ ಅವರ ತೋಟದಲ್ಲಿ ನೆರವೇರಿಸಲಾಯಿತು. ಇಂದು ಬೆಳಗ್ಗೆ ಹೊನ್ನಾಳಿ ಪಟ್ಟಣದ ರೇಣುಕಾಚಾರ್ಯ ನಿವಾಸದಲ್ಲಿ ಚಂದ್ರು ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಹಿರೇಕಲ್ಮಠದ ಶ್ರೀ ಅನ್ನದಾನೇಶ್ವರ ಸ್ವಾಮೀಜಿ ಪೂಜೆ ನೆರವೇರಿಸಿದರು. ನಂತರ ಹೊನ್ನಾಳಿ ಹಿರೇಮಠ ವೃತ್ತದಿಂದ ಅಲಂಕೃತ ವಾಹನದಲ್ಲಿ ಪಾರ್ಥಿವ ಶರೀರವನ್ನು ಮೆರವಣಿಗೆ ಮೂಲಕ ಕುಂದೂರು ಗ್ರಾಮಕ್ಕೆ ಕೊಂಡೊಯ್ಯಲಾಯಿತು. ಚಂದ್ರು ಸಾವಿನ ಹಿನ್ನೆಲೆಯಲ್ಲಿ ಕುಂದೂರಿನಲ್ಲಿ ಸ್ವಯಂ ಪ್ರೇರಿತವಾಗಿ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಲಾಗಿತ್ತು. 20 ಕಿ.ಮೀ. ಸಾಗಿದ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಬಿ.ವೈ. ರಾಘವೇಂದ್ರ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಅವರ ಪುತ್ರ ಕಾಂತೇಶ್, ಗೃಹ ಸಚಿವ ಆರಗ ಜ್ಞಾನೇಂದ್ರ, ಸಂಸದ ಜಿ.ಎಂ. ಸಿದ್ದೇಶ್, ಕಾಂಗ್ರೆಸ್‌ನ ಮಾಜಿ ಶಾಸಕ ಡಿ.ಬಿ. ಶಾಂತನಗೌಡ, ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಶಾಸಕ ಅಶೋಕ್‌ನಾಯಕ್ ಸೇರಿದಂತೆ ಅನೇಕ ಮುಖಂಡರು ಚಂದ್ರಶೇಖರ್ ಅಂತಿಮ ದರ್ಶನ ಪಡೆದರು.

ಬೆಂಗಳೂರು ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಪ್ರತಿಮೆ ಅನಾವರಣ ಹಿನ್ನೆಲೆ

ಮೈಸೂರಲ್ಲಿ ಪವಿತ್ರ ಮೃತ್ತಿಕೆ ಸಂಗ್ರಹ ರಥಕ್ಕೆ ಚಾಲನೆ



ಮೈಸೂರು,ನ.4(ಎಂಟಿವೈ)– ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕಾಗಿ ವಿವಿಧೆಡೆ ಮೃತ್ತಿಕೆ ಸಂಗ್ರಹ ರಥಕ್ಕೆ ಮೈಸೂರಲ್ಲಿ ಚಾಲನೆ ದೊರೆಯಿತು.

ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಮೃತ್ತಿಕೆ ಸಂಗ್ರಹ ರಥಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಕಾಗಿನೆಲೆಯ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿಯೊಂದಿಗೆ ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ತನ್ವೀರ್ ಸೇಠ್ ಹಾಗೂ ಎಲ್.ನಾಗೇಂದ್ರ ಹಸಿರು ನಿಶಾನೆ ಪ್ರದರ್ಶಿಸಿ, ಚಾಲನೆ ನೀಡಿದರು. ಇದಕ್ಕೂ ಮುನ್ನ ಡೊಳ್ಳು ಕುಣಿತ ಹಾಗೂ ವೀರಗಾಸೆ ಕಲಾವಿದರ ಪ್ರದರ್ಶನ ರಥಯಾತ್ರೆಗೆ ಮೆರಗು ನೀಡಿದವು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ ಕೆಂಪೇಗೌಡರ ಪ್ರತಿಮೆಯನ್ನು ನ.11ರಂದು ಪ್ರಧಾನಿ ಮೋದಿ ಅನಾವರಣಗೊಳಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕೆಂಪೇಗೌಡರ ರಥ ನಾಡಿನೆಲ್ಲೆಡೆ ಸಂಚರಿಸಿ ಮೃತ್ತಿಕೆ ಸಂಗ್ರಹಿಸಲಾಗುತ್ತಿದೆ. ಕೆಂಪೇಗೌಡರು ಬೆಂಗಳೂರು ನಿರ್ಮಿಸುವಾಗ ನಾಲ್ಕು ದಿಕ್ಕಿನಲ್ಲಿ ಗೋಪುರಗಳನ್ನು ಸ್ಥಾಪಿಸಿದ್ದಾರೆ. ಅಲ್ಲದೆ, ಎಲ್ಲಾ ಜಾತಿ ಜನರಿಗೂ ಪೇಟೆಗಳನ್ನು ನಿರ್ಮಿಸಿದ್ದಾರೆ. ಸುಭದ್ರ ಬೆಂಗಳೂರು ನಗರ ನಿರ್ಮಾಣಕ್ಕೆ ಬುನಾದಿ ಹಾಕಿದ ಪರಿಣಾಮ ಇಂದು ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಈಗಾಗಲೇ ಕೆಂಪೇಗೌಡರ ಹೆಸರು ನಾಮಕರಣ ಮಾಡಲಾಗಿದೆ. ಇದೀಗ ಅದಕ್ಕೆ ಮೆರುಗು ನೀಡುವಂತೆ 108 ಅಡಿ ಎತ್ತರದ ಪ್ರತಿಮೆ ನಿರ್ಮಾಣ ಮಾಡಲಾಗಿದೆ ಎಂದರು.

ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರಗತಿಯ ಪ್ರತಿಮೆ ಅನಾವರಣ ಪ್ರಯುಕ್ತ ನಾಡಿನಾದ್ಯಂತ ಪವಿತ್ರ ಮೃತ್ತಿಕೆ (ಮಣ್ಣು) ಸಂಗ್ರಹದ ಅಭಿಯಾನ ರಥಕ್ಕೆ ಇಂದು ಚಾಲನೆ ನೀಡಲಾಗಿದೆ. ಈ ರಥವು ನಗರ ಪಾಲಿಕೆಯ 65 ವಾರ್ಡ್‌ಗಳಲ್ಲೂ ಸಂಚರಿಸುತ್ತದೆ. ಇದಕ್ಕಾಗಿ ಪ್ರತಿಯೊಂದು ವಾರ್ಡ್‌ನಲ್ಲಿ ಪ್ರಮುಖ ಜಾಗವನ್ನು ಗುರುತಿಸಲಾಗಿದೆ. ರಥವು ಆ ನಿಗದಿತ ಸ್ಥಳಕ್ಕೆ ಬಂದು ನಿಲ್ಲುತ್ತದೆ ಎಂದು ತಿಳಿಸಿದರು.

ಕಾಗಿನೆಲೆ ಕನಕಗುರುಪೀಠದ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಮಾತನಾಡಿ, ಪ್ರಪಂಚದಲ್ಲಿ ಎತ್ತರವಾದ ವ್ಯಕ್ತಿ ನಾಡಪ್ರಭು ಕೆಂಪೇಗೌಡ. ಅದಕ್ಕೆ ಅನುಗುಣವಾಗಿ ಇದೀಗ ಎತ್ತರವಾದ ಪ್ರತಿಮೆ ನಿರ್ಮಾಣ ಮಾಡಿರುವುದು ಸಂತಸದ ಸಂಗತಿ. ದಕ್ಷತೆಯಿಂದ ಆಡಳಿತ ನಡೆಸಿದರು. ಇಂತಹ ಮಹಾತ್ಮರು ಮತ್ತೆ ಮತ್ತೆ ಹುಟ್ಟಿ ಬರಬೇಕು ಎಂದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಂದನಾಥ ಸ್ವಾಮೀಜಿ ಮಾತನಾಡಿ, ನಾಡನ್ನು ಕಟ್ಟಲು ತಮ್ಮ ಬದುಕನ್ನು ಕೆಂಪೇಗೌಡರು ಮುಡಿಪಾಗಿಟ್ಟರು. ಬೆಂಗಳೂರು ನಗರವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ನಿರ್ಮಿಸಿದರು ಎಂದರು.

ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಪಾಲಿಕೆಯ ಉಪ ಆಯುಕ್ತೆ ಸವಿತಾ, ಪಾಲಿಕೆ ಸದಸ್ಯ ಶ್ರೀಧರ್, ಚಾಮರಾಜ ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಕುಮಾರ್ ಗೌಡ, ಕಾರ್ಯದರ್ಶಿ ಪುನೀತ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಗಂಗಾಧರ್, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಮರಿಸ್ವಾಮಿ, ಉಪಾಧ್ಯಕ್ಷ ರವಿ ರಾಜಕೀಯ, ಚೇತನ್, ಜಯರಾಮ್, ಗಿರೀಶ್, ರಾಜಕುಮಾರ್, ಮಣಿರತ್ನ, ನೇಹಾ ನೈನಾ, ರತ್ನಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Promotional Feature

ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಅದ್ಧೂರಿ ತೆರೆ

ನಿರೀಕ್ಷೆಗೂ ಮೀರಿ ಹರಿದು ಬಂದ ಬಂಡವಾಳ, ಹೂಡಿಕೆದಾರರ ಮೆಚ್ಚಿನ ತಾಣ ಕರ್ನಾಟಕ

ಬ್ರ್ಯಾಂಡ್ ಬೆಂಗಳೂರು ಜತೆ, 'ಬಿಯಾಂಡ್ ಬೆಂಗಳೂರು' ಪರಿಕಲ್ಪನೆಯನ್ನು ಯಶಸ್ವಿಯಾಗಿಸಿದೆ 'ಜಿಮ್ 2022'







ಜುಕರ್ ಬರ್ಗ್ ಮೀಡಿಯಾ ಸಂಸ್ಥಾಪಕಿ ರ್‍ಯಾಂಡಿ ಜುಕರ್‌ಬರ್ಗ್

ಬ್ರ್ಯಾಂಡ್ ಬೆಂಗಳೂರು ಜತೆಗೆ ಬಿಯಾಂಡ್ ಬೆಂಗಳೂರು- ಯಶಸ್ವಿ

ಬ್ರ್ಯಾಂಡ್ ಬೆಂಗಳೂರಿನ ಘನತೆ ಹೆಚ್ಚಿಸುವುದರೊಂದಿಗೆ ಬಿಯಾಂಡ್ ಬೆಂಗಳೂರು ಮೂಲಕ 2-3 ನೇ ಹಂತದ ನಗರಗಳಿಗೆ ಕೈಗಾರಿಕೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾದ ಈ ಸಮಾವೇಶ ತನ್ನ ಉದ್ದೇಶ ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಬ್ಯುಲ್ಡ್ ಫಾರ್ ದಿ ವರ್ಲ್ಡ್ ಎಂಬ ಘೋಷವಾಕ್ಯದೊಂದಿಗೆ ನಡೆದ ಮೂರು ದಿನಗಳ ಸಮಾವೇಶದಲ್ಲಿ 10 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಅದರಲ್ಲಿ ಬಹುತೇಕ ಹೂಡಿಕೆಗಳು ಬೆಂಗಳೂರು ಅಲ್ಲದೇ ಟೈರ್ 2 ಮತ್ತು ಟೈರ್ 3 ನಗರ-ಪಟ್ಟಣಗಳು ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಅನುಷ್ಠಾನಗೊಳ್ಳುವಂತಹದ್ದು.

ಮತ್ತೊಂದೆಡೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಂಗಳೂರಿನ ಸಾಧನೆ ಪರಿಗಣಿಸಿ ಈ ಕ್ಷೇತ್ರದ ಹೂಡಿಕೆಗಳು ಬೆಂಗಳೂರಿಗೆ ಭಾರೀ ಪ್ರಮಾಣದಲ್ಲಿ ಬರುವುದರೊಂದಿಗೆ ಬ್ರಾಂಡ್ ಬೆಂಗಳೂರು ಕೂಡ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ.

ಹೂಡಿಕೆದಾರರ ಸಮಾವೇಶಗಳೆಂದರೆ ಅಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತ ಹಾಗೂ ಪ್ರಮುಖ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತವೆ ಎಂಬ ಭಾವನೆಯನ್ನು ಈ ಬಾರಿಯ ಸಮಾವೇಶ ಖಂಡಿತವಾಗಿಯೂ ದೂರಮಾಡಿದೆ. ಬೆಂಗಳೂರಿನ ಆಚೆಗೂ ಅತಿ ಹೆಚ್ಚು ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಇನ್ವೆಸ್ಟ್ ಕರ್ನಾಟಕ- 2022 ಯಶಸ್ವಿಯಾಗಿದೆ.

ಜಾಗತಿಕ ಹೂಡಿಕದಾರರ ಸಮಾವೇಶ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ.ಈ ಬಾರಿ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 5 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ ಐದು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಸರ್ಕಾರದ್ದಾಗಿತ್ತು.

ಆದರೆ, ವಿಶ್ವದ ಅಗ್ರಮಾನ್ಯ ಉದ್ಯಮಿಗಳು ರಾಜ್ಯದಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿರುವುದು ನಮ್ಮ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚುವಂತೆ ಮಾಡಿದೆ. ರಾಜ್ಯದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುವ ಅಂದಾಜಿದ್ದು, ನಮ್ಮ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸಿಗಲಿವೆ ಎಂಬುದೇ ಅತ್ಯಂತ ಸಂತಸದ ವಿಷಯ.

'ಗ್ಲೋಬಲ್‌ಇನ್ವೆಸ್ಟರ್ಸ್ ಮೀಟ್' ಕರ್ನಾಟಕದಲ್ಲಿ ನಡೆಯುತ್ತಿರುವ ಐದನೆಯ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಡಾ.ಮುರುಗೇಶ.ಆರ್.ನಿರಾಣಿ ನೇತೃತ್ವದಲ್ಲಿ ನಡೆಯುತ್ತಿರುವ ಮೂರನೇ ಜಾಗತಿಕ ಹೂಡಿಕೆದಾರರ ಸಮಾವೇಶ.

ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು ವೀಡಿಯೋ ಕಾನ್ಫರೆನ್ಸ್ ಮೂಲಕ ಸಮಾವೇಶವನ್ನು ಉದ್ಘಾಟನೆ ಮಾಡಿದ್ದೇ, ಈ ಬಾರಿಯ ಸಮಾವೇಶಕ್ಕೆ ವಿಶೇಷ ಮೆರಗು ತಂದುಕೊಟ್ಟಿತ್ತು.

ರಾಜ್ಯಪಾಲರಾದ **ಥಾವರ್ ಚಂದ್ ಗೆಹ್ಲೋಟ್**, ಮುಖ್ಯಮಂತ್ರಿ **ಬಸವರಾಜ ಎಸ್ ಬೊಮ್ಮಾಯಿ**, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ **ಡಾ. ಮುರುಗೇಶ ಆರ್ ನಿರಾಣಿ** ಮತ್ತು ಕೇಂದ್ರ ವಿತ್ತ ಸಚಿವೆ **ನಿರ್ಮಲಾ ಸೀತಾರಾಮನ್**, ವಾಣಿಜ್ಯ ಮತ್ತು ಕೈಗಾರಿಕೆ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಜವಳಿ ಸಚಿವ **ಪಿಯೂಷ್ ಗೋಯಲ್**, ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಬೆಂಗಳೂರಿನ ಅರಮನೆಯಲ್ಲಿ ನವೆಂಬರ್ 2 ರಂದು ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಉದ್ಘಾಟನಾ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಅಗ್ರ ಕೈಗಾರಿಕೋದ್ಯಮಿಗಳಾದ ಜಿಂದಾಲ್ ಗ್ರೂಪ್ ಅಧ್ಯಕ್ಷ ಶ್ರೀ ಸಜ್ಜನ್ ಜಿಂದಾಲ್, ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷ ಶ್ರೀ ವಿಕ್ರಮ್ ಎಸ್ ಕಿರ್ಲೋಸ್ಕರ್, ವಿಪ್ರೋ ಅಧ್ಯಕ್ಷರು ರಿಷಾದ್ ಪ್ರೇಮ್‌ಜೀ, ಭಾರತಿ ಎಂಟರ್‌ಪ್ರೈಸಸ್‌ನ ಉಪಾಧ್ಯಕ್ಷ ರಾಜನ್ ಭಾರತಿ ಮಿತ್ತ, ಅದಾನಿ ಪೋರ್ಟ್ಸ್ ಮತ್ತು ಎಸ್‌ಇಝಡ್‌ನ ಸಿಇಒ ಕರಣ್ ಅದಾನಿ ಮತ್ತು ಸ್ಟೆರ್ಲೈಟ್ ಪವರ್ ಎಂಡಿ ಪ್ರತೀಕ್ ಅಗರ್ವಾಲ್ ಅವರು ಕರ್ನಾಟಕದಲ್ಲಿ ತಮ್ಮ ಉದ್ಯಮ ಅನುಭವವನ್ನು ಹಂಚಿಕೊಂಡರು ಜತೆಗೆ, ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹೂಡಿಕೆ ಮಾಡುವ ಇಂಗಿತ ವ್ಯಕ್ತಪಡಿಸಿದರು.

ಎರಡನೇ ದಿನದ ಸಮಾವೇಶದಲ್ಲಿ ವನ್ಯಜೀವಿ ಚಲನಚಿತ್ರ ನಿರ್ಮಾಪಕರಾಗಿ ಮತ್ತು ಪ್ರಸಿದ್ಧ ನೈಸರ್ಗಿಕ ಇತಿಹಾಸಕಾರ ಹಂಟರ್ ತಮ್ಮ ವೃತ್ತಿ ಬದುಕಿನ ರೋಚಕ ವಿಷಯಗಳನ್ನು ಹಂಚಿಕೊಂಡರು. ಜುಕರ್ ಬರ್ಗ್ ಮೀಡಿಯಾ ಸಂಸ್ಥಾಪಕಿ "ರ್‍ಯಾಂಡಿ ಜುಕರ್‌ಬರ್ಗ್" ಬೆಂಗಳೂರು ತಂತ್ರಜ್ಞಾನದ ತವರೂರು, ಇಡೀ ಜಗತ್ತಿಗೆ ಚಿರಪರಿಚಿತವಾದ ಹೆಸರು," ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

"ಡ್ರೈವಿಂಗ್ ಇಂಡಿಯಾ ಇನ್ ದ ಫ್ಯೂಚರ್: ರೆವಲ್ಯೂಷನ್ ಇನ್ ಇಂಡಿ ಯಾಸ್ ಮೊಬಿಲಿಟಿ" - ಸೆಷನ್‌ನಲ್ಲಿ ಸನ್ ಮೊಬಿಲಿಟಿಯ ಸಹ ಸಂಸ್ಥಾಪಕ ಮತ್ತು ಅಧ್ಯಕ್ಷ ಚೇತನ್ ಮೈನಿ, ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸೊಲ್ಯೂಷನ್ಸ್ ಸಿಇಒ ಮತ್ತು ಎಂಡಿ ಅಸಿಮ್ ಕುಮಾರ್ ಮುಖೋಪಾಧ್ಯಾಯ ಮತ್ತು ಸ್ವಿಚ್ ಮೊಬಿಲಿಟಿಯ ಚೀಫ್ ರೆವಿನ್ಯೂ ಅಧಿಕಾರಿ ಸಚಿನ್ ನಿಜವಾನ್ ಭಾಗವಹಿಸಿದ್ದರು.


ಇಂಧನ ಕ್ಷೇತ್ರ ಕುರಿತ ಸಂವಾದಲ್ಲಿ ಪಾಲ್ಗೊಂಡು ಮಾತನಾಡಿದ ವಿಜಯ್ ನಿರಾಣಿ, "ಏಷ್ಯಾದಲ್ಲೇ ಅತಿ ಹೆಚ್ಚು ಎಥನಾಲ್ ಉತ್ಪಾದನೆ ಮಾಡುವ ರಾಜ್ಯ ಕರ್ನಾಟಕ. ಪವನ ಹಾಗೂ ಸೌರ ವಿದ್ಯುತ್ ಉತ್ಪಾದನೆ ಯೋಜನೆಯನ್ನು ಅಭಿವೃದ್ಧಿಪಡಿಸಿ, ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕದ ನವೀಕರಿಸಬಹುದಾದ ಇಂಧನದ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸಲು ಯೋಜಿಸಲಾಗಿದೆ," ಎಂದರು.

ಮೂರನೇ ದಿನದ ಸಮಾವೇಶದಲ್ಲಿ ಜೀವ್ ಸೇಗ್ಲ್ - ಸಹ-ಸಂಸ್ಥಾಪಕ, ಸ್ಟಾರ್ಬಕ್ಸ್ ತಮ್ಮ ವೃತ್ತಿ ಬದುಕಿನ ಅನುಭವ ಹಂಚಿಕೊಂಡರು. ಕೋವಿಡ್ ನಂತಹ ಪರಿಸ್ಥಿತಿ ಎದುರಿಸುವ ಸನ್ನದ್ಧತೆ ಕುರಿತ ಸಮಾವೇಶದಲ್ಲಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ನಾರಾಯಣ ಹೆಲ್ತ್‌ನ ಸಂಸ್ಥಾಪಕ ಡಾ. ದೇವಿಶೆಟ್ಟಿ, ವಿಶ್ವ ಆರೋಗ್ಯ ಸಂಸ್ಥೆಯ ಡಾ. ಸೌಮ್ಯಸ್ವಾಮಿನಾಥನ್ ಪಾಲ್ಗೊಂಡು ಅರ್ಥಪೂರ್ಣ ಚರ್ಚೆ ನಡೆಸಿದರು. ದಿ ಪ್ರಿಂಟ್‌ನ ಸಂಸ್ಥಾಪಕ ಶೇಖರ್‌ಗುಪ್ತ ಸಂವಾದ ನಡೆಸಿಕೊಟ್ಟರು.

ಕರ್ನಾಟಕದಲ್ಲಿ ಹೂಡಿಕೆ ಮಾಡಿರುವ ಉದ್ಯಮಿಗಳ ಯಶೋಗಾಥೆಗೆ ರಿಸಿಲಿಯಂಟ್ ಕರ್ನಾಟಕ ವೇದಿಕೆ ಸಾಕ್ಷಿಯಾಯಿತು.



ಹಸಿರು ಇಂಧನದ ಕುರಿತ ಸಮಾವೇಶ



"ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಹೂಡಿಕೆ ಸಮಾವೇಶ ಸಾಕಾರವಾಯಿತು. ಕೇಂದ್ರ ಸರ್ಕಾರದ ಸಹಕಾರದಿಂದ ಕರ್ನಾಟಕ ಈ ಸಾಧನೆ ಮಾಡಿದೆ. ಡಬಲ್ ಇಂಜಿನ್ ಸರ್ಕಾರದಿಂದ ಕಾರ್ಯಕ್ರಮಗಳ ಅನುಷ್ಠಾನ ಸಾಧ್ಯವಾಗಿದೆ. ಕೇಂದ್ರ ಸರ್ಕಾರ 5 ಟ್ರಿಲಿಯನ್ ಡಾಲರ್ ಆರ್ಥಿಕ ಗುರಿ ಹೊಂದಿದೆ. ಕರ್ನಾಟಕ ಒಂದು ಟ್ರಿಲಿಯನ್ ಕೊಡುಗೆ ನೀಡಲಿದೆ. ಈಗಾಲೇ ಕರ್ನಾಟಕ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಹೂಡಿಕೆದಾರರ ಹೆಗಲಿಗೆ ಹೆಗಲು ಕೊಟ್ಟು ಸರ್ಕಾರ ಕೆಲಸ ಮಾಡಲಿದೆ,"

- ಬಸವರಾಜ.ಎಸ್.ಬೊಮ್ಮಾಯಿ
ಮುಖ್ಯಮಂತ್ರಿ



"ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ನಮ್ಮ ಸರ್ಕಾರ ವಿಶ್ವದರ್ಜೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದ್ದು, ಉದ್ದಿಮೆದಾರರು ಬಂಡವಾಳ ಹೂಡಲು ಮುಂದೆ ಬರಬೇಕು".

- ಮುರುಗೇಶ. ಆರ್. ನಿರಾಣಿ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಬಿಯಾಂಡ್ ಬೆಂಗಳೂರಿಗೆ ಬಲ

ಬೆಂಗಳೂರಿನ ಹೊರಗೆ ಅಂದರೆ ಟೈರ್ 2 ಮತ್ತು 3 ನಗರಗಳಲ್ಲಿ ಅಂದರೆ ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಕೊಪ್ಪಳ, ವಿಜಯಪುರ ಹೀಗೆ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆ ಭಾಗದಲ್ಲಿರುವ ಮಾನವ ಸಂಪನ್ಮೂಲವನ್ನು ಸ್ಥಳೀಯವಾಗಿ ಬಳಸಿಕೊಂಡು ಆ ಪ್ರದೇಶಗಳ ಆರ್ಥಿಕ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಮೂಲಕ ರಾಜ್ಯದ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂಬುದು ಸರಕಾರದ ಉದ್ದೇಶ.

ಅದರಲ್ಲೂ ಮುಖ್ಯವಾಗಿ ಗ್ರೀನ್ ಹೈಡ್ರೋಜನ್, ನವೀಕರಿಸಬಹುದಾದ ಇಂಧನ, ಏರೋಸ್ಪೇಸ್ ಮತ್ತು ರಕ್ಷಣೆ ಮುಂತಾದ ವಲಯಗಳಲ್ಲಿ ಆ ಭಾಗದಲ್ಲಿ ಸಾಕಷ್ಟು ಹೂಡಿಕೆ ಮಾಡಲು ಆಸಕ್ತಿ ತೋರಿರುವ ಕೈಗಾರಿಕೋದ್ಯಮಿಗಳು ಈ ಕುರಿತಂತೆ ಸರಕಾರದ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ.

ಬಿಯಾಂಡ್ ಬೆಂಗಳೂರಿಗಾಗಿ ಸರಕಾರ ಮೊದಲೇ ಸಿದ್ಧತೆ ಮಾಡಿಕೊಂಡಿತ್ತು. ವಿದೇಶಗಳು ಮತ್ತು ದೇಶದ ಪ್ರಮುಖ ನಗರಗಳಲ್ಲಿ ನಡೆದ ರೋಡ್ ಶೋ ವೇಳೆ ಈ ಕುರಿತು ಉದ್ಯಮಿಗಳ ಜತೆ ಮಾತುಕತೆ ನಡೆಸಲಾಗಿತ್ತು. ಅದಕ್ಕೂ ಮೊದಲು ನೂತನ ಕೈಗಾರಿಕಾ ನೀತಿ 2020-25ರಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಬೆಂಗಳೂರಿನಿಂದ ಹೊರಗೆ ಕೈಗಾರಿಕೆಗಳನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಹಿಂದುಳಿದಿರುವ ಕೈಗಾರಿಕಾ ಅಭಿವೃದ್ಧಿಯನುಸಾರ ಬಂಡವಾಳ ಹೂಡಿಕೆಗಳಿಗೆ ರಿಯಾಯಿತಿ ಒದಗಿಸಲು ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿತ್ತು.

ಬೆಂಗಳೂರು ಕೇಂದ್ರಿತ ಕೈಗಾರಿಕೆಗಳ ಸ್ಥಾಪನೆ ತಪ್ಪಿಸುವ ನಿಟ್ಟಿನಲ್ಲಿ ರೂಪಿಸಿರುವ ಒಂದು ಜಿಲ್ಲೆ ಒಂದು ಉತ್ಪಾದನೆ ಕಾರ್ಯಕ್ರಮದಡಿ ಕೊಪ್ಪಳದಲ್ಲಿ ಆಟಿಕೆ ಕ್ಲಸ್ಟರ್, ಹುಬ್ಬಳ್ಳಿ ಧಾರವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿಯ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್, ಕಲಬುರ್ಗಿಯಲ್ಲಿ ಜವಳಿ, ಜ್ಯೂವೆಲ್ಲರಿ ಪಾರ್ಕ್, ಹುಬ್ಬಳ್ಳಿ-ಧಾರವಾಡದಲ್ಲಿ ಐಟಿ ಪಾರ್ಕ್ ಅಭಿವೃದ್ಧಿಪಡಿಸಲಾಗಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆ ಸ್ಥಾಪನೆಗೆ, ಅದರಲ್ಲಿಯೂ ಕೃಷಿ ಆಧಾರಿತ ಟೆಕ್ಸ್‌ಟೈಲ್ ಹಾಗೂ ಫುಡ್ ಪ್ರೊಸೆಸ್ಸಿಂಗ್ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಲಾಗಿತ್ತು. ತುಮಕೂರು ಮಷಿನ್ ಟೂಲ್ಸ್ ಪಾರ್ಕ್, ಫುಡ್ ಪಾರ್ಕ್, ಜಪಾನೀಸ್ ಕೈಗಾರಿಕಾ ಪ್ರದೇಶ ಹೀಗೆ ಹಲವಾರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿತ್ತು.



ರಿಕ್ಕಿಕೇಜ್ ಸಂಗೀತ



ಅರುಣಾ ಸಾಯಿರಾಮ್ ಮತ್ತು ಕೌಶಿಕಿಚಕ್ರಬರ್ತಿ ಅವರ ಜುಗಲ್ಬಂದಿ




ಹೂಡಿಕೆ ಸಮಾವೇಶದಲ್ಲಿ ಸಾಂಸ್ಕೃತಿಕ ಲೋಕದ ಅನಾವರಣ





ವಸುಂದರಾದಾಸ್ ಅವರಿಂದ ವಿನೂನತ ಸಂಗೀತ ಕಾರ್ಯಕ್ರಮ





ಮಹಿಳಾ ಯಕ್ಷಗಾನ ತಂಡದ ಪ್ರದರ್ಶನ ಸಮಾವೇಶಕ್ಕೆ ಕಳೆಕಟ್ಟಿತು.







ವನ್ಯಜೀವಿ ಚಲನಚಿತ್ರ ನಿರ್ಮಾಪಕರಾಗಿ ಮತ್ತು ಪ್ರಸಿದ್ಧ ನೈಸರ್ಗಿಕ ಇತಿಹಾಸಕಾರ ಹಂಟರ್

ಅಖಿಲ ಭಾರತ ವೀರಶೈವ ಮಹಾಸಭಾ ಮುಖಂಡರ ಸ್ಪಷ್ಟನೆ

ಮೈಸೂರು, ನ.4– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಎನ್‌ಟಿಎಂ ಶಾಲೆ ಹಾಗೂ ಬಿಆರ್‌ಸಿ ಕಟ್ಟಡದ ಆವರಣವನ್ನು ರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರಿಸುವ ಸಂಬಂಧ ಸರ್ಕಾರದ ಆದೇಶದಲ್ಲಿರುವ ಅವೈಜ್ಞಾನಿಕ ತೀರ್ಮಾನದ ಬಗ್ಗೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಈ ವಿಚಾರವು ಇತ್ಯರ್ಥವಾಗಬೇಕಿರುವಾಗ ವಿವೇಕ ಸ್ಮಾರಕದ ಪಕ್ಕದ ಜಾಗ ಎನ್ನುವುದು ಸರಿಯಲ್ಲ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯ ಟಿ.ಎಸ್.ಲೋಕೇಶ್ ಸ್ಪಷ್ಟಪಡಿಸಿದ್ದಾರೆ.

ಶ್ರೀ ನಿರಂಜನ ಮಠದ ಪಕ್ಕದಲ್ಲಿರುವ ಎನ್‌ಟಿಎಂ ಶಾಲಾ ಕಟ್ಟಡ ಹಾಗೂ ಆವರಣ, ಅದಕ್ಕೆ ಹೊಂದಿಕೊಂಡಿರುವ ಬಿಆರ್‌ಸಿ ಕಟ್ಟಡ ಹಾಗೂ ಆವರಣ ಒಳಗೊಂಡಂತೆ ಒಟ್ಟು 36591.66 ಚದರ ಅಡಿ ಜಾಗವನ್ನು 'ವಿವೇಕ ಸ್ಮಾರಕ' ಸ್ಥಾಪನೆಗೆ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ ಸಂಸ್ಥೆಗೆ ಹಸ್ತಾಂತರಿಸಬೇಕೆಂದು ಸಚಿವ ಸಂಪುಟದ ನಿರ್ಣಯದಲ್ಲಿ ಉಲ್ಲೇಖವಿದೆ. ಆದರೆ ಆ ಸಂಬಂಧ ಸರ್ಕಾರ ಹೊರಡಿಸಿದ ಆದೇಶದಲ್ಲಿ ವಿವೇಕ ಸ್ಮಾರಕದ ಪಕ್ಕದ ಜಾಗ ಎಂದು ನಮೂದಿಸಲಾಗಿದೆ. ಈ ವಿಷಯವು ಹೈಕೋರ್ಟ್‌ನಲ್ಲಿ ಇತ್ಯರ್ಥವಾಗಬೇಕಿದೆ. ಈ ನಡುವೆ ಶ್ರೀ ನಿರಂಜನ ಮಠದ ಭಕ್ತರು ಮೈಸೂರಿನ 10ನೇ ಸಿವಿಲ್ ನ್ಯಾಯಾಲಯ(ಕಿರಿಯ ಶ್ರೇಣಿ)ಕ್ಕೆ ಅರ್ಜಿ ಸಲ್ಲಿಸಿದ್ದರು. ಈಗಾಗಲೇ ಹೈಕೋರ್ಟ್ ನಲ್ಲಿ ಪ್ರಕರಣ ಇರುವುದರಿಂದ ಮೈಸೂರಿನ ನ್ಯಾಯಾಲಯ ಅರ್ಜಿ ತಿರಸ್ಕರಿಸಿದೆ ಎಂದು ಲೋಕೇಶ್ ಸ್ಪಷ್ಟಪಡಿಸಿದ್ದಾರೆ.

ಸರ್ಕಾರದ ಆದೇಶದ ಪ್ರಕಾರ ವಿವೇಕ ಸ್ಮಾರಕ ಎಲ್ಲಿದೆ?. ಶ್ರೀ ನಿರಂಜನ ಮಠವನ್ನು ವಿವೇಕ ಸ್ಮಾರಕ ಎಂದು ಪರಿವರ್ತಿಸಿರುವ ಬಗ್ಗೆ ಸರ್ಕಾರಿ ಆದೇಶ ಇದೆಯೇ? ಸರ್ಕಾರದ ಪ್ರಕಾರ ವಿವೇಕ ಸ್ಮಾರಕ ಇದೆ ಎಂದಾದರೆ ಮತ್ತೊಂದು ಸ್ಮಾರಕದ ಅಗತ್ಯವಿದೆಯೇ? ಎಂದು ಲೋಕೇಶ್ ಪ್ರಶ್ನಿಸಿದ್ದಾರೆ.

ಮಲ್ಟಿ ನ್ಯಾಷನಲ್ ಕಂಪನಿಯಲ್ಲಿ ಕೆಲಸದ ಆಮಿಷ ತೋರಿ ಗೃಹಿಣಿಗೆ 10.94 ಲಕ್ಷ ವಂಚಿಸಿದ ದಂಪತಿ

ಕ್ರೈಂ ಬಾಕ್ಸ್

ಕೆ.ಆರ್.ನಗರ, ನ.4–ಮಗನಿಗೆ ಮಲ್ಟಿ ನ್ಯಾಷನಲ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿದ ದಂಪತಿ, ಗೃಹಿಣಿಗೆ 10.94 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಕೆ.ಆರ್.ನಗರ ತಾಲೂಕು ಮಾವತ್ತೂರು ಗ್ರಾಮದ ಸಾವಿತ್ರಮ್ಮಣ್ಣಿ(59) ವಂಚನೆಗೊಳಗಾದವರಾಗಿದ್ದು, ಇವರನ್ನು ಎಂ.ಆರ್.ಮುರುಳಿಗೌಡ ಮತ್ತು ಎಸ್.ಎಂ.ವೀಣಾ ದಂಪತಿ ಇವರನ್ನು ಪರಿಚಯಿಸಿಕೊಂಡಿದ್ದಾರೆ. ಮುರಳಿಗೌಡ ವಿಧಾನಸೌಧದಲ್ಲಿ ಕೆಲಸ ಮಾಡುತ್ತಿರುವುದಾಗಿಯೂ, ಆತನಿಗೆ ವಿವಿಧ ಕಂಪನಿಗಳ ಮಾಲೀಕರು, ಸಿಇಓ ಮತ್ತು ಹೆಚ್‌ಆರ್‌ಗಳ ಪರಿಚಯವಿದ್ದು, ಸಾವಿತ್ರಮ್ಮಣ್ಣಿಯವರ ಮಗನಿಗೆ ತಿಂಗಳಿಗೆ 2–3 ಲಕ್ಷ ರೂ. ಸಂಬಳ ಬರುವಂತೆ ಕೆಲಸ ಕೊಡಿಸುವುದಾಗಿ ನಂಬಿಸಿ 10.94 ಲಕ್ಷ ರೂ.ಗಳನ್ನು 2021ರ ಡಿ.30ರಂದು ಪಡೆದಿದ್ದಾರೆ. ಆದರೆ ಈವರೆವಿಗೂ ಸಾವಿತ್ರಮ್ಮಣ್ಣಿ ಮಗನಿಗೆ ಕೆಲಸವೂ ದೊರೆಯಲಿಲ್ಲ, ಹಣವೂ ವಾಪಸ್ಸಾಗಿಲ್ಲ. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಕೆ.ಆರ್.ಎಸ್. ನಾರ್ತ್ ಬ್ಯಾಂಕ್ ಹತ್ತಿರ ತೋಟದ ಕೆಲಸ ಮಾಡಿಕೊಂಡು ಮತ್ತು ಅಲ್ಲೇ ವಾಸವಿರುವ ಕುಟುಂಬದವರು ಬೇಕಾಗಿದ್ದಾರೆ. ತಿಂಗಳಿಗೆ 15,000/– ಸಂಬಳವಿರುತ್ತದೆ. ಆಸಕ್ತರು ಈ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ:
9242287291

ಬೇಕಾಗಿದ್ದಾರೆ
ಮೈಸೂರಿನ ರಾಮಕೃಷ್ಣನಗರ, ಆಂದೋಲನ ಸರ್ಕಲ್ ಹತ್ತಿರ, ಹೌಸ್ ಕೀಪಿಂಗ್ (House Keeping) ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 10 ಗಂಟೆವರೆಗೆ ಭಾನುವಾರ ರಜಾವಿರುತ್ತದೆ. ವೇತನ ಮಾಸಿಕ 11,000/– ಹಾಗೂ ESI & PF ಸೌಲಭ್ಯವಿರುತ್ತದೆ.
9731976148

Automatic Water Level

SALES & SERVICE
2 YEAR WARRANTY
SUN POWER SOLUTIONS
Yeraganahalli, Mysore
9739804444

ಶ್ರೀ ಗೌರಿಶಂಕರ ಟ್ರಾವೆಲ್ಸ್
10–11–22 (4 ದಿನ):– ಬಾಂಬೆ, ಶಿರಡಿ, ನಾಸಿಕ್, ಎಲ್ಲೋರ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ.
18–12–22 (1 ದಿನ):– ಕೋಟಿಲಿಂಗ, ಘಾಟಿ ಸುಬ್ರಮ್ಮಣ್ಯ, ಚಿಕ್ಕ ತಿರುಪತಿ.
24–12–22 (6 ದಿನ):– ಗುರುವಾಯೂರು, ಮುನ್ನಾರ್, ತ್ರಿವೆಂಡ್ರಂ, ಆಲಪ್ಪಿ, ಕೊಚಿನ್ ಇತ್ಯಾದಿ.
ವಿಮಾನ / ಬಸ್ / ರೂಂ / ಊಟ
9620002114

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven
Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

SITE FOR SALE
30×40 no.698 site is available for sale at Naidu nagar near nagalingeshwara temple interested may contact no.
9449850220
Direct Sale. Genuine buyer only. Brokers Excuse

WANTED IMMEDIATELY
Accounts Executives (Qualification B.Com/ BBM) Male Stores Executive (Qualification Any Degree) Male, Age Below 30 yrs, Experience: Min 1 to 2 yrs. Address: The Akshaya Patra Foundation, Mysore. No.31, 18th Cross, Jayanagar, Mysore
9964451366

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

ಕೇರಳ ಶ್ರೀ ಭಗವತಿ ಮಹಾಮಾಂತ್ರಿಕ ಜ್ಯೋತಿಷ್ಯರು ಪಂಡಿತ್ ಗುರುನಂದನ್
ಮೊ.: 9353250462
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ನಿಮ್ಮ ಸಮಸ್ಯೆಗಳಾದ ಪ್ರೇಮ ವಿವಾಹ, ಪತಿ–ಪತ್ನಿ ಕಲಹ, ವ್ಯಾಪಾರ, ಡೈವರ್ಸ್, ಸಾಲಭಾದೆ, ಶತ್ರುಕಾಟ, ಲೈಂಗಿಕ ಸಮಸ್ಯೆ, ಸಂತಾನ ಫಲ, ಮದುವೆ ಕಾರ್ಯದಲ್ಲಿ ವಿಘ್ನ, ಅತ್ತೆ, ಸೊಸೆ ಕಲಹ, ನಿಮ್ಮ ಮನದಾಳದ ಯಾವುದೇ ಗುಪ್ತ ಸಮಸ್ಯೆ ಇದ್ದರೆ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಕೂಡಲೇ ಸಂಪರ್ಕಿಸಿ 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಿಗೆ ಫೋನಿನ ಮೂಲಕ ಸಂಪರ್ಕಿಸಿ. ವಿಳಾಸ ಮೈಸೂರು

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೋಲಾರ್ ವಾಟರ್ ಹೀಟರ್ Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

SITE FOR SALE
30x40
MUDA Approved Layout Bogadi Gaddige Road, (5 kms from the Bogadi Ring Road JN)
9743532664

WANTED
Lady Receptionist for Reputed Poly Clinic in Kalidasa Road with minimum PUC and from near by Locality
6360068422

HOUSE FOR SALE
20x30 G+ Duplex, East Facing in Srirampura, Mathrushree Badavande, Ring Road, Attached Layout. 75 Lakhs (Nego.)
Contact:
9739703467

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಹೊಸ ಮನೆ ಮಾರಾಟಕ್ಕಿದೆ
1,400 ಅಡಿ ಹೊಸ ಮನೆ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

WANTED
Reputed Hotel Requires following staff:
1) Receptionist - 2
2) Room Boy - 2
3) Security Guard - 2
Contact:
Mob: 8861360214

LEASE / RENT
ರೂಂ ಮತ್ತು ಬಾತ್ ರೂಂ (ಹೊಸದಾಗಿ ಕಟ್ಟಿರುವ ಮನೆಯಲ್ಲಿ) No.37, Ganesh Nagara, N.R.Mohalla, St. Anne's School ಪಕ್ಕ, ಮೈಸೂರು – 570 007
9663944172

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಟೀ – ಕಾಫಿ ಮಾಡುವವರು – 2 ನಂ.
ಸಪ್ಲೇಯರ್‌ಗಳು – 2 ನಂ.
ಕ್ಲೀನಿಂಗ್ ಕೆಲಸಕ್ಕೆ – 2 ನಂ.
ಚಾಟ್ಸ್ + ಚೈನೀಸ್ – 1 ನಂ.
8088337564
9380681467

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ಕರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
1) ಕಾಫೀ / ಟೀ ಮಾಡುವವರು
2) ದೋಸೆ ಭಟ್ಟರು
3) ರುಬ್ಬುವವರು
4) ಇಡ್ಲಿ / ವಡೆ / ಪೂರಿ ಹಾಕುವವರು
5) ಕ್ಲೀನರ್ / ಹೌಸ್‌ಕೀಪಿಂಗ್ (ಗಂಡಸರು / ಹೆಂಗಸರು)
6) ಕೌಂಟರ್ ಕೆಲಸ ಮಾಡುವವರು.
Mob: 9342281700

ತಕ್ಷಣ ಬೇಕಾಗಿದ್ದಾರೆ
(Excellent Opportunity)
For ನಿವೃತ್ತ ನೌಕರರಿಗೆ, ಗೃಹಿಣಿಯರಿಗೆ, ನಿರುದ್ಯೋಗಿಗಳಿಗೆ (Above 30 years) ಭಾರತದ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶವಿದೆ. ಕೂಡಲೇ ಸಂಪರ್ಕಿಸಿ:
9449152797, 8660764095

HOUSE FOR RENT / LEASE
G/F, F/F, 2 BHK, 2 wheeler parking, near Shanthala Theatre Signal Light. Only Veg.
Mob: 8050263082

ಅರ್ಚಕರು ಬೇಕಾಗಿದ್ದಾರೆ
ಮೈಸೂರಿನ ಗೋಕುಲಂ 1ನೇ ಹಂತದಲ್ಲಿರುವ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜಾವಿಧಿಗಳನ್ನು ಸಲ್ಲಿಸಲು ಅಯ್ಯಂಗಾರ್ ಅಥವಾ ಬ್ರಾಹ್ಮಣರಾಗಿದ್ದು, 50 ವರ್ಷದ ಮೇಲ್ಪಟ್ಟ ಅವಿವಾಹಿತರಾಗಿದ್ದು, ಉಚಿತ ವಸತಿ ಸೌಲಭ್ಯ, ವೇತನ: 5000/– ಗಳು ಮಾತ್ರ
9900470003

ಕ್ರಯಕ್ಕೆ ಮನೆ ಬೇಕಾಗಿದೆ
1) ಮೈಸೂರು ನಗರದ ಮುಡಾ ವ್ಯಾಪ್ತಿಯಲ್ಲಿ ಕ್ರಯಕ್ಕೆ ಮನೆ ಬೇಕಾಗಿದೆ.
2) ದಟ್ಟಗಳ್ಳಿ ಬಳಿಯ ವೃಷ್ಟಿ ಲೇ ಔಟ್‌ನಲ್ಲಿ 50x80 ಸೈಟ್ ಮಾರಾಟಕ್ಕಿದೆ.
3) ಕೆ.ಆರ್. ಪೇಟೆಯ ಜಯನಗರದಲ್ಲಿ ಎರಡು ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
9731135888

BOYS & GIRLS
Boys & Girls ಅಗ್ರಹಾರ ಹತ್ತಿರ Door Showroom ನಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ.
9886640503

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

S.K. Construction
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ, Plan, Loan ಮಾಡಿಸಿ 3D Elevation ಸಹಿತ ಕಟ್ಟಿಕೊಡುತ್ತೇವೆ.
Mob: 9620528490

SITE FOR SALE
40x60
MUDA Approved Layout 60 feet Road, Paramananda Sagar Telecom Layout, Near St. Joseph's School, Hunsur Road, Belavadi
9743532664

ವಾಹನಗಳು ಬೇಕಾಗಿವೆ
ಹೈದರಾಬಾದ್, ಚೆನ್ನೈ ಮತ್ತು ಮಂಗಳೂರು ಕಂಪನಿಗಳಿಗೆ ಮೆಟೀರಿಯಲ್ ಸರಬರಾಜು ಮಾಡಲು ಹೊಸ ಬೊಲೆರೊ ಪಿಕಪ್ ವಾಹನಗಳು ಬೇಕಾಗಿವೆ. ಕಿಲೋ ಮೀಟರ್‌ಗೆ 23/– ರೂ.ಗಳು. (ಆಫೀಸ್ ಇನ್ ಚಾರ್ಜ್ 1 ಬೇಕಾಗಿದ್ದಾರೆ.) ಆಫೀಸ್ ಹಾಸನ:
9986769789

ACCOUNTANT ಕೆಲಸಕ್ಕೆ ಬೇಕಾಗಿದ್ದಾರೆ
Tally, MS Excel ಕಲಿತವರು. ಸಂಪರ್ಕಿಸಿ:
Email: sgcb13001@gmail.com
9844243735

ಚಾಮರಾಜನಗರದಲ್ಲಿ ಸೈಟು ಮಾರಾಟಕ್ಕಿದೆ
40x258 ಅಳತೆಯ ಈ ಖಾತೆ ಸೈಟು ದೀನಬಂಧು ಸಮೀಪದ ಪೊಲೀಸ್ ನಿವೇಶನಗಳ ಎದುರು. ಬೆಲೆ 80 ಲಕ್ಷ (Negotiable)
9880243301

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: 5th ತರಗತಿಯಿಂದ 2nd PUC
9845743950
ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: ITI (Fitter, Turner, Welder, Machinist, Any Trade) (AAL)
7019380847

WANTED
OFFICE ATTENDER / PEON
Male / Female, Age: 30-45, Saraswathipuram, Mysore
8971922340
9844200669

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ
1) ಅಕೌಂಟೆಂಟ್ (ಹುಡುಗಿಯರು) –1
2) ಡ್ರೈವರ್ –1
3) ಸೂಪರ್ ವೈಸರ್ – 1
8892258814

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು:– 18 ರಿಂದ 45, ಸಂಬಳ: 14,500 ESI, PF ಒಳಗೊಂಡು 3 Shift ಹಾಗೂ Week off ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದು ಕೊಳ್ಳತಕ್ಕದ್ದು. ಸ್ಥಳ: CIPET ಕಾಲೇಜ್ ಹತ್ತಿರ, ರಿಂಗ್ ರೋಡ್, ಮೇಟಗಳ್ಳಿ, ಮೈಸೂರು
9986874584

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
ಹಿಂದೂ ವಧು – ವರರ ಮಾಹಿತಿ ಕೇಂದ್ರ ಜಯನಗರ, ಮೈಸೂರು. ಬೇಕಾಗಿದ್ದಾರೆ. (ಕಂಪ್ಯೂಟರ್ ತಿಳಿದಿರುವ ಮಹಿಳೆ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ). ಸಂಪರ್ಕಿಸಿ:
9663199511

FOR SALE
A) At Excellent location, 3 BHK Apartment Flat for Rent, East facing, 1700 Sft, 4th floor, Road facing big balconies, Semi Furnished and B) Another new Apartment 3 BHK Flat for Sale, 1200 Sft, Ground floor, North facing - Both at Posh location of Vontikoppal, Mysore -With one Car parking / Lift amenities . Contact:
9480308402 / 9004470423

ಮನೆ ಬಾಡಿಗೆಗೆ ಇದೆ
ಮನೆ ನಂ. 123, 4ನೇ ಮೇನ್, 12ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು.
Duplex 12 Squares, 3BHK Veg. Only
7760110852 / 8073130659

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

CHRISTIAN MATRIMONY
He & She, Mysore Marriage Bureau. Nelson Selvaraj
9844446469
9880099929

ANJALI PG
College Students & Working Womens for Provided Facilities for our PG
* Good & Hygenic Food. * Hot Water Facility, * Wi-Fi Facility, * T.V. Facility.
#901/1, 3rd Main, Opp. Park, Vidyaranyapuram, Mysore
9035532729 / 9392577022

ಮನೆ ಬಾಡಿಗೆಗೆ
2 ಬೆಡ್ ರೂಂ, ಶಾಂತಲಾ ಚಿತ್ರಮಂದಿರ ಹತ್ತಿರ ನೆಲ ಅಂತಸ್ತು.
ಬಾಡಿಗೆ : 11,000/–
8792784573

HOUSE FOR SALE
20x30 at Kuvempunagar, 25x40 & 40x60 GF at Ramakrishnanagar, 40x60 GF at T.K.Layout, 40x60 Rent at Dattagalli.
9663136318

SITE FOR SALE
16.5 x 34= 561 Sqft Vacant Site for Sale, MUDA allotted, West Facing at Sharadadevi Nagar, Near Corporation Bank, Mysuru. Price - 38 Lakhs
8660105902

HOUSE FOR SALE
27x40, MUDA, 3BHK Duplex House, North East Corner, 3 years Old House, Fully Furnished, at Vijayanagar 4th Stage, Mysuru - Price 1.20 Cr.
33x40, MUDA Allotted, 2BHK Single Floor House, East Facing, 8 Years Old House, Dattagalli, Mysuru - Price 98 Lakhs
8660105902

WANTED
Lady Cook & Helpers for Snacks & Sandwich Shop @ Kuvempunagar, Mysore. Contact:
9741166800

ಸುವರ್ಣ ಯಾತ್ರ
ಕೆಲವೇ ಸೀಟುಗಳು ಲಭ್ಯ, ಕಾರ್ತಿಕ ಮಾಸದ ವಿಶೇಷ ಕಾಶಿ ಪ್ರವಾಸ 7 ದಿನಗಳು, 15–11–22, 2 ಜ್ಯೋತಿರ್ಲಿಂಗ ಹಾಗೂ 2 ಶಕ್ತಿಪೀಠ ದರ್ಶನ, ಪ್ರಯಾಗ್‌ರಾಜ್, ಅಯೋಧ್ಯೆ ಹಾಗೂ ಇತರೆ.
8 ದಿನಗಳ ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ, 15–11–22, ಮನೋಕಾಮನ, ಲುಂಬಿನಿ, ಸೋನಾಲಿ, ಪಶುಪತಿನಾಥ, ಜಲನಾರಾಯಣ ಕಠ್ಮಂಡು ಹಾಗೂ ಇತರೆ.
9019462508
9008381022

ಬೇಕಾಗಿದ್ದಾರೆ
Ladies PG ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ. (ಸಂಬಳ 9000 ರಿಂದ 10,000)
9972567537
9035004605

ನಿವೃತ್ತ ನೌಕರರಿಗೆ ಉದ್ಯೋಗ
ನಿವೃತ್ತ ನೌಕರರಿಗೆ ಉದ್ಯೋಗ, ವಿದ್ಯಾರ್ಹತೆ: SSLC, PUC, Degree, ವೇತನ: 10,000/–, 20,000/–, 30,000/– ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು.
1) ವಿದ್ಯಾರ್ಹತೆ ಅಂಕ ಪತ್ರ, 2) ಆಧಾರ್ ಕಾರ್ಡ್, 3) ಪಾನ್ ಕಾರ್ಡ್, 4) ಬ್ಯಾಂಕ್ ಪಾಸ್ ಪುಸ್ತಕ, 5) ಪಾಸ್ ಪೋರ್ಟ್ ಅಳತೆ ಫೋಟೋ. ಸಂಪರ್ಕಿಸಿ:
9886647852

SITE FOR SALE
30x40 Sites
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

ಮುಡಾ ನಿವೇಶನ ಮಾರಾಟಕ್ಕಿದೆ
20x30 ಪೂರ್ವ ದಿಕ್ಕು, ಜೆ.ಪಿ.ನಗರ
45 Lakhs
9900146468

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಶಿಯರ್ ಹುದ್ದೆಗಾಗಿ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಶ್ರೀ ಸರ್ವಿಸ್ ಸ್ಟೇಷನ್, ಟಿ.ಟಿ.ಎಲ್ ಕಾಲೇಜ್ ಪಕ್ಕ, ಸರಸ್ವತಿಪುರಂ.
9611534651

ಕಳೆದಿದೆ
ಎಸ್.ಎನ್.ನಾಗೇಶ್ ಆದ ನಾನು ದಿನಾಂಕ: 28/10/2022 ರಂದು ಬಸ್‌ನಲ್ಲಿ ಮೈಸೂರಿನಿಂದ ಹುಲ್ಲಹಳ್ಳಿಗೆ ಚಲಿಸುತ್ತಿದ್ದಾಗ ನನ್ನ ಎರಡು ಶುದ್ಧಕ್ರಯ ಪತ್ರ ಕಳೆದಿದೆ. 1) ನಂ. 2477 ಮತ್ತು 2) ನಂ.: 1657 ಕಳೆದಿದೆ. ಯಾರಿಗಾದರೂ ಸಿಕ್ಕಿದಲ್ಲಿ 7 ದಿನದ ಒಳಗೆ ನನ್ನ ಈ ವಿಳಾಸಕ್ಕೆ ತಲುಪಿಸತಕ್ಕದ್ದು. ನಂ.113, ಕಪಿಲಾ ಬಡಾವಣೆ ಹುಲ್ಲಹಳ್ಳಿ ನಂಜನಗೂಡು ತಾಲ್ಲೂಕು, ಮೈಸೂರು.
7349243527

ಮೈಸೂರು ಮ್ಯಾರೇಜ್ ಬ್ಯೂರೋ
ಒಕ್ಕಲಿಗ 45 ವರ್ಷ ಸುಂದರ ಶ್ರೀಮಂತ ಮಕ್ಕಳಿಲ್ಲದ ವಿಧವೆಗೆ ಸುಂದರ ಶ್ರೀಮಂತ ವರ ವಿಧುರ ವಿಚ್ಛೇದಿತರು ನೇರ ಸಂಪರ್ಕಿಸಿ. ಜಾತಿ ಅಭ್ಯಂತರ ಇಲ್ಲ. ನಿಮ್ಮ ವಾಟ್ಸಾಪ್ ಮಾಡಿರಿ
ಡಾ. ಗುರೋಜಿ ಮೈಸೂರು
6361740552

2ಲೀ. ಸನ್‌ಪ್ಯೂರ್ ಎಣ್ಣೆ ಉಚಿತ
26 Kg MR ಗೋಲ್ಡ್ ರೈಸನ್ನು ಖರೀದಿಸಿದರೆ 2ಲೀಟರ್ ಸನ್‌ಪ್ಯೂರ್ ಅಡಿಗೆ ಎಣ್ಣೆ ಮತ್ತು 1½ ಕೆಜಿ ಸಕ್ಕರೆಯನ್ನು ಉಚಿತವಾಗಿ ಪಡೆಯಿರಿ ಬೆಲೆ ರೂ. 1500/- ಮಾತ್ರ
ಸನ್‌ಶೈನ್ ಟ್ರೇಡರ್ಸ್
9206470833 ಮೈಸೂರು

ಬೇಕಾಗಿದ್ದಾರೆ
ಮೈಸೂರಿನ ಸಸ್ಯಹಾರಿ ಹೋಟೆಲ್ ಒಂದಕ್ಕೆ ಅನುಭವವುಳ್ಳ
* ದೋಸೆ ಭಟ್ಟರು – 2
* ರುಬ್ಬುವವರು – 1
* ಕೌಂಟರ್ ಬಾಯ್ – 2
* ಆಲ್‌ರೌಂಡರ್ – 2
(ಕಾಫಿ, ಅಡುಗೆ, ದೋಸೆ)
9945059645

SITES FOR SALE
Approved by MUDA and DTCP
20x30, 20x40, 30x60, 30x40, 30x50, 40x60
Hunsur Road, Bogadi Road, T. Narasipura Road and Infosys Back Side.
9632454592

ಹೋಂನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ ವಸತಿ ಉಚಿತದೊಂದಿಗೆ ಸಂಬಳ 12,000 – 23,000 ರವರೆಗೆ. (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ). ಅಗ್ರಹಾರ:
9035113222

30x40 ಸೈಟು @ Rs. 15 ಲಕ್ಷ
MUDA APPROVED LAYOUT
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್‌ಬಹುದ್ದೂರ್ ಶಾಸ್ತ್ರಿ ನಗರದ ನಂತರ
9538583377

ಮನೆ ಮಾರಾಟಕ್ಕಿದೆ
25x30 ಪಶ್ಚಿಮ ದಿಕ್ಕು, 2BHK, 2 ಅಂತಸ್ತು, ಸಿಐಟಿಬಿ ಕುವೆಂಪುನಗರ
9845352952
9845860081

20x40 / 30x40 30x50 / 40x60 ಬಂಪರ್ ಆಫರ್
ಕೇವಲ 50 ಸಾವಿರ ಮುಂಗಡ ಹಣ ಪಾವತಿಸಿ ಸುಂದರ ಸೈಟ್ ನಿಮ್ಮದಾಗಿಸಿಕೊಳ್ಳಿ ಮತ್ತು ಉಳಿದ ಹಣ 5 ಸಾವಿರದಂತೆ ಪ್ರತಿ ತಿಂಗಳು ಕಂತಿನ ಮೂಲಕ 5 ವರ್ಷದ ತನಕ ಬಡ್ಡಿರಹಿತ ಕಟ್ಟುವ ಸೌಲಭ್ಯದ ಜೊತೆಗೆ ಮರು ಖರೀದಿ ಆಫರ್, ಸೈಟ್ ಜೊತೆ ಫಾರ್ಮ್ ಹೌಸ್ ಹಾಗೂ ಮನೆ ನಿರ್ಮಾಣ ಮಾಡಿಕೊಡಲಾಗುವುದು. ಸ್ಥಳ: ಮೈಸೂರು ವಿಮಾನ ನಿಲ್ದಾಣ ಹತ್ತಿರ.
9535541422 / 9740795355

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಕೆ.ಆರ್.ನಗರದ ಜನವಸತಿ ಪ್ರದೇಶದಲ್ಲಿ ಚಿರತೆ ಚೆಲ್ಲಾಟ

ಹಲವರ ಮೇಲೆ ದಾಳಿ, ಕೊನೆಗೆ ಸುರಕ್ಷಿತ ಸೆರೆ





ಕೆ.ಆರ್.ನಗರ, ನ.4(ಎಂಟಿವೈ)– ಹಾಡ ಹಗಲೇ ಕೆ.ಆರ್.ನಗರದ ಜನವಸತಿ ಪ್ರದೇಶಕ್ಕೆ ನುಗ್ಗಿದ ಚಿರತೆ, ಬೈಕ್ ಸವಾರ ಹಾಗೂ ಅರಣ್ಯ ಸಿಬ್ಬಂದಿ ಮೇಲೆ ದಾಳಿ ನಡೆಸಿ, ಭಾರೀ ಆತಂಕ ಸೃಷ್ಟಿಸಿದ್ದು, ಕೊನೆಗೂ ಅರಣ್ಯ ಸಿಬ್ಬಂದಿ ಚಿರತೆಯನ್ನು ಸುರಕ್ಷಿತವಾಗಿ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೆ.ಆರ್.ನಗರದಿಂದ ಮುಳ್ಳೂರಿಗೆ ಹೋಗುವ ರಸ್ತೆಯಲ್ಲಿರುವ ಕನಕನಗರ ದಲ್ಲಿ ಶುಕ್ರವಾರ ಬೆಳಗ್ಗೆ ಚಿರತೆ ಪ್ರತ್ಯಕ್ಷವಾಗಿದೆ. ಖಾಲಿ ನಿವೇಶನದಲ್ಲಿ ಬೆಳೆದಿದ್ದ ಪೊದೆಯಲ್ಲಿ ಅಡಗಿದ್ದ ಚಿರತೆಯನ್ನು ನೋಡಲು ಜನ ಮುಗಿಬಿದ್ದ ಹಿನ್ನೆಲೆಯಲ್ಲಿ ಗಾಬರಿಗೊಂಡ ಚಿರತೆ ದಿಕ್ಕಾಪಾಲಾಗಿ ಓಡಲಾರಂಭಿಸಿದೆ. ಜೊತೆಗೆ ಜನರ ಕೂಗಾಟ, ಸದ್ದಿಗೆ ರೊಚ್ಚಿಗೆದ್ದ ಚಿರತೆ ಮನೆಗಳ ನಡುವೆ ಇದ್ದ ಮತ್ತೊಂದು ಖಾಲಿ ನಿವೇಶನದಲ್ಲಿ ಅಡಗಿಕೊಂಡಿದೆ.

ಸ್ವಲ್ಪ ಸಮಯದ ಬಳಿಕ ಏಕಾಏಕಿ ಪೊದೆಯಿಂದ ಹೊರ ಬಂದ ಚಿರತೆ ಕಟ್ಟಡದ ಮೇಲಿದ್ದ ಜನರತ್ತ ದಾಳಿಗೂ ಮುಂದಾಗಿದೆ. ಕಟ್ಟಡದ ಕಿಟಕಿ ಮೇಲೇರಿ ಕೆಳಗೆ ಬಿದ್ದಿದೆ. ಕೊನೆಗೆ ರಸ್ತೆಯತ್ತ ನುಗ್ಗಿದ ಚಿರತೆ ಕೆ.ಆರ್.ನಗರದ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೆಂಕಟೇಶ್ ಎಂಬುವವರ ಮೇಲೆರಗಿದೆ. ಆತನಿಗೆ ಪಂಜಿನಿಂದ ಬಾರಿಸಿದೆ. ಚಿರತೆ ದಾಳಿಯಿಂದ ಆಘಾತಕ್ಕೊಳಗಾದ ಬೈಕ್ ಸವಾರ ಕೆಳಗುರುಳಿದ. ಮತ್ತೆ ಚಿರತೆ ಖಾಲಿ ನಿವೇಶನ ಹಾದು ರಸ್ತೆಗೆ ಬಂದಿದೆ. ಈ ವೇಳೆ ಎದುರಿಗೆ ಬಂದ ಡಿಆರ್‌ಎಫ್‌ಓ ಮಂಜುನಾಥ್, ಬೆಚ್ಚಿ ಬಿದ್ದು ಚಿರತೆ ಮೇಲೆ ಕಲ್ಲು ಎಸೆದು, ಓಡಿಸಲು ಯತ್ನಿಸಿದರು. ಆದರೆ, ಚಿರತೆ ಅರಣ್ಯ ಸಿಬ್ಬಂದಿ ಮಂಜು ವಿನ ಮೇಲೆರಗಿ, ತೋಳು ಕಚ್ಚಿ ಮತ್ತೊಂದು ಖಾಲಿ ನಿವೇಶನದಲ್ಲಿ ಅಡಗಿತು.

ಹಿರಿಯ ಅಧಿಕಾರಿಗಳ ಅನುಮತಿ ಪಡೆದು ಚಿರತೆ ಸೆರೆಗೆ ಕಾರ್ಯಾಚರಣೆ ಆರಂಭಿಸು ವಷ್ಟರಲ್ಲಿ ಅದು ನಾಲ್ವರ ಮೇಲೆ ದಾಳಿ ನಡೆಸಿ, ಗಾಯಗೊಳಿಸಿತ್ತು. ಬಳಿಕ ನಿವೇಶನ ವೊಂದರ ಪೊದೆಯಲ್ಲಿ ಅಡಗಿ ಕುಳಿತ್ತಿದ್ದ ಚಿರತೆಗೆ ಅರವಳಿಕೆ ಮದ್ದು ನೀಡುವಲ್ಲಿ ಅರಣ್ಯ ಸಿಬ್ಬಂದಿ ಯಶಸ್ವಿಯಾದರು.

ಅದು ಮಂಪರಿಗೆ ಜಾರುತ್ತಿದ್ದಂತೆಯೇ ಅರಣ್ಯ ಸಿಬ್ಬಂದಿ ಬಲೆಯೊಳಗೆ ಚಿರತೆಯನ್ನು ಹಾಕಿಕೊಂಡು, ಬೋನ್‌ನೊಳಗೆ ಇರಿಸಿ, ಅರವಳಿಕೆ ಮದ್ದಿನ ಪರಿಣಾಮ ಕಡಿಮೆ ಮಾಡಲು ಇಂಜೆಕ್ಷನ್ ನೀಡಿ, ಮೈಮೇಲೆ ನೀರು ಹಾಕಿದರು. ಪ್ರಥಮ ಚಿಕಿತ್ಸೆ ಬಳಿಕ ಚಿರತೆಯನ್ನು ನಾಗರಹೊಳೆ ಅಭಯಾರಣ್ಯಕ್ಕೆ ಕೊಂಡೊಯ್ದು ಅಲ್ಲಿ ಬಿಡುಗಡೆ ಮಾಡಲಾಯಿತು.

ಚಿರತೆ ದಾಳಿಯಿಂದ ಗಾಯಗೊಂಡಿರುವ ಕೆ.ಆರ್.ನಗರದ ವೆಂಕಟೇಶ್, ಕರೀ ಗೌಡ, ಪರಶಿವ ಹಾಗೂ ಅರಣ್ಯ ಸಿಬ್ಬಂದಿ ಮಂಜು ಅವರಿಗೆ ಚಿಕಿತ್ಸೆ ಕೊಡಿಸಲಾಗಿದೆ. ಕೈ, ಕಾಲು, ತೋಳು, ತಲೆ ಬಳಿ ತರಚಿದ ಹಾಗೂ ಕಚ್ಚಿರುವ ಗಾಯಗಳಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ.

ಸ್ಥಳಕ್ಕೆ ಶಾಸಕ ಸಾ.ರಾ.ಮಹೇಶ್ ಆಗಮಿಸಿ ಪರಿಸ್ಥಿತಿ ಅವಲೋಕಿಸಿದರು. ಹುಣಸೂರು ವಿಭಾಗದ ಡಿಸಿಎಫ್ ಸೀಮಾ, ಆರ್‌ಎಫ್‌ಎಫ್ ರಶ್ಮಿ, ಡಿಆರ್‌ಎಫ್‌ಓ ಶೋಭಾ, ಪಶುವೈದ್ಯರಾದ ಪ್ರಶಾಂತ್, ವಾಸಿಂ ಹಾಗೂ ಇನ್ನಿತರರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪಿರಿಯಾಪಟ್ಟಣದಲ್ಲಿ ವಿದ್ಯುತ್ ಜನಸಂಪರ್ಕ ಸಭೆ



ಪಿರಿಯಾಪಟ್ಟಣ, ನ.4– ಪಿರಿಯಾಪಟ್ಟಣ ಉಪ ವಿಭಾಗ ಕಚೇರಿ ಸಭಾಂಗಣದಲ್ಲಿ ಪಿರಿಯಾಪಟ್ಟಣ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆ ನಡೆಯಿತು.

ಸಭೆ ಉದ್ಘಾಟಿಸಿ ಮಾತನಾಡಿದ ಮೈಸೂರು ಉಪ ವಿಭಾಗದ ಅಧೀಕ್ಷಕ ನಾಗೇಶ್, ವಿದ್ಯುತ್ ಘಟಕದ ನಿಯಂತ್ರಣ ಆಯೋಗದ ಸೂಚನೆ ಮೇರೆಗೆ ಗ್ರಾಹಕರ ಕುಂದು ಕೊರತೆ ಬಗೆಹರಿಸುವ ನಿಟ್ಟಿನಲ್ಲಿ ವಿದ್ಯುತ್ ಗ್ರಾಹಕರ ಜನಸಂಪರ್ಕ ಸಭೆ ನಡೆಸುತ್ತಿದ್ದೇವೆ ಎಂದರು. ಅಬಟೂರು ಗ್ರಾಮದ ಶ್ರೀಕಾಂತ್ ಮಾತನಾಡಿ, ದಿನಕ್ಕೆ ಎರಡೂವರೆ ಗಂಟೆ ಮಾತ್ರ ವಿದ್ಯುತ್ ವಿತರಿಸುತ್ತಿದ್ದಾರೆ. ನಮಗೆ ದಿನಕ್ಕೆ 7 ಗಂಟೆ ವಿದ್ಯುತ್ ನೀಡಬೇಕು ಎಂದು ಮನವಿ ಮಾಡಿದರೆ, ಹಳೇಪೇಟೆ ಕಂತಾಪುರದ ಅರುಣ್ ಕುಡಿಯುವ ನೀರಿನ ಸಂಪರ್ಕಕ್ಕೆ 24 ಗಂಟೆ ವಿದ್ಯುತ್ ನೀಡಬೇಕು. ಕೊರೊನಾ ವೇಳೆ ವ್ಯವಹಾರ ಸ್ಥಗಿತಗೊಂಡಿದ್ದರೂ, ವಿದ್ಯುತ್ ದರ ಹೆಚ್ಚಿಸಿದ್ದೀರಿ. ಚೌತಿ ಗ್ರಾಪಂನಲ್ಲಿ ಲೈನ್‌ಮನ್ ಕೊರತೆ ಇದೆ. ನಿರಂತರ ಜ್ಯೋತಿ ಸಂಪರ್ಕವಿಲ್ಲ. ಅಂಕನಹಳ್ಳಿ ವಿದ್ಯುತ್ ಸಂಪರ್ಕದ ಸ್ಟೇಷನ್ ಪಕ್ಕದಲ್ಲೇ ನಮಗೆ ವಿದ್ಯುತ್ ಅಭಾವವಿದೆ. ಚಿಟ್ಟೇನಹಳ್ಳಿಯಲ್ಲಿ ಬೆಳಕು ಯೋಜನೆ ಕೆಲಸ ಆಗಿಲ್ಲ. ಮರಗಳ ಮಧ್ಯೆ ವಿದ್ಯುತ್ ಲೈನ್ ಹೋಗಿ ಅನಾಹುತಕ್ಕೆ ಕಾರಣವಾಗುತ್ತಿದೆ. ರಸ್ತೆ ಅಕ್ಕಪಕ್ಕದಲ್ಲಿ ವಿದ್ಯುತ್ ಲೈನ್ ಕೆಳಗಡೆ ಅರಣ್ಯ ಇಲಾಖೆಯಿಂದ ಸಸಿ ನೆಟ್ಟು ಅನಾಹುತಕ್ಕೆ ಕಾರಣವಾಗುತ್ತಿದೆ. ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಕೊರತೆ ಸೇರಿದಂತೆ ನೂರಾರು ಸಮಸ್ಯೆಗಳನ್ನು ಸಭೆಯಲ್ಲಿ ಮಂಡಿಸಲಾಯಿತು. ಪ್ರತಿಯೊಂದು ಸಮಸ್ಯೆಗಳನ್ನು ಕೂಲಂಕಷವಾಗಿ ಆಲಿಸಿದ ಅಧೀಕ್ಷಕ ನಾಗೇಶ್ ತಕ್ಷಣ ಸಭೆಯಲ್ಲಿದ್ದ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚನೆ ನೀಡಿದರು.

ಈ ವೇಳೆ ಹುಣಸೂರು ಉಪ ವಿಭಾಗದ ಕಾರ್ಯ ನಿರ್ವಹಣಾಧಿಕಾರಿ ಪ್ರದೀಪ್ ಪಿರಿಯಾಪಟ್ಟಣ ಉಪವಿಭಾಗದ ಕಾರ್ಯ ನಿರ್ವಹಣಾಧಿಕಾರಿ ಸುನೀಲ್, ಶಶಿಧರ ಸೇರಿದಂತೆ ಇಲಾಖೆ ಸಿಬ್ಬಂದಿ, ಅಧಿಕಾರ ವರ್ಗ ಹಾಗೂ ನೂರಾರು ಮಂದಿ ಹಾಜರಿದ್ದರು.

ಕ್ಲೋರಿನ್ ಅನಿಲ ಸೋರಿಕೆ: ಐವರು ಅಸ್ವಸ್ಥ

ತಿ.ನರಸೀಪುರ, ನ.4– ಗ್ಯಾಸ್ ಕ್ಲೋರಿನ್ ಅನಿಲ ಸೋರಿಕೆಯಾಗಿ ಐವರು ಅಸ್ವಸ್ಥಗೊಂಡಿರುವ ಘಟನೆ ಪಟ್ಟಣದ ಮೈಸೂರು ಮುಖ್ಯರಸ್ತೆಯ ತ್ರಿವೇಣಿ ನಗರದಲ್ಲಿರುವ ನೀರು ಶುದ್ಧೀಕರಣ ಘಟಕದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಮಧ್ಯಾಹ್ನದ ವೇಳೆಗೆ ನೀರು ಶುದ್ಧೀಕರಣ ಘಟಕದಲ್ಲಿ ಅಲ್ಪ ಪ್ರಮಾಣದಲ್ಲಿ ಸೋರಿಕೆಯಾಗುತ್ತಿದ್ದ ಕ್ಲೋರಿನ್ ಅನಿಲ ಸಂಜೆ ವೇಳೆಗೆ ಜಾಸ್ತಿಯಾಗಿದೆ. ಈ ವೇಳೆ ಘಟಕದಲ್ಲಿದ್ದ ಐವರು ಅಸ್ವಸ್ಥಗೊಂಡಿದ್ದು, ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಪೊಲೀಸ್ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ತ್ರಿವೇಣಿ ನಗರ ಸೇರಿದಂತೆ ಅಕ್ಕಪಕ್ಕದ ಬಡಾವಣೆಗಳ ನಿವಾಸಿಗಳಿಗೆ ಅನಿಲ ಸೋರಿಕೆ ಮಾಹಿತಿ ತಿಳಿಸಿ 1 ದಿನಗಳ ಕಾಲ ಮನೆ ತೊರೆಯುವಂತೆ ಮನವಿ ಮಾಡಿದ್ದು, ಎಲ್ಲರಿಗೂ ಪಟ್ಟಣದ ವಸತಿ ಗೃಹಗಳಲ್ಲಿ ಉಳಿಯಲು ವ್ಯವಸ್ಥೆ ಮಾಡಿದ್ದಾರೆ.

ಕಳೆದ 6 ತಿಂಗಳ ಹಿಂದೆಯೂ ಇದೇ ರೀತಿ ಇಲ್ಲಿನ ನೀರು ಶುದ್ಧೀಕರಣ ಘಟಕದಲ್ಲಿ ಕ್ಲೋರಿನ್ ಅನಿಲ ಸೋರಿಕೆಯಾಗಿತ್ತು. ಆಗಲೂ ಇಲ್ಲಿನ ನೌಕರರು ಅಸ್ವಸ್ಥಗೊಂಡಿದ್ದರು. ಆ ಘಟನೆ ಮಾಸುವ ಮುನ್ನವೇ ಮತ್ತೆ ಅನಿಲ ಸೋರಿಕೆಯಾಗಿರುವುದು ಪುರಸಭೆ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಘಟನೆ ಬಗ್ಗೆ ಮಾಹಿತಿ ಪಡೆದರು. ಬಳಿಕ ತ್ರಿವೇಣಿ ನಗರ ಸೇರಿದಂತೆ ಅಕ್ಕಪಕ್ಕದ ಬಡಾವಣೆಗಳ ನಿವಾಸಿಗಳಿಗೆ ಚಿಕ್ಕಮ್ಮತಾಯಿ ಕಲ್ಯಾಣ ಮಂಟಪ, ವಿನಾಯಕ ವಸತಿ ಗೃಹ, ಬೃಂದಾ ಆಸ್ಪತ್ರೆಯಲ್ಲಿ ಸೂರು ಕಲ್ಪಿಸಿಕೊಡಲಾಗಿದೆ ಎಂದು ಅವರು 'ಮೈಸೂರು ಮಿತ್ರ' ನಿಗೆ ತಿಳಿಸಿದ್ದಾರೆ.

10 ಕೋಟಿ ವೆಚ್ಚದ ಡಾಂಬರ್ ರಸ್ತೆ ಕಾಮಗಾರಿಗೆ ಭೂಮಿಪೂಜೆ



ಹೆಚ್.ಡಿ.ಕೋಟೆ, ನ.4– ತಾಲೂಕಿನ ಕೋಳಗಾಲ ಗೇಟ್ ಬಳಿ 10 ಕೋಟಿ ರೂ. ವೆಚ್ಚದಲ್ಲಿ ಮೈಸೂರು–ಮಾನಂದವಾಡಿ ಮುಖ್ಯರಸ್ತೆಯ ಕೋಳಗಾಲ ಗೇಟ್‌ನಿಂದ ವಡ್ಡರಪಾಳ್ಯ ಗೇಟ್‌ವರೆಗಿನ 6 ಕಿ.ಮೀ ಉದ್ದದ ಡಾಂಬರ್ ರಸ್ತೆ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಮಾಜಿ ಸಚಿವ ಎಂ.ಶಿವಣ್ಣ ಅವರ ಅವಧಿಯಲ್ಲಿ ನಿರ್ಮಾಣವಾಗಿದ್ದ ಮೈಸೂರು–ಮಾನಂದವಾಡಿ ಮುಖ್ಯರಸ್ತೆ ಕೆಲವು ಭಾಗಗಳಲ್ಲಿ ಸಂಪೂರ್ಣ ಹದಗೆಟ್ಟು, ವಾಹನ ಸಂಚಾರಕ್ಕೆ ತೊಂದರೆಯಾಗಿತ್ತು. ಈ ರಸ್ತೆ ಕೇರಳಕ್ಕೆ ತೆರಳುವ ಮುಖ್ಯ ರಸ್ತೆಯಾಗಿದ್ದು, ಅಲ್ಲದೇ ತಾಲೂಕಿನ ಸಫಾರಿ ಕೇಂದ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ನನ್ನ ಮನವಿಗೆ ಸ್ಪಂದಿಸಿ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು. ಈ ಹಿಂದೆ ರಸ್ತೆ ನಿರ್ಮಾಣದ ವೇಳೆ ಕೆಲವು ಭಾಗದಲ್ಲಿ ಐದೂವರೆ ಮೀಟರ್ ರಸ್ತೆ ನಿರ್ಮಾಣವಾಗಿ ಸಂಚಾರಕ್ಕೆ ತೊಡಕುಂಟಾಗಿತ್ತು. ಇದೀಗ ಸುಗಮ ಸಂಚಾರಕ್ಕೆ ರಸ್ತೆ ಏಳು ಮೀಟರ್ ಅಗಲೀಕರಣ ಮಾಡಲಾಗುತ್ತಿದೆ ಎಂದರು.

ಹ್ಯಾಂಡ್‌ಪೋಸ್ಟ್‌ನಿಂದ ದಮ್ಮನಕಟ್ಟೆ ಸಫಾರಿ ಕೇಂದ್ರದವರೆಗಿನ ಮುಖ್ಯರಸ್ತೆ ಗುಂಡಿ ಮುಚ್ಚಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದ ಅವರು, ಮೈಸೂರು–ಮಾನಂದವಾಡಿ ರಸ್ತೆ ರಾಜ್ಯ ಹೆದ್ದಾರಿಯಿಂದ, ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿದೆ. ಈ ಸಂಬಂಧ ಸರ್ವೇ ನಡೆದಿದ್ದು, ಮೈಸೂರು–ಮಾನಂದವಾಡಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ 925 ಕೋಟಿ ರೂ. ಡಿಪಿಆರ್ ಸಿದ್ಧಪಡಿಸಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಉದ್ಬೂರು ಗೇಟ್‌ನಿಂದ ಬಾವಲಿ ಗೇಟ್‌ವರೆಗೆ ಅರಣ್ಯ ಇರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಗೂ ಮನವಿ ಸಲ್ಲಿಸಲಾಗಿದ್ದು, ರಸ್ತೆ ಅಭಿವೃದ್ಧಿ ಸಂಪೂರ್ಣ ಸಹಕಾರ ನೀಡುವುದಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ ಎಂದರು.

ಈ ವೇಳೆ ಕುರುಬ ಸಮಾಜದ ತಾಲೂಕು ಅಧ್ಯಕ್ಷ ಆನಂದ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜ್, ರಾಜನಾಯಕ, ಕೆ.ಟಿ.ಚಿಕ್ಕನಾಯಕ, ಮಹೇಶ್ ನಾಯಕ, ಸೋಮಚಾರಿ, ಗಣೇಶ್, ನಾಗೇಶ್, ಎಇಇ ಬೋರಯ್ಯ, ಸಹಾಯಕ ಇಂಜಿನಿಯರ್ ಹರೀಶ್, ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ನ.4– ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ನ.5 ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ತಾಲೂಕಿನ ಕಂಚಮಳ್ಳಿ, ಹಂಪಾಪುರ, ಮಾದಾಪುರ, ಕೆ.ಬೆಳ್ತೂರು, ಮನಗನಹಳ್ಳಿ, ಬಾಚೇಗೌಡನಹಳ್ಳಿ ವ್ಯಾಪ್ತಿಯ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ತಳಮಟ್ಟದಿಂದ ಪಕ್ಷ ಸಂಘಟಿಸಿ ಚುನಾವಣೆಗೆ ಸಿದ್ಧರಾಗಿ: ಧ್ರುವ



ನಂಜನಗೂಡು, ನ.4– ಕಾರ್ಯಕರ್ತರು ಭಿನ್ನಾಭಿಪ್ರಾಯ, ಸ್ವಾರ್ಥ ಬಿಟ್ಟು ತಳಮಟ್ಟದಿಂದ ಪಕ್ಷ ಸಂಘಟಿಸಿ ಚುನಾವಣೆಗೆ ಸಿದ್ಧರಾಗಿ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ ನೀಡಿದರು.

ತಾಲೂಕಿನ ಕತ್ವಾಡಿಪುರ, ಕನಕನಗರ, ಕಲ್ಲಹಳ್ಳಿ, ಹಂಡುವಿನಹಳ್ಳಿ, ಬ್ಯಾಳಾರು, ಗಾಂಧಿ ಗ್ರಾಮ, ಮೊಬ್ಬಳ್ಳಿ, ಹೆಚ್.ಕೊಂಗಳ್ಳಿ, ದೇವಿರಮ್ಮನಹಳ್ಳಿ, ಏಚಗುಂಡ್ಲ, ಮಸಗೆ, ಬ್ಯಾಳರುಹುಂಡಿ ಗ್ರಾಮಗಳಲ್ಲಿ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದಲ್ಲಿ ಕಾರ್ಯಕರ್ತರ ಸಭೆ ನಡೆಸಿ ಅವರು ಮಾತನಾಡಿದರು. ಅವಧಿಗೂ ಮುನ್ನಾ ಚುನಾವಣೆ ಘೋಷಣೆಯಾಗುವ ಸಂಭವವಿದ್ದು, ಬಿಜೆಪಿ ಒಡೆದು ಆಳುವ ನೀತಿ ಅನುಸರಿಸುವ ಮೂಲಕ ಮತದಾರರನ್ನು ಜಾತಿ, ಧರ್ಮದ ಹೆಸರಿನಲ್ಲಿ ಮೋಡಿ ಮಾಡಿ ಮತ ಸೆಳೆಯಲು ಮುಂದಾಗುತ್ತಾರೆ. ಯಾರೂ ಕೂಡ ಬಿಜೆಪಿಗರ ಮಾತಿಗೆ ಮರುಳಾಗಬಾರದು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಬಡವರ ಪರ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಕೊಟ್ಟ 150 ಭರವಸೆಗಳನ್ನು ಈಡೇರಿಸಿ ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಅಭಿವೃದ್ಧಿ ಕೆಲಸ ಮಾಡಿದ್ದರೂ ಸಹ ಅವರು ಚುನಾವಣೆಯಲ್ಲಿ ಪರಾಜಿತರಾಗಬೇಕಾಯಿತು. ಅಭಿವೃದ್ಧಿ ಕೆಲಸ ಮಾಡಿದವರು ಸೋಲುವುದು ದುರಂತ. ಕಾರ್ಯಕರ್ತರು ಈ ಬಾರಿ ಹಾಗಾಗದಂತೆ ಎಚ್ಚರಿಕೆಯಿಂದ ಕೆಲಸ ನಿರ್ವಹಿಸಿ, ಪಕ್ಷ ತಾಯಿ ಸಮಾನ. ಸರ್ವ ಜನಾಂಗಕ್ಕೂ ಸಾಮಾಜಿಕ ನ್ಯಾಯ ಒದಗಿಸಿದ ಪಕ್ಷ ಕಾಂಗ್ರೆಸ್. ಆದ್ದರಿಂದ ಕಾಂಗ್ರೆಸ್ ಸರ್ಕಾರದಲ್ಲಿ ಆದ ಅಭಿವೃದ್ಧಿ ಮತ್ತು ಬಿಜೆಪಿ ಸರ್ಕಾರದ ವೈಫಲ್ಯ, ಭ್ರಷ್ಟಾಚಾರ ಜನರಿಗೆ ತಿಳಿಸುವ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಿ ಚುನಾವಣೆಗೆ ಈಗಿನಿಂದಲೇ ಸಿದ್ಧರಾಗಿ ಎಂದು ಕರೆ ನೀಡಿದರು.

ಬಿಜೆಪಿ ಸರ್ಕಾರ ಎಸ್‌ಇಪಿ ಅನುದಾನ ಕಡಿತಗೊಳಿಸಿದೆ. ಜೊತೆಗೆ ಮೀಸಲಿಟ್ಟಿದ್ದ 27 ಸಾವಿರ ಕೋಟಿ ಅನುದಾನದಲ್ಲಿ 9 ಸಾವಿರ ಕೋಟಿ ಹಣವನ್ನು ಬೇರೆ ಯೋಜನೆಗಳಿಗೆ ನಿಯೋಜಿಸುವ ಮೂಲಕ ವಂಚನೆ ಎಸಗಿದೆ. ಆದರೆ ದಲಿತ ಸಮುದಾಯದ ಉದ್ಧಾರದ ಬಗ್ಗೆ ಮಾತನಾಡುತ್ತಿದೆ. ಈ ಸರ್ಕಾರಕ್ಕೆ ನೈತಿಕತೆ ಇದೆಯೇ? ಅಲ್ಲದೆ ಎಸ್ಸಿ, ಎಸ್ಟಿ, ಹಿಂದುಳಿದ ಸಮಾವೇಶವೆಂದು ಶೋಷಿತ ಸಮುದಾಯವನ್ನು ಒಡೆದು ಆಳುವ ಕೆಲಸ ಮಾಡುತ್ತಿದೆ ಟೀಕಾಪ್ರಹಾರ ನಡೆಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಮುಖಂಡರಾದ ಮಹದೇವು, ನಾಗರಾಜಯ್ಯ, ಶ್ರೀನಿವಾಸಮೂರ್ತಿ, ಕುಳ್ಳಯ್ಯ, ರಾಜೇಶ್, ಡಿ.ಆರ್.ರಾಜು, ಜಯಮಾಲಾ, ರಂಗದಾಸ್, ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಬನಾರಸ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ರಾ.7.20ಕ್ಕೆ, ಡಬ್ಬಲ್ XL (ಹಿಂ): ರಾ.10ಕ್ಕೆ.

ಸ್ಕ್ರೀನ್ 3 ಮಿಲಿ (ಹಿಂ): ಬೆ.10.45ಕ್ಕೆ, ರಾ.7.20ಕ್ಕೆ, ನಿಥಮ್ ಒರು ವಾನಂ (ತ): ಮ.1.15ಕ್ಕೆ, ಕಾಫಿ ವಿತ್ ಕಾದಲ್ (ತ): ಸಂ.4.25ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.9.50ಕ್ಕೆ.

ಸ್ಕ್ರೀನ್ 4 ಗಂಧದಗುಡಿ (ಕ): ಬೆ.11.10ಕ್ಕೆ, ಮ.1.30ಕ್ಕೆ, ಮ.3.40ಕ್ಕೆ, ಸಂ.5.40ಕ್ಕೆ, ರಾ.7.45ಕ್ಕೆ, ಸಟರ್‌ಡೇ ನೈಟ್ (ಮ): ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಗಂಧದ ಗುಡಿ (ಕ): ಬೆ.9.45ಕ್ಕೆ, ಮ.2.55ಕ್ಕೆ, ರಾ.8.10ಕ್ಕೆ, ಕಾಂತಾರ (ಕ): ಬೆ.11.50ಕ್ಕೆ, ಸಂ.5.05ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 2 ಫೋನ್ ಭೂತ್ (ಹಿಂ): ಬೆ.9.15ಕ್ಕೆ, ರಾ.10.30ಕ್ಕೆ, ಗಂಧದ ಗುಡಿ (ಕ): ಮ.12ಕ್ಕೆ, ಸಂ.5.15ಕ್ಕೆ, ಸೆಪ್ಟೆಂಬರ್ 13 (ಕ): ಮ.2.10ಕ್ಕೆ, ಕಾಂತಾರ (ಕ): ರಾ.7.25ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.9.20ಕ್ಕೆ, ಮ.2.35ಕ್ಕೆ, ಲೈಲ್ ಲೈಲ್ ಕ್ರೊಕಡೈಲ್ (ಇಂ): ಮ.12.20ಕ್ಕೆ, ರಾ.7.50ಕ್ಕೆ, ನೀ ಮಾಯೆಯೊಳಗೊ ಮಾಯೆ ನಿನ್ನೊಳಗೊ (ಕ): ಸಂ.5.40ಕ್ಕೆ, ಕಾಫಿ ವಿತ್ ಕಾದಲ್ (ತ): ರಾ.10.10ಕ್ಕೆ.

ಸ್ಕ್ರೀನ್ 4 ಬನಾರಸ್ (ಕ): ಬೆ.10.10ಕ್ಕೆ, ಸಂ.6.55ಕ್ಕೆ, ಕಂಬ್ಳಿಹುಳ (ಕ): ಮ.1.10ಕ್ಕೆ, ಫೋನ್ ಭೂತ್ (ಹಿಂ): ಸಂ.4.05ಕ್ಕೆ, ಊರ್ವಶಿವೋ ರಾಕ್ಷಸಿವೋ (ತೆ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಕಂಬ್ಳಿಹುಳ (ಕ): ಬೆ.10.30ಕ್ಕೆ, ನಹೀ ಜ್ಞಾನೇನ ಸದೃಶಂ (ಕ): ಮ.1.15ಕ್ಕೆ, ನೀ ಮಾಯೆಯೊಳಗೊ ಮಾಹೆ ನಿನ್ನೊಳಗೊ (ಕ): ಸಂ.4.10ಕ್ಕೆ, ಫೋನ್ ಭೂತ್ (ಹಿಂ): ಸಂ.6.30ಕ್ಕೆ, ಸರ್ದಾರ್ (ತ): ರಾ.9.15ಕ್ಕೆ.

ಸ್ಕ್ರೀನ್ 2 ಕಾಂತಾರ (ಕ): ಬೆ.10.30ಕ್ಕೆ, ಮ.1.30ಕ್ಕೆ, ಸಂ.4.30ಕ್ಕೆ, ರಾ.7.54ಕ್ಕೆ.

ಸ್ಕ್ರೀನ್ 3 ಗಂಧದ ಗುಡಿ (ಕ): ಬೆ.10.45ಕ್ಕೆ, ಮ.1ಕ್ಕೆ, ಸಂ.4ಕ್ಕೆ, ಸಂ.6.15ಕ್ಕೆ, ರಾ.9.15ಕ್ಕೆ.

ಸ್ಕ್ರೀನ್ 4 ಬನಾರಸ್ (ಕ): ಬೆ.10.30ಕ್ಕೆ, ಸಂ.4.15ಕ್ಕೆ, ಫೋನ್ ಭೂತ್ (ಹಿಂ): ಮ.1.30ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಕಾಂತಾರ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬನಾರಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಾಂತಾರ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಬನಾರಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸರ್ದಾರ್ (ತ)	4 ಪ್ರದರ್ಶನಗಳು
ಪ್ರಭಾ	
ಊರ್ವಶಿವೋ ರಾಕ್ಷಸಿವೋ (ತೆ)	4 ಪ್ರದರ್ಶನಗಳು

ನಿಂಗರಾಜ ಮಲ್ಲಾಡಿ ಪುತ್ರ ಆತ್ಮಹತ್ಯೆ



ಹುಣಸೂರು, ನ.4– ಯುವಕನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಟ್ಟೆಮಳಲವಾಡಿ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ. ತಾಲೂಕು ದಸಂಸ ಸಂಚಾಲಕ ಹಾಗೂ ಕಟ್ಟೆಮಳಲವಾಡಿ ಗ್ರಾಮದ ನಿವಾಸಿ ನಿಂಗರಾಜ್ ಮಲ್ಲಾಡಿ ಅವರ ಪುತ್ರ ರಾಹುಲ್ ಮಲ್ಲಾಡಿ(21) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ನಗರದ ಡಿ.ದೇವರಾಜ ಅರಸು ಪದವಿ ಕಾಲೇಜಿನಲ್ಲಿ ದ್ವಿತೀಯ ಬಿಎ ವ್ಯಾಸಂಗ ಮಾಡುತ್ತಿದ್ದ. ಕಳೆದ 2 ವರ್ಷದಿಂದ ರಾಹುಲ್ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ ಎನ್ನಲಾಗಿದೆ. ಇದಕ್ಕೆ ಆಕೆ ಸಮ್ಮತಿಸದ ಹಿನ್ನಲೆಯಲ್ಲಿ ಮನನೊಂದು ಗುರುವಾರ ರಾತ್ರಿ ತಮ್ಮ ಜಮೀನಿನಲ್ಲಿದ್ದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ರಾತ್ರಿ 10.30 ಆದರೂ ರಾಹುಲ್ ಮನೆಗೆ ಬಾರದ ಹಿನ್ನೆಲೆಯಲ್ಲಿ ಕುಟುಂಬದ ಸದಸ್ಯರು ಎಲ್ಲಾ ಕಡೆ ಹುಡುಕಿ ಜಮೀನಿಗೆ ತೆರಳಿ ನೋಡಲಾಗಿ ಪ್ರಕರಣ ಬೆಳಕಿಗೆ ಬಂದಿದೆ.

ಸರ್ಕಾರಿ ನೌಕರರ ಸಮಸ್ಯೆಗೆ ಸ್ಪಂದಿಸದಿದ್ದರೆ

ಸರ್ಕಾರಿ ಕಚೇರಿಗಳಲ್ಲಿ ಏಕಕಾಲಕ್ಕೆ ಸಾರ್ವಜನಿಕ ಸೇವೆ ಬಂದ್

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಎಸ್.ಷಡಕ್ಷರಿ ಎಚ್ಚರಿಕೆ



ತಿ.ನರಸೀಪುರ ನ.4– ರಾಜ್ಯದಲ್ಲಿ ಸರ್ಕಾರಿ ನೌಕರರ ಸಂಘಟನೆ ಬಲಗೊಳ್ಳುತ್ತಿದ್ದು, ನೌಕರರು ತಮ್ಮ ಬೇಡಿಕೆ ಈಡೇರಿಕೆಗೆ ಪ್ರತಿಭಟನಾ ಜಾಥಾ ನಡೆಸಲ್ಲ. ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ ಕೂರಲ್ಲ. ಸರ್ಕಾರ ನೌಕರರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಸರ್ಕಾರಿ ಕಚೇರಿಗಳಲ್ಲಿ ಏಕಕಾಲಕ್ಕೆ ಸಾರ್ವಜನಿಕ ಸೇವೆ ಬಂದ್ ಮಾಡಲಾಗುವುದು ಎಂದು ರಾಜ್ಯಾಧ್ಯಕ್ಷ ಎಸ್.ಷಡಕ್ಷರಿ ಎಚ್ಚರಿಕೆ ನೀಡಿದರು.

ಪಟ್ಟಣದ ಶ್ರೀಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ನೌಕರರ ಸಮ್ಮೇಳನ, ಪ್ರತಿಭಾ ಪುರಸ್ಕಾರ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನೌಕರರ ಸಂಘ ಹೋರಾಟಕ್ಕೂ ಸಿದ್ಧ. ಸರ್ಕಾರದೊಡನೆ ಮಾತುಕತೆಗೂ ಬದ್ಧ. ಮುಂಬರುವ ಫೆಬ್ರವರಿ ಅಥವಾ ಮಾರ್ಚ್‌ನೊಳಗೆ ಸರ್ಕಾರ ವೇತನ ಆಯೋಗ ಜಾರಿಗೊಳಿಸಲಿದ್ದು, ನಂತರ ಎನ್‌ಪಿಎಸ್ ನೌಕರರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹೋರಾಟ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಸರ್ಕಾರಿ ನೌಕರರು ಆರ್ಥಿಕ ಸಂಕಷ್ಟ ಅಥವಾ ಅನಾರೋಗ್ಯಕ್ಕೆ ಒಳಗಾಗಿ ಬೇರೊಬ್ಬರ ಮುಂದೆ ಮಂಡಿಯೂರಬಾರದು ಎಂಬ ಉದ್ದೇಶದಿಂದ 25 ವರ್ಷಗಳಲ್ಲಿ ಆಗದಿದ್ದ 25 ಆದೇಶಗಳನ್ನು ಸರ್ಕಾರದಿಂದ ಹೊರಡಿಸಿದ್ದೇವೆ. 1256 ಕಾಯಿಲೆಗಳಿಗೆ ಯಾವುದೇ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲು 1500 ಕೋಟಿ ವೆಚ್ಚದ ವಿನೂತನ ಯೋಜನೆಗೆ ಸದ್ಯದಲ್ಲೇ ಸರ್ಕಾರ ಚಾಲನೆ ನೀಡಲಿದೆ. ನೋಂದಾಯಿತ ಕಾರ್ಡ್ ಪಡೆದ ನೌಕರರು 50 ಲಕ್ಷದಿಂದ ಕೋಟಿ ರೂ.ವರೆಗೆ ಉಚಿತ ಚಿಕಿತ್ಸೆ ಪಡೆಯಬಹುದು. ನೌಕರರ ಹಿತ ಕಾಪಾಡಲು ಬದ್ಧನಾಗಿದ್ದೇನೆ. ಎರಡೂವರೆ ವರ್ಷಗಳ ಅಧಿಕಾರವಧಿಯಲ್ಲಿ ನೌಕರರ ಹಿತ ಕಾಪಾಡಿದ್ದೇನೆ ಎಂದರು. ಪಟ್ಟಣದಲ್ಲಿ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸರ್ಕಾರಿ ನೌಕರರ ಭವನಕ್ಕೆ ಸ್ಥಳೀಯ ಶಾಸಕರಿಬ್ಬರಿಂದ ತಲಾ 20 ಲಕ್ಷ ರೂ. ಅನುದಾನ ಪಡೆಯೋಣ. ಇನ್ನುಳಿದ 60 ಲಕ್ಷ ರೂ.ಗಳನ್ನು ವಿವಿಧ ಮೂಲಗಳಿಂದ ಕಲ್ಪಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ರೇವಣ್ಣ, ನೇತ್ರ ತಜ್ಞೆ ಡಾ.ಭಾರತಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕ ಎನ್.ಪಂಚಲಿಂಗಪ್ಪ, ಹಿರಿಯ ನ್ಯಾಯಾಧೀಶೆ ಎಂ.ಎಸ್.ಅಂಬಿಕಾ, ಕೃಷಿ ಅಧಿಕಾರಿ ಎನ್.ವಿಜಯಲಕ್ಷ್ಮಿ, ಸಾಕ್ಷರತಾ ಇಲಾಖೆ ಪ್ರಥಮ ದರ್ಜೆ ಸಹಾಯಕ ಚೆಲುವರಾಜು, ಗ್ರಾಮ ಲೆಕ್ಕಿಗರಾದ ಅನಿತಾ, ತಾಪಂ ಬೆರಳಚ್ಚುಗಾರರಾದ ಸುಗುಣ, ಪಶು ಸಂಗೋಪನೆ ಇಲಾಖೆಯ ದ್ವಿತೀಯ ದರ್ಜೆ ಸಹಾಯಕಿ ಸೌಮ್ಯ, ಹಿಂದುಳಿದ ವರ್ಗಗಳ ಇಲಾಖೆಯ ಎಂ.ಈಶ್ವರ್ ಅವರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಲಾಯಿತು. ಗಡಿಯಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿದ ಆಲಗೂಡು ಗ್ರಾಮದ ಎಂ.ಶಿವಕುಮಾರ್, ಸೋಸಲೆ ಗ್ರಾಮದ ಪ್ರಶಾಂತ್ ಹಾಗೂ ವಿಶ್ವ ಕೌಸಲ್ಯ ವಿಜೇತ, ಬಿ.ಸಿ.ಹಳ್ಳಿ ಗ್ರಾಮದ ಎಸ್.ಎಂ ಕಾರ್ತಿಕ್‌ಗೌಡ ಅವರನ್ನು ಸನ್ಮಾನಿಸಲಾಯಿತು. ಕಳೆದ 3 ಶೈಕ್ಷಣಿಕ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳಿಗೆ ಪುರಸ್ಕಾರ ನೀಡಲಾಯಿತು.

ಸಮಾರಂಭಕ್ಕೂ ಮುನ್ನಾ ಸರ್ಕಾರಿ ನೌಕರರ ಸಂಘದ ಬಳಿ ಭವನ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು. ಅಲ್ಲದೇ ಆಧುನಿಕರಣಗೊಂಡಿದ್ದ ಕಚೇರಿ ಉದ್ಘಾಟಿಸಲಾಯಿತು. ನಂತರ ರಾಜ್ಯಾಧ್ಯಕ್ಷ ಎಸ್.ಷಡಕ್ಷರಿ ಅವರನ್ನು ತೆರೆದ ಬೆಳ್ಳಿ ವಾಹನದಲ್ಲಿ ವೇದಿಕೆ ಬಳಿಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ ಮಾತನಾಡಿದರು.

ಪುರಸಭೆ ಅಧ್ಯಕ್ಷ ಎಸ್.ಮದನ್‌ರಾಜು, ಉಪಾಧ್ಯಕ್ಷೆ ನಾಗರತ್ನ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಕಾರ್ಯದರ್ಶಿ ಸುಬ್ರಹ್ಮಣ್ಯ, ತಾಪಂ ಆಡಳಿತಾಧಿಕಾರಿ ಬಿ.ಎಂ.ಸವಿತಾ, ಇಓ ಸಿ.ಕೃಷ್ಣ, ತಹಸೀಲ್ದಾರ್ ಸಿ.ಜಿ.ಗೀತಾ, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಆರ್.ಮಣಿಕಂಠರಾಜ್ ಗೌಡ, ಉಪನ್ಯಾಸಕರಾದ ಕುಮಾರಸ್ವಾಮಿ, ಸುರೇಶ್, ಸಂಘದ ಗೌರವಾಧ್ಯಕ್ಷ ನಾಗರಾಜು, ರಾಜ್ಯ ಪರಿಷತ್ ಸದಸ್ಯ ಆರ್.ಉಮೇಶ್ ಕುಮಾರ್, ಖಜಾಂಚಿ ಹೆಚ್.ಎನ್.ವೆಂಕಟಶೆಟ್ಟಿ, ಉಪಾಧ್ಯಕ್ಷ ಎ.ಗಜೇಂದ್ರ ಎಸ್.ಎಂ. ಮಂಜುನಾಥ್, ಎಸ್.ರಾಜೇಶ್, ಜೇಮ್ಸ್ ಲ್ಯಾಜರಸ್, ಜಂಟಿ ಕಾರ್ಯದರ್ಶಿಗಳಾದ ಹೆಚ್.ನಾಗರಾಜು, ಎನ್.ರಂಗಸ್ವಾಮಿ, ಕೆಂಡಗಣ್ಣಸ್ವಾಮಿ, ಸಂಘಟನಾ ಕಾರ್ಯದರ್ಶಿಗಳಾದ ಎಸ್.ನಾಗೇಶ್, ಶೋಭಾ, ಬಸಮ್ಮಣ್ಣ, ಲೆಕ್ಕ ಪರಿಶೋಧಕ ಚೆಲುವರಾಜು, ಸಾಂಖ್ಯಿಕ ಕಾರ್ಯದರ್ಶಿ ಎಸ್.ಟಿ.ಪ್ರಕಾಶ್, ನಿರ್ದೇಶಕರಾದ ಪ್ರಭುರಾಜ್, ನಾಗ, ಹೆಚ್.ಡಿ.ಮಾದಪ್ಪ, ಪುಟ್ಟಸ್ವಾಮಿ, ಬಿ.ಪುಟ್ಟರಾಜು, ಪರಶಿವಮೂರ್ತಿ, ಪಿ.ಎಸ್.ಸಂದೇಶ, ಟಿ.ಪಿ.ನಾಗೇಂದ್ರ, ಶಿವಮಲ್ಲಪ್ಪ, ಎಂ. ಬಸವನಾಯಕ, ನಾಗು, ಶೋಭಾ, ಎನ್.ರೇವಣ್ಣ, ಆರ್.ಶ್ರೀಕಂಠಯ್ಯ, ಪ್ರಭಾಕರ್, ಎನ್.ನರಸಮ್ಮ ಹಾಗೂ ತಾಲೂಕಿನ ಸರ್ಕಾರಿ ನೌಕರರಿದ್ದರು.

ಕಾರ್ಯಾಂಗ ಕ್ರಿಯಾಶೀಲವಾದಷ್ಟು ಶಾಸಕಾಂಗದ ಹೊರೆ ತಗ್ಗಲಿದೆ

ತಿ.ನರಸೀಪುರ: ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಪ್ರಜಾಪ್ರಭುತ್ವ ವ್ಯವಸ್ಥೆಯ ಜೀವಾಳವಾಗಿದ್ದು, ಜನರ ಸಂಪರ್ಕಕ್ಕೆ ಅಧಿಕಾರಿಗಳು ನೇರವಾಗಿ ಸಿಗುವುದರಿಂದ ಕಾರ್ಯಾಂಗ ಹೆಚ್ಚು ಕ್ರಿಯಾಶೀಲವಾದಷ್ಟು ಶಾಸಕಾಂಗದ ಜನಪ್ರತಿನಿಧಿಗಳ ಮೇಲಿನ ಹೊರೆ ತಗ್ಗಿಸಬಹುದು ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನಪ್ರತಿನಿಧಿಗಳಾಗಿ ಆಯ್ಕೆಯಾಗಲು 5 ವರ್ಷಗಳಿಗೊಮ್ಮೆ ನಾವು ಜನರ ಬಳಿ ಹೋಗಬೇಕು. ಶಿಕ್ಷಣ ಜ್ಞಾನದ ಮೇಲೆ ವಿವಿಧ ಹುದ್ದೆಗಳಿಗೆ ನಿಯೋಜನೆಗೊಳ್ಳುವ ಸರ್ಕಾರಿ ನೌಕರರು ಮೂರೂವರೆ ದಶಕಗಳ ಕಾಲ ಸೇವೆ ಸಲ್ಲಿಸಬಹುದು. ಸರ್ಕಾರದ ಯೋಜನೆಗಳ ಅನುಷ್ಠಾನ ಪ್ರತಿಯೊಬ್ಬ ಅಧಿಕಾರಿ ಹಾಗೂ ನೌಕರರ ಜವಾಬ್ದಾರಿಯಾಗಿದೆ. ಆಡಳಿತ ವ್ಯವಸ್ಥೆ ಹಿನ್ನಲೆಯಲ್ಲಿ ಕಾರ್ಯಾಂಗ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು ಎಂದರು.


ಸನ್ಮಾನ್ಯ ಬಿ.ಜೆ.ಪಿ. ರಾಜ್ಯ ಉಪಾಧ್ಯಕ್ಷರು
ಯುವಕರ ಕಣ್ಮಣಿ
ಶ್ರೀ ಬಿ.ವೈ.ವಿಜಯೇಂದ್ರ
ಯಡಿಯೂರಪ್ಪ
ಅವರಿಗೆ
ಜನುಮದಿನದ ಹಾರ್ದಿಕ
ಶುಭಾಶಯಗಳು
ದಿನಾಂಕ : 05-11-2022
ಇವರಿಗೆ ತಾಯಿ ಚಾಮುಂಡೇಶ್ವರಿ
ಆಯಸ್ಸು, ಆರೋಗ್ಯ, ಅಧಿಕಾರ,
ಐಶ್ವರ್ಯ, ಸಕಲ ಸಂಪತ್ತು
ನೀಡಲೆಂದು ಹಾರೈಸುತ್ತೇವೆ
ಎಲ್.ಆರ್.ಮಹದೇವಸ್ವಾಮಿ
ಎಂ.ಬಿ.ಎ.
ನಿಕಟಪೂರ್ವ ಅಧ್ಯಕ್ಷರು,
ಕರ್ನಾಟಕ ಮೃಗಾಲಯ ಪ್ರಾಧಿಕಾರ
ಹಾಗೂ
ಮೈಸೂರು ತಾಲ್ಲೂಕು ಪಂಚಾಯಿತಿ
ಮಾಜಿ ಅಧ್ಯಕ್ಷರು